ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 21 ಮೇ 18-24, 1998 ರೂ. 2.00

ನಮ್ಮ ವಿಜ್ಞಾನಿ-ತಂತ್ರಜ್ಞರ ಹೆಮ್ಮೆಯ ಸಾಧನೆ:

ಆಳುವ ಮಂದಿಯ ಪಟ್ಟಭದ್ರ ಸ್ವಾರ್ಥಕ್ಕಾಗಿ ಬಳಕೆ

ಮೇ 11ರಿಂದ 13 ರವರೆಗೆ ಭಾರತ ನಡೆಸಿದ ಐದು ಪರಮಾಣು ಸಾಧನ ಪರೀಕ್ಷಣೆಗಳು ಇಡೀ ವಿಶ್ವದ ಗಮನ ಸೆಳೆದಿವೆ. ಅಮೇರಿಕಾ ಮತ್ತು ಅದರ ಸಾಮ್ರಾಜ್ಯಶಾಹಿ ಮಿತ್ರರು ಎಂದಿನ ತಮ್ಮ ಮಿಲಿಟರಿ ಪೇದೆಯ ಪಾತ್ರವಹಿಸುತ್ತಾ ಬೆದರಿಕೆಯೊಡ್ಡುತ್ತಿದ್ದಾರೆ. ಇನ್ನೊಂದೆಡೆ ಭಾರತದ ಬಗ್ಗೆ ಸದಭಿಪ್ರಾಯ ಉಳ್ಳವರೂ ಈ ಸ್ಫೋಟದಿಂದ, ಅದಕ್ಕೂ ಹೆಚ್ಚಾಗಿ ಅದರ ಬೆನ್ನಹಿಂದೆ ಸರಕಾರೀ ಮುಖಂಡರ, ಆಳುವ ಪಕ್ಷದ ಮುಖಂಡರ ಹೇಳಿಕೆಗಳಿಂದ ಆತಂಕಿತರಾಗಿದ್ದಾರೆ. ಕಳೆದ ಐವತ್ತು ವರ್ಷಗಳ ನಮ್ಮ ವೈಜ್ಞಾನಿಕ ರಂಗದ ಸ್ವಾವಲಂಬೀ ಬೆಳವಣಿಗೆಯ, ನಮ್ಮ ವಿಜ್ಞಾನಿಗಳ, ತಂತ್ರಜ್ಞರ ಹೆಮ್ಮೆಯ ಸಾಧನೆಯನ್ನು ಆಳುವ ಸರಕಾರ ತನ್ನ ಸಂಕುಚಿತ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವ ರೀತಿ ನಿಜವಾದ ದೇಶಪ್ರೇಮಿಗಳಲ್ಲಿ ಹಾಗೂ ಶಾಂತಿ ಪ್ರೇಮಿಗಳಲ್ಲಿ ಆತಂಕ ಉಂಟು ಮಾಡುತ್ತಿದೆ. ಕಳೆದ ಕೆಲವು ದಿನಗಳಿಂದ ರಕ್ಷಣಾ ಮಂತ್ರಿಗಳ ಚೀಣಾ-ವಿರೋಧಿ ಅರಚಾಟ ಬಾಂಬ್ ತಯಾರಿಸಲಿಕ್ಕಾಗಿಯೇ ಏನೋ ಎಂಬ ಸಂದೇಹವನ್ನು ಇದು ಬಲಪಡಿಸುತ್ತಿದೆ; ನಮ್ಮ ಉಪಖಂಡದಲ್ಲಿ ನೆರೆದೇಶಗಳೊಂದಿಗೆ ಸಂಬಂಧಗಳ ಸುಧಾರಣೆಯಲ್ಲಿ ಭಾರತದ ಪ್ರಯತ್ನದಿಂದಾಗಿ ಆಗಿರುವ ಮುನ್ನಡೆಗಳಿಗೆ ತಣ್ಣೀರೆರಚುತ್ತದೆಯೇ ಎಂಬ ಭಯವುಂಟಾಗಿದೆ.

ಸಿಪಿಐ(ಎಂ), ಸಿ.ಪಿ.ಐ. ಹಾಗೂ ಇತರ ಎಡ ಪಕ್ಷಗಳು ನಮ್ಮ ರಕ್ಷಣಾ ಸಿದ್ಧತೆಯನ್ನು ಸಡಿಲಗೊಳಿಸದೆ ನಮ್ಮ ಸ್ವತಂತ್ರ ಪರಮಾಣು ಸಾಮರ್ಥ್ಯವನ್ನು ಬೆಳೆಸಿಕೊಳ್ಳುವ ಅಗತ್ಯದ ಬಗ್ಗೆ ಸದಾ ಒತ್ತಿಹೇಳುತ್ತಾ ಬಂದಿವೆ. ಅದೇ ವೇಳೆಗೆ ಭಾರತ ಸತತವಾಗಿ ವಿಶ್ವಾದ್ಯಂತ ಪರಮಾಣು ನಿಶ್ಯಸ್ತ್ರೀಕರಣವನ್ನು ಪ್ರತಿಪಾದಿ ಸುತ್ತಾ, ಪರಮಾಣು ಶಸ್ತ್ರಾಸ್ತ್ರಗಳನ್ನು ಮೊದಲು ಬಳಕೆ ಮಾಡಬಾರದೆಂದು ಹಾಗೂ ನಮ್ಮ ಉಪಖಂಡದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ತಡೆಯಬೇಕೆಂದು ಪ್ರತಿಪಾದಿಸುತ್ತಾ ಬಂದಿದೆ.

ಅತ್ತ ಬಿ.ಜೆ.ಪಿ. ಪರಮಾಣು ಆಯ್ಕೆಯನ್ನು ಚಲಾಯಿಸುವ ಅಂದರೆ ಪರಮಾಣು ಶಸ್ತ್ರಾಸ್ತ್ರಗಳನ್ನು ಹೊಂದುವ ಬಗ್ಗೆ ಮಾತನಾಡುತ್ತಾ ಬಂದಿದೆ. ಇತ್ತೀಚಿನ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಅದು ಮತ್ತೆ ಒತ್ತಿ ಹೇಳಿತ್ತು. ವಾಜಪೇಯಿ ಸರಕಾರದ ರಚನೆಯ ನಂತರ ಈ ಆಯ್ಕೆಯನ್ನು ನಮ್ಮ ಸಾಮರಿಕ ಸನ್ನಿವೇಶದ ಪರಾಮರ್ಶೆಯ ನಂತರವೇ ಚಲಾಯಿಸ ಲಾಗುವುದು ಎಂದಿತ್ತು. ಆದರೆ ಈಗ ಇಂತಹ ಒಂದು ಪುನರ್ವಿಮರ್ಶೆ ಮಾಡದೆಯೇ ಪರಮಾಣು ಪರೀಕ್ಷೆಯನ್ನು ನಡೆಸಲಾಗಿದೆ. ಇದರ ರಾಷ್ಟ್ರೀಯ, ಅಂತರಾಷ್ಟ್ರೀಯ ಪರಿಣಾಮಗಳೇನು ಎಂದು ವಿವರಿಸದೆಯೇ ಇಂತಹ ನಿರ್ಣಯವನ್ನು ಏಕೆ ಕೈಗೊಳ್ಳಲಾಯಿತು ಎಂಬುದನ್ನೂ ಸರಕಾರ ವಿವರಿಸಿಲ್ಲ ಎಂದು ಸಿ.ಪಿ.ಐ.(ಎಂ) ಹಾಗೂ ಸಿ.ಪಿ.ಐ. ಜಂಟಿ ಹೇಳಿಕೆಯೊಂದರಲ್ಲಿ ಖೇದ ವ್ಯಕ್ತಪಡಿಸಿವೆ.

ವಾಜಪೇಯಿ ಸರಕಾರ ಪರಮಾಣು ನಿಶ್ಯಸ್ತ್ರೀಕರಣಕ್ಕೆ ಸಂಬಂಧಪಟ್ಟಂತೆ ಇಂದಿನವರೆಗೆ ಭಾರತ ಅನುಸರಿಸಿಕೊಂಡು ಬಂದ ಧೋರಣೆಗಳನ್ನೇ ಮುಂದುವರೆಸ ಬೇಕು, ದಕ್ಷಿಣಾ ಏಶ್ಯಾದಲ್ಲಿ ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ತಪ್ಪಿಸಿ ಈ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆ ಏರ್ಪಡುವಂತಾಗಬೇಕು ಎಂದು ಸಿ.ಪಿ. ಐ.(ಎಂ) ಹಾಗೂ ಸಿ.ಪಿ.ಐ. ಆಶಿಸಿವೆ.

ಏಕೆ ಈ ತರಾತುರಿ?

1974ರಲ್ಲಿ ಮೊದಲ ಬಾರಿ ಪರಮಾಣು ಪರೀಕ್ಷಣೆ ನಡೆಸಿದಂದಿನಿಂದ ನಾವು ನಮ್ಮ ಸ್ವತಂತ್ರ ಸಾಮರ್ಥ್ಯವನ್ನು ಕಟ್ಟಿ ಬೆಳೆಸುತ್ತೇವೆ, ಆದರೆ ನಮ್ಮ ಆಯ್ಕೆಯನ್ನು ತೆರೆದಿಡುತ್ತೇವೆ ಎಂಬ ನಿಲುವು ತಳೆದಿದ್ದೆವು. ಒಂದು ಪರಮಾಣು ಬೆದರಿಕೆ ಕಂಡ ಕ್ಷಣವೇ, ಈ ಆಯ್ಕೆಯನ್ನು ಆರಿಸಿ ಕೊಂಡು ಪರಮಾಣು ಶಸ್ತ್ರ ಸನ್ನದ್ಧರಾಗುವ ಸಾಮರ್ಥ್ಯ ಹಾಗೂ ಸಿದ್ಧತೆ ನಮ್ಮ ವಿಜ್ಞಾನಿಗಳಲ್ಲಿದೆ ಎಂಬ ಆತ್ಮವಿಶ್ವಾಸದಿಂದ ಆ ನಿಲುವು ತಳೆದಿದ್ದೆವು. ಇಂತಹ ನಿಲುವಿನ ಮೂಲಕ ಸಾರ್ವತ್ರಿಕ ನಿಶ್ಯಸ್ತ್ರೀಕರಣಕ್ಕೆ ಕಟಿಬದ್ಧ ಎಂಬ ಸಂಗತಿಯನ್ನು ಭಾರತ ವಿಶ್ವಕ್ಕೆ ಸಾರಿತ್ತು. ಅದೇ ವೇಳೆಗೆ ಸಮಗ್ರ ಪರೀಕ್ಷಾ ನಿಷೇಧ ಸಂಧಿ (ಸಿ.ಟಿ.ಬಿ.ಟಿ.) ಹಾಗೂ ಅಣ್ವಸ್ತ್ರ ಪ್ರಸರಣ ನಿಷೇಧ ಸಂಧಿ(ಎನ್.ಪಿ.ಟಿ.) ಯಂತಹ ಸಂಧಿಗಳು ಈಗಾಗಲೇ ಪರಮಾಣು ಶಕ್ತಿಯಾಗಿರುವ ದೇಶದ ಪರವಾಗಿ ಪಕ್ಷಪಾತ ತೋರುವುದರಿಂದ ಅದಕ್ಕೆ ಸಹಿ ಹಾಕಲು ಭಾರತ ನಿರಾಕರಿಸುತ್ತಾ ಬಂದಿದೆ. ಸಾಮ್ರಾಜ್ಯಶಾಹಿ ಒತ್ತಡ ಗಳನ್ನು ದೃಢವಾಗಿ ಪ್ರತಿರೋಧಿಸಿ ಈ ದೇಶದ ಹಿತಾಸಕ್ತಿಗಳಿಗೆ ಅನುಗುಣವಾಗಿ ನಿರ್ಧರಿಸುವ ಸಾರ್ವಭೌಮ ಹಕ್ಕನ್ನು ಅದು ರಕ್ಷಿಸಿಕೊಂಡು ಬಂದಿದೆ.

ಈ ಉಪಖಂಡದಲ್ಲಿ ತಾನು ಪರಮಾಣು ಶಸ್ತ್ರಾಸ್ತ್ರ ಪೈಪೋಟಿಯನ್ನು ಆರಂಭಿಸುವುದಿಲ್ಲ ಎಂಬುದನ್ನು ಕೂಡಾ ಈ ಧೋರಣೆಯ ಮೂಲಕ ಭಾರತ ಸ್ಪಷ್ಟವಾಗಿ ಸಾರಿತ್ತು. ಇಂತಹ ಪೈಪೋಟಿ ನಮ್ಮ ಉಪಖಂಡ ಹಾಗೂ ದಕ್ಷಿಣ ಏಶ್ಯಾಕ್ಕೆ ಮಾರಕ ಎಂಬ ಅರಿವು ಇದಕ್ಕೆ ಕಾರಣ. ತನ್ನ ರಾಷ್ಟ್ರೀಯ ಭದ್ರತೆಗೆ ಸಂಚಕಾರ ಬರುವಂತಹ ಒಂದು ಸನ್ನಿವೇಶದಲ್ಲಿ ಮಾತ್ರವೇ ಪರಮಾಣು ಶಸ್ತ್ರಾಸ್ತ್ರ ಹೊಂದುವ ತನ್ನ ಆಯ್ಕೆಯನ್ನು ಚಲಾಯಿಸುತ್ತದೆ, ಈ ಮೂಲಕ ತನ್ನ ರಾಷ್ಟ್ರೀಯ ಸಂಪನ್ಮೂಲದ ಬಹುಭಾಗವನ್ನು ದೇಶದ ಬಡತನ, ಹಸಿವು, ನಿರುದ್ಯೋಗವನ್ನು ನಿರ್ಮೂಲ ಮಾಡಲು ವಿನಿಯೋಗಿಸಲು ಸಾಧ್ಯವಾಗುತ್ತದೆ ಎಂಬ ಕಾರಣಕ್ಕಾಗಿ ಈ ನಿಲುವು ತಳೆಯಲಾಗಿತ್ತು.


ಆದರೆ ಈಗ ಬಿ.ಜೆ.ಪಿ. ಅಧಿಕಾರಕ್ಕೆ ಬಂದ ಕೂಡಲೇ ಕೂದಲೆಳೆಯಷ್ಟೂ ಬಹುಮತವಿಲ್ಲದ ಒಂದು ಸರಕಾರ ತಾನೇ ಹೇಳಿರುವಂತೆ ಒಂದು ಸಮಗ್ರ ಪುನರ್ವಿಮರ್ಶೆ ಕೂಡಾ ನಡೆಸದೆ ಏಕಪಕ್ಷೀಯವಾಗಿ ಈ ಪರೀಕ್ಷೆಗಳನ್ನು ನಡೆಸಿದೆ, ಇದರ ಜತೆಗೆ 'ತ್ರಿಶೂಲ್' ಕ್ಷಿಪಣಿಯ ಯಶಸ್ವಿ ಉಡಾವಣೆ ಭಾರತದ ಬಳಿಯೀಗ ಬಾಂಬು ಇದೆ, ಅದನ್ನು ಒಯ್ಯಬಲ್ಲ ಕ್ಷಿಪಣಿಯೂ ಇದೆ ಎಂದು ಸಾರಿ ಹೇಳಿದಂತಾಗಿದೆ.

ಜನಗಳಿಗೆ ಉತ್ತರ ನೀಡಲಿ

ಬಿ.ಜೆ.ಪಿ. ಸರಕಾರದ ಈ ಕ್ರಮದ ನಿಜ ಉದ್ದೇಶ ಭಾರತದ ಭದ್ರತೆಯಲ್ಲ ಎಂಬುದು ಸ್ಪಷ್ಟ. ದೇಶದಲ್ಲಿ ಒಂದು ಭಾವೋದ್ರೇಕ ಎಬ್ಬಿಸಿ ಒಂದು ಕಡೆ ಜನಗಳ ಗಮನವನ್ನು ತಮ್ಮ ಹದಗೆಡುತ್ತಿರುವ ಜೀವನ ಪರಿಸ್ಥಿತಿಗಳಿಂದ ಬೇರೆಕಡೆ ಸೆಳೆಯುವುದು ಇದರ ಒಂದು ಉದ್ದೇಶವಾದರೆ, ಇನ್ನೊಂದು ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಿ ಅದಕ್ಕೆ ಬಲವಾದ ಕೋಮು ಬಣ್ಣ ಕೊಡುವುದು ಅವರ ಇನ್ನೊಂದು ಉದ್ದೇಶ. ಪರಮಾಣು ಸಾಧನ ಪರೀಕ್ಷಣೆ ನಡೆಸುವ ದಿನವೇ ಆರ್.ಎಸ್.ಎಸ್. ನ ಮುಖವಾಣಿ 'ಆರ್ಗನೈಸರ್'ನ ಬಾಂಬ್ ತಯಾರಿಸಬೇಕೆಂದು ವಿಶೇಷವಾಗಿ ಪ್ರತಿಪಾದಿಸುವ ಸಂಚಿಕೆ ಪ್ರಕಟವಾಗಿರುವುದು ಇದಕ್ಕೊಂದು ಸಾಕ್ಷಿ. ದೇಶದ ಸಂಪನ್ಮೂಲಗಳನ್ನು ಮೂಲಭೂತ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಕೆಲಸಗಳಿಂದ ಬಾಂಬ್ ತಯಾರಿಕೆಯೆಡೆಗೆ ತಿರುಗಿಸಿರಬೇಕಾದರೆ ಅದಕ್ಕೆ ಸಾಕಷ್ಟು ಬಲವಾದ ಕಾರಣಗಳಿರಬೇಕು. ದೇಶದ ಭದ್ರತೆಗೆ ಅಂತಹ ಬಲವಾದ ಬೆದರಿಕೆಯಿದ್ದಿರಬೇಕು. ಈ ಎರಡು ತಿಂಗಳಲ್ಲಿ ಬಿ.ಜೆ.ಪಿ. ಅಧಿಕಾರಕ್ಕೆ ಬಂದ ಮೇಲೆ ಅಂತಹದ್ದೇನು ಆಗಿದೆ ಎಂದು ಬಿ.ಜೆ.ಪಿ. ಭಾರತೀಯ ಜನಗಳಿಗೆ ಉತ್ತರಿಸಬೇಕಾಗಿದೆ ಎಂದು ಸಿ.ಪಿ.ಐ.(ಎಂ) ಕೇಂದ್ರ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' ಹೇಳಿದೆ.

ಬಿ.ಜೆ.ಪಿ. ಈಗ ಈ ಪರೀಕ್ಷಾ ಸ್ಫೋಟಗಳ ಹೆಸರಲ್ಲಿ ಬಡಿದೆಬ್ಬಿಸುತ್ತಿರುವ ರಾಷ್ಟ್ರೀಯ ದುರಭಿಮಾನದ ಹಿಂದೆ ಅಡಗಿರುವ ಅದರ ಆಟವನ್ನು, ಅಧಿಕಾರದಲ್ಲಿ ಈ ಮೂಲಕ ಬೇರು ಬಿಟ್ಟು ತನ್ನ ಕೋಮುವಾದಿ ಅಜೆಂಡಾವನ್ನು ಜ್ಯಾರಿಗೆ ತರುವ ಪ್ರಯತ್ನವನ್ನು ಎಲ್ಲಾ ದೇಶಪ್ರೇಮಿಗಳು ಅರಿಯಬೇಕು ಎಂದು ಅದು ಕರೆ ನೀಡಿದೆ.

ಭಾರತದ ದೇಶಪ್ರೇಮಿ ಜಾತ್ಯಾತೀತ ಪ್ರಜಾಪ್ರಭುತ್ವ ಶಕ್ತಿಗಳು ದೇಶ ಸಾರ್ವತ್ರಿಕ ಪರಮಾಣು ನಿಶಸ್ತ್ರೀಕರಣಕ್ಕೆ ತನ್ನ ಬದ್ಧತೆಯನ್ನು ಮುಂದುವರೆಸಿ, ತಾನೇ ಮೊದಲು ಪರಮಾಣು ಶಸ್ತ್ರಾಸ್ತ್ರ ಬಳಸದೆ ನಮ್ಮ ಉಪಖಂಡದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯನ್ನು ಬೆಳಸದೆ, ಹಾಗೂ ಈ ಪ್ರದೇಶದಲ್ಲಿ, ದಕ್ಷಿಣ ಏಶ್ಯಾದಲ್ಲಿ ಮತ್ತು ಇಡೀ ವಿಶ್ವದಲ್ಲಿ ಚಿರಸ್ಥಾಯಿ ಶಾಂತಿ ನೆಲಸುವಂತೆ ನೋಡಿಕೊಳ್ಳಬೇಕು ಎಂದಿರುವ ಸಿ.ಪಿ.ಐ.(ಎಂ) ಇದು ಈಗ ಇನ್ನೂ ಅಗತ್ಯ, ಏಕೆಂದರೆ ಸಾಮ್ರಾಜ್ಯಶಾಹಿ ಅಸಮಾನ, ಪಕ್ಷಪಾತಪೂರ್ಣ ಸಂಧಿಗಳಿಗೆ ಸಹಿ ಹಾಕಲು ಹಾಗೂ ನಮ್ಮ ಆರ್ಥಿಕ ಸಾರ್ವಭೌಮತೆಗೆ ಸಂಚಕಾರ ತರುವ ಆರ್ಥಿಕ ಪಥ್ಯಗಳನ್ನು ಒಪ್ಪಲು ಇನ್ನಷ್ಟು ಒತ್ತಡ ಹಾಕುತ್ತದೆ ಎಂದು ಎಚ್ಚರಿಸಿದೆ.(ಪುಟ 6ನ್ನೂ ನೋಡಿ)



ಕೃಪೆ: ಪ್ರಜಾಶಕ್ತಿ ತೆಲುಗು ದೈನಿಕ

ಕಾಡು ಬರಡುಗೊಳಿಸುವ ರಾಜಕೀಯ ತಿಮಿಂಗಲಗಳು

- ಎನ್.ಕೆ.ಉಪಾಧ್ಯಾಯ

ಮಲೆನಾಡಿನಲ್ಲಿ ಪ್ರಧಾನವಾಗಿ ಚಿಕ್ಕಮಗಳೂರು, ಕೊಡಗು ಹಾಸನಗಳಲ್ಲಿ ಅರಣ್ಯ ಪ್ರದೇಶವನ್ನು ಕಾಫಿ ಪ್ಲಾಂಟರುಗಳು ಮತ್ತು ಕೃಷಿಕರು ಹಲವಾರು ವರ್ಷಗಳಿಂದಲೂ ಒತ್ತುವರಿ ಮಾಡುತ್ತಾ ಬಂದಿದ್ದಾರೆ. ಮರಗಳನ್ನು ಕಡಿಯುತ್ತಾ ಬಂದಿದ್ದಾರೆ. ಅರಣ್ಯವನ್ನು ಬರಡು ಮಾಡುತ್ತಾ ಹೊರಟಿದ್ದಾರೆ. ಅದರ ಮೂಲಕ ಧಾರಾಕಾರವಾಗಿ ಸುರಿಯ ಬೇಕಾದ ಮಳೆಗೆ ಆತಂಕ ಒಡ್ಡುತ್ತಿದ್ದಾರೆ. ಅದರ ಮೂಲಕ ಹಲವಾರು ಸಮಸ್ಯೆಗಳನ್ನು ಹುಟ್ಟು ಹಾಕುತ್ತಿದ್ದಾರೆ.


ಅರಣ್ಯ ಲೂಟಿಯನ್ನು ತಡೆಗಟ್ಟಬೇಕು, ಸಸಿಗಳನ್ನು ನೆಟ್ಟು ಅರಣ್ಯ ವಿಸ್ತಾರ ಗೊಳಿಸಬೇಕು, ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿದವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತಲೇ ಬರಲಾಗಿದೆ. ರಾಜಕೀಯ ಪ್ರಮುಖರು ಹಲವಾರು ಜನ ಈ ಒತ್ತುವರಿಯಲ್ಲಿ ಭಾಗೀದಾರರಾಗಿರುವುದರಿಂದ ದೊಡ್ಡ ಕಾಫಿ ತೋಟ ಮಾಲಕರ ಮತ್ತು ಭೂಮಾಲಕರ ಒತ್ತಡಕ್ಕೆ ಮಣಿದ ಹಿಂದಿನ ಕಾಂಗ್ರೆಸ್ ಇಂದಿನ ಜನತಾದಳ ಸರಕಾರಗಳು ಒತ್ತುವರಿದಾರರ ವಿರುದ್ಧ ಯಾವುದೇ ಕ್ರಮಕೈಗೊಳ್ಳಲು ಹಿಂದೇಟು ಹಾಕಿದೆ.

ಕಳೆದ ಡಿಸೆಂಬರ್ ತಿಂಗಳಲ್ಲಿ ಪ್ರದೇಶ ಜನತಾದಳದ ಅಧ್ಯಕ್ಷ ಆಗಿನ ಪಾರ್ಲಿಮೆಂಟ್ ಸದಸ್ಯ ಬಿ.ಎಲ್. ಶಂಕರ್ ಅವರು ಅರಣ್ಯ ಭೂಮಿಯನ್ನು ಅತಿಕ್ರಮಣ ಮಾಡಿದ ಕುರಿತು ವರದಿಗಳು ಪ್ರಕಟವಾದಾಗ ಅದನ್ನು ರಾಜಕೀಯ ದುರುದ್ದೇಶಪೂರಿತವೆಂದು ತಳ್ಳಿಹಾಕಲಾಯಿತು. ಮತ್ತಷ್ಟು ಒತ್ತಡ ಬಂದಾಗ, ಒತ್ತುವರಿ ಪ್ರದೇಶವನ್ನು ಸಕ್ರಮಗೊಳಿಸುವ ಕ್ರಮ ಕೈಗೊಳ್ಳಲಾಗು ವುದೆಂದು ಸರಕಾರ ಸಾರಿತು. ಅತಿಕ್ರಮಣದ ವಿಷಯದಲ್ಲಿ 416 ಪ್ರಕರಣಗಳನ್ನು ಪತ್ತೆ ಮಾಡಿದ್ದರು. ಅವುಗಳ ವಿರುದ್ಧ ಕ್ರಮ ಎಂಬುದಿಲ್ಲವಾಗಿದೆ.

ಈ ಒತ್ತುವರಿ ಪ್ರಕರಣ ಸುಪ್ರೀಮ್ ಕೋರ್ಟಿಗೆ ಹೋಗಿದ್ದು, ಡಿ. 5ರ ತೀರ್ಪಿನಲ್ಲಿ ಭಾರೀ ಪ್ರಮಾಣದಲ್ಲಿ ಒತ್ತುವರಿ ಮಾಡಿರುವವರ ಮೇಲೆ ಕ್ರಮ ಕೈಗೊಳ್ಳದಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿ, ಈ ಒತ್ತುವರಿಯನ್ನು ತೆರವುಗೊಳಿಸುವಲ್ಲಿ ಕರ್ನಾಟಕ ಸರಕಾರ ವಿಫಲವಾದಲ್ಲಿ ಇಡೀ ಚಿಕ್ಕಮಗಳೂರು ಜಿಲ್ಲೆಯ ಕಾಫಿ ಬೆಳೆಯುವ ಪ್ರದೇಶಕ್ಕೆ ನ್ಯಾಯಾಲಯವೇ ರಿಸೀವರರನ್ನು ನೇಮಕ ಮಾಡುವುದಾಗಿ ಎಚ್ಚರಿಕೆ ನೀಡಿರುವುದು ರಾಜ್ಯ ಸರಕಾರದ ಕಾಫೀ ಪ್ಲಾಂಟರುಗಳ ಪರ ನೀತಿಗೆ ಕಪಾಳಮೋಕ್ಷ ಮಾಡಿದಂತಾಗಿದೆ. ಕರ್ನಾಟಕ ಸೇರಿದಂತೆ ದೇಶಾದ್ಯಂತ ಮರ ಗಳನ್ನು ಕಡಿಯುವುದುನ್ನು ನಿಷೇಧಿಸಬೇಕೆಂದು ಸುಪ್ರೀಂ ಕೋರ್ಟು ಡಿಸೆಂಬರ್ 12 ರಂದೇ ತೀರ್ಪು ನೀಡಿತ್ತು. ಕರ್ನಾಟಕ ಸರಕಾರ ಬಿಟ್ಟು ಇತರ ಸರಕಾರ ಗಳು ಕೋರ್ಟಿನ ನಿರ್ಣಯ ಪಾಲಿಸಿವೆ. ಕೇಂದ್ರ ಸರಕಾರ ಅರಣ್ಯ ಪ್ರದೇಶಗಳ ಸ್ಥಿತಿಗೆ ಸಂಬಂಧಿಸಿದಂತ 1997 ರಲ್ಲಿ ಹೊರ ತಂದಿರುವ ವರದಿಯೊಂದರಲ್ಲಿ ಕರ್ನಾಟಕದ ದಟ್ಟ ಅರಣ್ಯ 1997ರಲ್ಲಿ ಐದು ಚದುರ ಕಿ.ಮಿ. ಗಳಷ್ಟು ಕಡಿಮೆಯಾಗಿರುವುದನ್ನು ಬಹಿರಂಗಪಡಿಸಿದೆ.

ಉಚ್ಚ ನ್ಯಾಯಾಲಯದ ತೀರ್ಪು, ವರದಿಗಳಲ್ಲಿಯ ಉಲ್ಲೇಖ ಜನರ ಬೊಬ್ಬಾಟಗಳಾವುದಕ್ಕೂ ಸ್ಪಂದಿಸದೆ, ಜೆ.ಹೆಚ್. ಪಟೇಲ್ ಸರಕಾರ ಕಣ್ಮುಚ್ಚಿ ಕೊಂಡಿರುವುದು ನಾಚಿಕೆಗೇಡು ಅಲ್ಲವೇ? ಇದರ ಕುರಿತೂ ಉಚ್ಚ ನ್ಯಾಯಾಲಯ ರಾಜ್ಯ ಸರಕಾರವನ್ನು ತರಾಟೆಗೆ ತೆಗೆದುಕೊಂಡಿದೆ. ಅರಣ್ಯ ಸಂರಕ್ಷಣೆ, ಅತಿಕ್ರಮಣ ತೆರವುಗೊಳಿಸುವ ಕ್ರಮ ಕೈಗೊಳ್ಳದಿರುವುದಕ್ಕೆ ತೀವ್ರ ಆತಂಕ ವ್ಯಕ್ತಪಡಿಸಿ ಸರಕಾರದ ಪ್ರಾಮಾಣಿಕತೆಯನ್ನೇ ಪ್ರಶ್ನಿಸಿದೆಯಲ್ಲದೆ, ಅರಣ್ಯ ಒತ್ತುವರಿ ಮತ್ತು ನಾಶ ಪ್ರಕರಣಗಳನ್ನು ಇನ್ನೂ ಹತ್ತಾರು ವರ್ಷ ನೆನೆಗುದಿಗೆ ಒಳಪಡಿಸಿ, ಸಣ್ಣ ಹಿಡುವಳಿದಾರರ ಹೆಸರಿನಲ್ಲಿ ಕೈಗೊಳ್ಳುವ ಕ್ರಮದ ಹಿಂದೆ ದೊಡ್ಡ ಕುಳಗಳಿಗೆ ಲಾಭ ಮಾಡಿಕೊಡುವ ಉದ್ದೇಶ ಸರಕಾರಕ್ಕಿದೆಂಬ ಅನು ಮಾನ ನ್ಯಾಯಮೂರ್ತಿಗಳಲ್ಲಿ ಮೂಡಿರುವುದು ಗಮನಿಸತಕ್ಕದ್ದು. ಅಷ್ಟೇ ಅಲ್ಲದೆ ಅರಣ್ಯ ರಕ್ಷಣೆಯ ಬಗ್ಗೆ ಸರಕಾರಕ್ಕೆ ಪ್ರಾಮಾಣಿಕವಾಗಿಯೇ ಕಳಕಳಿಯಿದಿದ್ದರೆ ಸುಮಾರು ಮೂರು ಸಾವಿರದಷ್ಟು ಮರದ ಕಾರ್ಖಾನೆಗಳಿಗೆ ಅನುಮತಿ ಕೊಟ್ಟಿರುವುದರ ಕುರಿತು ನ್ಯಾಯಮೂರ್ತಿಗಳು ಪ್ರಶ್ನಿಸಿದ್ದಾರೆ.

ಕಾಫಿ ಪ್ಲಾಂಟರ್‌ಗಳ , ಭೂಮಾಲಕರ ಕಾಡು ಆಕ್ರಮಣ ಸಮಸ್ಯೆ ಹಲವಾರು ವರ್ಷ ಗಳಿಂದಲೂ ನೆನೆಗುದಿಗೆ ಬಿದ್ದಿದೆ. ರಾಜ್ಯ ಸರಕಾರಗಳು ಸಣ್ಣ ರೈತರು ತಮ್ಮ ಬಡತನದಿಂದಾಗಿ ಜೀವನೋಪಾಯಕ್ಕೆ ಅರ್ಧ ಗುಂಟೆಯೋ ಒಂದು ಗುಂಟೆಯೋ ಅತಿಕ್ರಮಣ ಮಾಡಿ ತಮ್ಮ ಬಡಕುಟುಂಬದ ಹೊಟ್ಟೆ ತುಂಬಿಸಿಕೊಳ್ಳವುದನ್ನು ತಪ್ಪಿಸಲು ಅರಣ್ಯ ಅಧಿಕಾರಿಗಳು ಇಲ್ಲಸಲ್ಲದ ಕ್ರಮಗಳನ್ನು ಕೈಗೊಂಡು ಅವರನ್ನೇ ನಿರ್ಗತಿಕರನ್ನಾಗಿ ಮಾಡುತ್ತಿರುವಾಗ ದೊಡ್ಡ ತಿಮಿಂಗಲಗಳು ದೊಡ್ಡ ರೀತಿಯಲ್ಲಿಯೇ ನೂರಾರು ಎಕರೆ ಅರಣ್ಯ ಭೂಮಿಯನ್ನು ಆಕ್ರಮಿಸಿ ಅಪಾರ ಲಾಭಗಳಿಸುತ್ತಿರುವಾಗ ಅವರ ವಿರುದ್ಧ ಕ್ರಮ ಕೈಗೊಳ್ಳುವ ಧೈರ್ಯ ಜೆ.ಹೆಚ್.ಪಟೇಲ್ ಸರಕಾರಕ್ಕಿಲ್ಲದಿರುವುದು ಆ ಸರಕಾರದ ವರ್ಗ ನೀತಿಯನ್ನು ಪ್ರದರ್ಶಿಸುತ್ತದೆಯಲ್ಲವೇ? ನ್ಯಾಯಾಲಯ ಹೇಳಿದಂತೆ ಜೆ.ಹೆಚ್. ಪಟೇಲ್ ಸರಕಾರ ಆಕ್ರಮಿತ ಅರಣ್ಯ ಭೂಮಿಯನ್ನು ತೆರವು ಮಾಡಲಿಕ್ಕೆ ಸಾಮರ್ಥ್ಯ ತೋರಿಸಬೇಕು.




ಭಾರತೀಯ ವಿಮೋಚನಾಸಮರ


ಸುಮಾರು ಎರಡು ಶತಮಾನಗಳ (೧೭೫೭ -೧೯೪೭) ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಪೋರ್ಚುಗೀಸರು 1510 ರಲ್ಲಿ ಗೋವಾದ ಮೇಲೆ ತಮ್ಮ ಆಳ್ವಿಕೆ ಸ್ಥಾಪಿಸಿ ಕ್ರಮೇಣ ತಮ್ಮ ಸಾಮ್ರಾಜ್ಯ ವಿಸ್ತರಿಸಲು ಪ್ರಯತ್ನಿಸಿದರು. ಆದರೆ ಕೊನೆಗೆ ಬ್ರಿಟಿಶರ ಕೈ ಮೇಲಾಗಿ ಯುರೋಪಿನ ಈ ಹಿಂದುಳಿದ ದೇಶ, ಕೇವಲ ಐದು ಸ್ಥಳಗಳಿಗೆ ಸೀಮಿತವಾಯಿತು - ಗೋವಾ, ದಮನ್, ದಿಯು, ದಾದ್ರ ಹಾಗೂ ನಗರ್-ಹವೇಲಿ.

1895-99 ರ ಅವಧಿಯಲ್ಲಿ ಪೋರ್ಚುಗೀಸ್ ಆಳ್ವಿಕೆಯ ವಿರುದ್ಧ ಮೊದಲು ದಂಗೆಯೆದ್ದ **ದಾದಾ ರಾಣೆ**ಯನ್ನು ಆಫ್ರಿಕಾದಲ್ಲಿನ ಪೋರ್ಚುಗೀಸರ ವಸಾಹತು ಮೊಜಾಂಬಿಕ್‌ಗೆ ಗಡೀಪಾರು ಮಾಡಲಾಯಿತು. 1928 ರಿಂದ 1974 ಪೋರ್ಚುಗಲ್ ಅತ್ಯಂತ ದುಷ್ಟ ಫ್ಯಾಸಿಸ್ಟ್ ಸರ್ವಾಧಿಕಾರಿ ಸಾಲಾಝಾರ್‌ನ ಆಳ್ವಿಕೆಯಲ್ಲಿತ್ತು. ಭಾರತದಲ್ಲಿ ಸೇರಿದಂತೆ ಅದರ ವಸಾಹತುಗಳಲ್ಲಿನ ಬಂಡಾಯಗಳನ್ನು ನಿರ್ದಯವಾಗಿ ಆತ ಹತ್ತಿಕ್ಕುತ್ತಿದ್ದ.



ಗೋವಾ ಸ್ವಾತಂತ್ರ್ಯ ಹೋರಾಟದ ಪಿತನೆನಿಸಿದ **ಟ್ರಿಸ್ಟನ್ ಬ್ರಗಾಂಝಾ ಕುನ್ಹಾ** 1928 ರಲ್ಲಿ ಗೋವಾ ವಿಮೋಚನೆ ಹಾಗೂ ಅದನ್ನು ಭಾರತದೊಂದಿಗೆ ವಿಲೀನಗೊಳಿಸುವ ನಿರ್ದಿಷ್ಟ ಉದ್ದೇಶದಿಂದ ಗೋವಾ ಕಾಂಗ್ರೆಸ್ ಸಮಿತಿ ಸ್ಥಾಪಿಸಿದರು. ಅಲ್ಲಿ ಸಭೆ, ಮತಪ್ರದರ್ಶನಗಳು ಪ್ರತಿಬಂಧಿತ 'ವಾಗಿದ್ದವು. **ಬ್ರಗಾಂಝಾ ಕುನ್ಹಾ** ಹಾಗೂ ಮತ್ತಿತರ ಮುಖಂಡರನ್ನು ಬಂಧಿಸಿ ಪೋರ್ಚುಗಲ್ಲಿಗೂ ಅದರ ಆಫ್ರಿಕನ್ ವಸಾಹತುಗಳಿಗೂ ಕಳಿಸಲಾಯಿತು. ಬ್ರಗಾಂಝಾರನ್ನು ಪೋರ್ಚುಗಲ್‌ನ ರಾಜಧಾನಿ ಲಿಸ್ಬನ್‌ಗೊಯ್ದು ನಂತರ ಬಿಡುಗಡೆ ಮಾಡಲಾಯಿತು. ಆದರೆ ಗೋವಾಕ್ಕೆ ಹಿಂದಿರುಗಲು ಬಿಡಲಿಲ್ಲ. ಪೋರ್ಚುಗಲ್‌ನಿಂದ ತಲೆ ಮರೆಸಿ ತಪ್ಪಿಸಿಕೊಂಡ ಅವರು ಗೋವಾ ತಲುಪಿ 'ಗೋವಾ ಕಾರ್ಯಾಚರಣೆ ಸಮಿತಿ' ರಚಿಸಿದರು. ಇದರಲ್ಲಿ ಒಂದು ವಿಭಾಗ ಸಶಸ್ತ್ರ ವಿಮೋಚನಾ ದಾರಿ ಹಿಡಿಯಿತು. ಇದು ಆಝಾದ್ ಗೋಮಂತಕ್ ಪಾರ್ಟಿ ಎಂದು ಪ್ರಖ್ಯಾತವಾಯಿತು.



1954 ರಲ್ಲಿ ದಾದ್ರ ಮತ್ತು ನಗರ್-ಹವೇಲಿ ವಿಮೋಚನೆಗೊಂಡವು. ಪ್ರತಿಯಾಗಿ ಪೋರ್ಚುಗೀಸರು ಗೋವೆಯಲ್ಲಿ ದಮನ ತೀವ್ರಗೊಳಿಸಿದರು. ಹಲವರನ್ನು ಗಲ್ಲಿಗೇರಿಸಲಾಯಿತು. **ಬಾಬಾ ರಾಯ್ ಮಾಪರಿ**ಯಂತವರನ್ನು ನಿರ್ದಯವಾಗಿ ಹತ್ಯೆ ಮಾಡಲಾಯಿತು.

ಆಗಸ್ಟ್ 15, 1955 ರಿಂದ ಒಂದು ಅಹಿಂಸಾತ್ಮಕ ಸತ್ಯಾಗ್ರಹ ಆರಂಭವಾಯಿತು. ಭಾರತದ ವಿವಿಧ ಪ್ರಾಂತ್ಯಗಳಿಂದ ಬಂದ ಸತ್ಯಾಗ್ರಹಿಗಳು ಗಡಿದಾಟಿ ಗೋವಾ ಪ್ರವೇಶಿಸುತ್ತಿದ್ದಂತೆ ಪೋರ್ಚುಗೀಸರ ಗುಂಡುಗಳಿಗೆ ಬಲಿಯಾಗುತ್ತಿದ್ದರು. ಆಂಧ್ರಪ್ರದೇಶದ **ಸೀತಾರಾಂ ಸೂರಿ**, ಮಹಾರಾಷ್ಟ್ರದ **ಬಾಬುರಾವ್ ಥೋರತ್, ಎಂ.ಎನ್.ವಾಡೇಕರ್** ಮತ್ತು **ತುಲಸಿರಾಂ ಹಿರ್ವೆ**, ಮಧ್ಯ ಪ್ರಾಂತ್ಯದ **ಕಲ್ಯಾಣ್ ಶರ್ಮ** ಮತ್ತು **ಜಗನ್ಮೋಹನ್ ಚಪರಾಲ**, ಪಶ್ಚಿಮ ಬಂಗಾಲದ **ನಿತ್ಯಾನಂದ ಸಾಹಾ** ಹುತಾತ್ಮರಾದರು. ಆರ್.ಎಸ್.ಪಿ. ಮುಖಂಡ **ತ್ರಿದೀಪ್ ಚೌಧರಿ**ಯನ್ನು ಬಂಧಿಸಿ ಲಿಸ್ಬನ್‌ಗೆ ಕಳಿಸಲಾಯಿತು. 14 ತಿಂಗಳ ನಂತರವಷ್ಟೇ ಅವರ ಬಿಡುಗಡೆಯಾದದ್ದು.




ನವಂಬರ್ 2, 19 ಬ್ರಗಾಂಝಾ ಕುನ್ಹಾ ಸಾರಿದರು - "ಭಾರತ ಈಗ ಫ್ಯಾಸಿಸಂ ಎಂದರೆ ಏನು ಎಂದು ಕಂಡಿದೆ. ನಿಶ್ಶಸ್ತ್ರ ಸತ್ಯಾಗ್ರಹಿಗಳ ನಿರ್ದಯ ಹತ್ಯಾಕಾಂಡ ಭಾರತದಲ್ಲಿ ಪೋರ್ಚುಗೀಸರ ಆಳ್ವಿಕೆಯ ನಿಜ ಸ್ವರೂಪಗಳನ್ನು ನೋಡಿದೆ. ಇನ್ನು ಮುಂದೆ ಇದು ಕೇವಲ ಗೋವನ್ನರ ಸಮಸ್ಯೆಯಲ್ಲ, ಎಲ್ಲಾ ಭಾರತೀಯರ ಸಮಸ್ಯೆ"

ಹೋರಾಟ, ಚಳುವಳಿ ಮುಂದುವರೆಯಿತು. 1961 ರಲ್ಲಿ ಗೋವಾದ ವಿಮೋಚನೆಗೆ ಸೈನಿಕ ಕಾರ್ಯಾಚರಣೆ ನಡೆಸಲು ಭಾರತ ಸರ್ಕಾರ ನಿರ್ಧರಿಸಿತು. ಡಿಸೆಂಬರ್ 6 ರಂದು ಲೆಫ್ಟಿನೆಂಟ್ ಜನರಲ್ **ಜಯಂತ್ ಚೌಧುರಿ**ಯವರ ಸೇನಾಧಿಪತ್ಯದಲ್ಲಿ ಒಂದು ಮಿಲಿಟರಿ ಕಾರ್ಯಾಚರಣೆ ಆರಂಭಿಸಲಾಯಿತು. ಇದಕ್ಕೆ ಇಟ್ಟ ಹೆಸರು **ಆಪರೇಷನ್ ಬಿಜೊಯ್**. 26 ಗಂಟೆಗಳಲ್ಲೇ ಪೋರ್ಚುಗೀಸ್ ಸೇನೆ ಬೇಷರತ್ತಾಗಿ ಶರಣಾಗತವಾಯಿತು. ಕೊನೆಯ ಯುರೋಪಿಯನ್ ವಸಾಹತುಗಳಾದ ಗೋವಾ, ದಮಣ್ ಮತ್ತು ದಿವು ಕೂಡಾ ವಿಮೋಚನೆಗೊಂಡವು. ಅಲ್ಲಿಯೂ ತ್ರಿವರ್ಣ ಧ್ವಜ ಹಾರಲಾರಂಭಿಸಿತು.

(ಮುಗಿಯಿತು)



ವಿದೇಶೀ ನೇರ ಹೂಡಿಕೆಗಾಗಿ ಸ್ವದೇಶಿಯ ಸಾಷ್ಟಾಂಗ



ಜಿ.ಎಸ್.ಮಣಿ

ಉದಾರೀಕರಣದ ಕ್ರಮಗಳಿಂದಾಗಿ ದೇಶದ ಆರ್ಥಿಕವೇ ಹದಗೆಟ್ಟು ಹೋಗುತ್ತಿದ್ದು ಯಾವ ವಲಯದಲ್ಲೂ ನಿರೀಕ್ಷಿತ ಪರಿಣಾಮಗಳು ಕಾಣುತ್ತಿಲ್ಲ. ಬದಲಿಗೆ ಈ ಕ್ರಮಗಳ ಪರಿಣಾಮಗಳು ಎಂತಹವೆಂದರೆ ಅವು ನಮ್ಮನ್ನು ಹೆಚ್ಚೆಚ್ಚು ಸಾಮ್ರಾಜ್ಯಶಾಹಿಗಳ ತೆಕ್ಕೆಗೆ ತಳ್ಳುತ್ತಿವೆ. ಏಶಿಯನ್ ಕರೆನ್ಸಿ ಬಿಕಟ್ಟಿನಿಂದಾಗಿ ಇಂದು ಈಶಾನ್ಯ ಏಶಿಯಾ ದೇಶಗಳು ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕುಗಳ ಮುಂದೆ ಭಿಕ್ಷಾ ಪಾತ್ರೆ ಹಿಡಿದು ಸಲಾಮು ಹೊಡೆಯುವಂತಾಗಿದೆ.

ಭಾರತದ ಪರಿಸ್ಥಿತಿ ಅಷ್ಟೊಂದು ಕೆಟ್ಟದಾಗಿಲ್ಲದೇ ಇರಬಹುದು. ಆದರೆ ಭಾರತ ಆ ದಾರಿಯಲ್ಲಿದೆ ಎಂಬುದು ಸ್ಪಷ್ಟ. ಕಳೆದ ವರ್ಷದ 'ಕನಸಿನ ಬಜೆಟ್'ನ ನಂತರ ದೇಶದ ಆರ್ಥಿಕ ಎಡಪಕ್ಷಗಳು ಹೇಳಿದಂತೆ ಕೆಡುತ್ತಲೇ ಬಂದಿದೆ. ರಫ್ತು ಏನು ಮಾಡಿದರೂ ಏರುತ್ತಿಲ್ಲ. ಬದಲಿಗೆ ಇಳಿಮುಖವಾಗಿದೆ. ಆಮದು ಹೆಚ್ಚುತ್ತಿದೆ. ಇದರಿಂದಾಗಿ ವ್ಯಾಪಾರ ಬಾಕಿಯೂ ಹೆಚ್ಚುತ್ತಿದೆ. ಇವೆಲ್ಲ ವಕ್ಕೂ ದಿವ್ಯೌಷಧ ವಿದೇಶೀ ನೇರ ಹೂಡಿಕೆ ಎಂದು ಕೇಂದ್ರದ ಬಿ.ಜೆ.ಪಿ. ಸರ್ಕಾರ ಹೇಳುತ್ತಿದೆ. ಆದ್ದರಿಂದಲೇ ಅದು ವಿದೇಶೀ ನೇರ ಹೂಡಿಕೆಯ ಅನುಮೋದನೆಗಾಗಿಯೇ ಇರುವ 'ವಿದೇಶೀ ಹೂಡಿಕೆ ಅಭಿವೃದ್ಧಿ ಮಂಡಳಿಯ' ಹೊರತಾಗಿ ಪ್ರಧಾನ ಮಂತ್ರಿಗಳ ನೇತೃತ್ವದ ಒಂದು ಮಂತ್ರಿ ಮಂಡಳ ಸಮಿತಿಯನ್ನು ಅದು ನೇಮಿಸಿದೆ.

ಈಗ ಅದೂ ಸಾಲದೆಂಬಂತೆ ವಿದೇಶೀ ನೇರ ಹೂಡಿಕೆಯನ್ನು ಅದು ಇನ್ನೂ ಸಡಿಲಿಸಿದೆ.

ಈಗಾಗಲೇ ವಿದ್ಯುತ್ ವಲಯಕ್ಕೆ 400 ಕೋಟಿ ರೂಪಾಯಿಗಳ ವರೆಗಿನ ವಿದೇಶಿ ಹೂಡಿಕೆಯನ್ನು ರಾಜ್ಯ ಸರ್ಕಾರಗಳೇ ಅನುಮೋದಿಸಬಹುದು. ಇದೇ ರೀತಿ ಬೇರೆಲ್ಲ ವಲಯಗಳಿಗೂ ಇಂತಹದೇ ನೀತಿಯನ್ನು ಅನ್ವಯಿಸುವ ವಿಚಾರವನ್ನು ಕೇಂದ್ರ ಸರ್ಕಾರ ಮಾಡಿದೆ. ವಿದೇಶಿ ಬಂಡವಾಳ ಶೇ. 100ರಷ್ಟಿದ್ದರೂ 1500 ಕೋಟಿ ರೂಪಾಯಿಗಳವರೆಗಿನ ಹೂಡಿಕೆಯ ಅನುಮೋದನೆಯ ಅಧಿಕಾರ ವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಗವುದಂತೆ.

ಇದನ್ನು ಅಧಿಕಾರ ವಿಕೇಂದ್ರೀಕರಣ ಎಂದು ಬಿ.ಜೆ.ಪಿ. ಕರೆದುಕೊಳ್ಳುತ್ತಿದೆ. ಅದಕ್ಕೆ ವಿದೇಶೀ ಹೂಡಿಕೆ ಭಾರತದೊಳಕ್ಕೆ ಯಾವ ಉದ್ದೇಶಕ್ಕೆ ಬರಬೇಕು ಮತ್ತು ಅದು ಹೇಗೆ ನಡೆದು ಕೊಳ್ಳಬೇಕು ಎಂಬ ಬಗ್ಗೆ ನಿರ್ಬಂಧ ಗಳಿಲ್ಲದೇ ಹೋದಾಗ ಬಹುರಾಷ್ಟ್ರೀಯ ಕಂಪನಿಗಳು ಎಷ್ಟು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತವೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯವೇ. ನೌಕರರ ವೇತನ, ಹಕ್ಕುಗಳು, ಮಾಲಿನ್ಯ ನಿಯಂತ್ರಣ ಇತ್ಯಾದಿಗಳ ಬಗ್ಗೆ ಈ ಕಂಪನಿಗಳು ಎಂತಹ ಹಾನಿಕರ ನಿಲುವು ಕೈಗೊಳ್ಳುತ್ತಾರೆಂಬುದು ಅವುಗಳ ಚರಿತ್ರೆಯಿಂದಲೇ ಗೊತ್ತಾಗಿ ಬಿಡುತ್ತದೆ. ಬರೀ ಲಾಭವೊಂದೇ ಮುಖ್ಯ ಗುರಿಯಾಗಿಸಿಕೊಂಡಿರುವ ಈ ಕಂಪನಿಗಳು ಅಡೆತಡೆಗಳಿರುವಾಗಲೇ ಬೇಜಾವಾಬ್ದಾರಿಯಿಂದ ನಡೆದುಕೊಳ್ಳುತ್ತವೆ. ಹೀಗಿರುವಾಗ ಅಡೆತಡೆಗಳೇ ಇಲ್ಲದೇ ಹೋದರೆ, ಸಣ್ಣ ಸಣ್ಣ ರಾಜ್ಯ ಸರ್ಕಾರಗಳನ್ನೇ ಅಲ್ಲಾಡಿಸಬಲ್ಲ ಇವು ಎಂತಹ ಆಟಗಳನ್ನು ಬೇಕಾದರೂ ಆಡಬಹುದು.

ವಿದೇಶೀ ನೇರ ಹೂಡಿಕೆಯಿಂದ ದೇಶದ ಸ್ವಾವಲಂಬನೆಯನ್ನು ಸಾಧಿಸಲಂತೂ ಖಂಡಿತ ಸಾಧ್ಯವಿಲ್ಲ. ಬದಲಿಗೆ ದೇಶದ ಆರ್ಥಿಕಕ್ಕೆ ಅದರ ಜೊತೆಗೆ ದೇಶದ ಜನ ಸಾಮಾನ್ಯರಿಗೆ ಅಪಾರ ಪ್ರಮಾಣದ ನೋವನ್ನು ಅದು ತಂದೊಡ್ಡುತ್ತದೆ - ನಿರುದ್ಯೋಗ, ಬಡತನ ರೂಪದಲ್ಲಿ. ಇದನ್ನೇ ಬಿ.ಜೆ.ಪಿ. ಭಾಷೆಯಲ್ಲಿ ಸ್ವದೇಶೀ ಎನ್ನಲಾಗುತ್ತದೆಯೇ?

ಹೋಗಲಿವೆ - ಲಕ್ಷ ಲಕ್ಷ ಉದ್ಯೋಗಗಳು

ಇದು ನರಸಿಂಹಂ ನೇತೃತ್ವದ ಸಮಿತಿಯ ವರದಿಯ ಶಿಫಾರಸ್ಸಿನಂತೆ ಬ್ಯಾಂಕುಗಳನ್ನು ಮುಚ್ಚಿದರೆ ಬರುವ ಪರಿಸ್ಥಿತಿ. ಎನ್ರಾನ್ ನಂತಹ ಸಾವಿರಾರು ಕೋಟಿ ನೆರವು ನೀಡಬಲ್ಲ ಪ್ರಬಲ ಬ್ಯಾಂಕುಗಳನ್ನು ವಿಲೀನದ ಮೂಲಕ ಹುಟ್ಟಿ ಹಾಕುವುದು ಅವರ ಉದ್ದೇಶ. ಈ ಪ್ರಕ್ರಿಯೆಯಿಂದ ಹೊರಗುಳಿಯುವ ದುರ್ಬಲ ಬ್ಯಾಂಕುಗಳು ಕ್ರಮೇಣ ಮುಚ್ಚಿ ಹೋಗುತ್ತವೆ. ಅವುಗಳ ಉದ್ಯೋಗಿ ಗಳು ಉದ್ಯೋಗ ಕಳೆದುಕೊಳ್ಳುತ್ತಾರೆ.

ಇಷ್ಟೆಲ್ಲ ಹೇಳಿರುವ ನರಸಿಂಹಂ ಉದಾರೀಕರಣವನ್ನು ಲಂಗುಲಗಾಮಿಲ್ಲದೆ ಮಾಡಕೂಡದು - ಯಾಕೆಂದರೆ ಅಂತಹ ಉದಾರೀಕರಣ ಆರ್ಥಿಕದೊಳಗೆ ಹಣಕಾಸು ಅರಾಜಕತೆ ಉಂಟು ಮಾಡುತ್ತದೆ ಎಂದು ಸಮಿತಿಯ ವರದಿ ಹೇಳಿದೆ.

ಇದರಿಂದ ಒಂದು ಮಾತಂತೂ ಬಹಳ ಸ್ಪಷ್ಟವಿದೆ. ಅದೇನೆಂದರೆ ಹಣಕಾಸು ವಲಯದ ಉದಾರೀಕರಣದಿಂದಾಗಿ ಹಣಕಾಸು ವಲಯದಲ್ಲಿ ಅರಾಜಕತೆ ಉಂಟಾಗಿದೆ ಎಂಬುದನ್ನು ಸಮಿತಿಯೇ ಒಪ್ಪಿಕೊಂಡಿದೆ ಎಂಬುದು.

"ಸರ್ಕಾರ ವೈವಿಧ್ಯತೆಯುಳ್ಳ ಸಮರ್ಥ ಹಣಕಾಸು ವ್ಯವಸ್ಥೆಯನ್ನು ಸೃಷ್ಟಿಸಿ ಬೆಳೆಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಅದು ಹೇಳಿದೆ.

ಒಂದು ಕಡೆ ತಡೆರಹಿತ ಉದಾರೀಕರಣದ ಪರ ತಾನಿಲ್ಲ ಎಂದು ಹೇಳುತ್ತಲೇ ಉದಾರೀಕರಣದ ದೊಡ್ಡ ಮೂಟೆಯನ್ನೇ ನಮ್ಮ ದೇಶದ ಆರ್ಥಿಕದ ಮೇಲೆ ಈ ಸಮಿತಿ ಹೇರುತ್ತಿದೆ.

ಉದಾರೀಕರಣಕ್ಕೆ ಮಿತಿ ಇರಬೇಕೆಂದು ಹೇಳುತ್ತಾ, ಮಿತಿ ಮೀರಿದ ಉದಾರೀಕರಣ ಪ್ರತಿಪಾದಿಸುವುದೇ ಇವತ್ತಿನ ಫ್ಯಾಶನ್ನಿರಬಹುದೇ?

ಉದಾರೀಕರಣದಿಂದಾಗಿ ಆತ್ಮಹತ್ಯೆ ಮಾಡಿಕೊಂಡು ಸತ್ತ ಆಂಧ್ರದ ಹತ್ತಿ ರೈತರು

ರೈತರ ಆತ್ಮಹತ್ಯೆ ಪ್ರಾರಂಭವಾದದ್ದೆ ಆಂಧ್ರಪ್ರದೇಶದ ಹತ್ತಿ ರೈತರಿಂದ. ಹೀಗೆ ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಮೂಲ ಕಾರಣ? ಉದಾರೀಕರಣವೇ ಈ ಆತ್ಮಹತ್ಯೆಗಳಿಗೆ ಮೂಲ ಕಾರಣ ಎಂದು ವರದಿಯೊಂದು ತಿಳಿಸಿದೆ. ಡಾ|| ವಂದನಾ ಶಿವ ಮತ್ತು ಅಫ್ಸರ್ ಜಾಫ್ರಿ ಎಂಬಿಬ್ಬರು ವಿಜ್ಞಾನಿಗಳು ಈ ವರದಿಯ ಲೇಖಕರು.

ಅವರ ಪ್ರಕಾರ ಕೃಷಿಯನ್ನು ಹೆಚ್ಚು ದುಬಾರಿಗೊಳಿಸಿರುವುದರಿಂದ ಬಹುರಾಷ್ಟ್ರೀಯ ಕಂಪನಿಗಳು ಕೃಷಿ ವಲಯಕ್ಕೆ ಪ್ರವೇಶಿಸಿದ್ದಾರೆ. ಬೀಜ, ಕೃಷಿ ರಸಾಯನಿಕಗಳು ಅಪಾರ ಲಾಭ ತಂದು ಕೊಡುವುದರಿಂದ ಈ ಕಂಪನಿಗಳು ಈ ವಲಯಕ್ಕೆ ಬರುತ್ತಿದೆ. ಈ ಕಂಪನಿಗಳು ಮಾರಾಟ ಮಾಡುವ ಬೀಜಗಳು ಎಂತಹವೆಂದರೆ ಬೆಳೆಯುವವರು ಹೆಚ್ಚು ಪರಿಣಾಮಕಾರಿ ರೋಗನಾಶಕಗಳನ್ನು ಬಳಸುವುದು ಅನಿವಾರ್ಯ. ಹಾಗೆಯೇ ರಾಸಾಯನಿಕ ಗೊಬ್ಬರುಗಳು. ಈ ತಳಿಗಳು ರಾಸಾಯನಿಕ ಗೊಬ್ಬರಗಳಿಗೆ ಸ್ಪಂದಿಸುವುದರಿಂದ ರಾಸಾಯನಿಕಗಳ ಬಳಕೆಯನ್ನು ಹೆಚ್ಚು ಪ್ರಮಾಣದಲ್ಲಿ ಮಾಡಬೇಕಾಗುತ್ತದೆ.

ಇವೆಲ್ಲವೂ ಕೃಷಿಯನ್ನು ದುಬಾರಿಗೊಳಿಸುತ್ತಿವೆ.

ಇಷ್ಟು ಖರ್ಚಿನಲ್ಲಿ ಬೆಳೆ ಬೆಳೆದ ರೈತ ಆ ಬೆಳೆಗಳೇ ಕೈಗೆಟುಕದೇ ಹಾಳಾಗಿ ಹೋದಾಗ ಕಂಗಾಲಾಗಿ ಆತ್ಮಹತ್ಯೆಗಿಳಿಯುತ್ತಾನೆ.

ಈ ವರದಿಯ ವಿಶ್ಲೇಷಣೆಗಳೇನೇ ಇರಲಿ ದೇಶದ ಒಟ್ಟಾರೆ ಕೃಷಿ ಪದ್ಧತಿಯೇ ಅಲ್ಲೋಲ ಕಲ್ಲೋಲವಾಗುತ್ತಿರುವುದಂತೂ ನಿಜ. ಹೀಗಿರುವಾಗ ವಿವಿಧ ಬೆಳೆ ಬೆಳೆಯಲು ಲಾಭವೇ ಮೂಲ ಉದ್ದೇಶವಾದರೆ ಭಾರತದ ಆಹಾರ ಸುಭದ್ರತೆ ಮತ್ತು ಸ್ವಾವಲಂಬನೆಗೆ ಹೊಡೆತ ಬೀಳುತ್ತದೆ. ಇಂದು ಹತ್ತಿ ಬೆಳೆದು ರೈತರು ಆತ್ಮಹತ್ಯೆ ಮಾಡಿಕೊಂಡರೆ ನಾಳೆ ಮತ್ತೊಂದು ಬೆಳೆ ಬೆಳೆದ. ರೈತ ಹೀಗೆ ಇಡೀ ಕೃಷಿ ಪದ್ಧತಿಯೇ ಉದಾರೀಕರಣದಿಂದಾಗಿ ಏರುಪೇರಾಗುತ್ತಿರುವುದರಿಂದ ರೈತರು ಇಂತಹ ಕ್ರಮಗಳಿಗೆ ಮೊರೆ ಹೋಗುವಂತಾಗಿದೆ.

ಇಂದಿನ ಅವಶ್ಯಕತೆ ರೈತರೆಲ್ಲ ಒಗ್ಗಟ್ಟಾಗಿ ಉದಾರೀಕರಣದ ನೀತಿಗಳ ವಿರುದ್ಧ ಹೋರಾಡಬೇಕಾಗಿರುವುದು. ಯಾಕೆಂದರೆ ಅಂತಹ ಹೋರಾಟ ಮಾತ್ರ ದೇಶವನ್ನು ಮತ್ತು ಜನತೆಯನ್ನು ಉದಾರೀಕರಣದ ಹಿಡುಗಿನಿಂದ ರಕ್ಷಿಸಬಲ್ಲದು.

ವಿಶ್ವವ್ಯಾಪಾರ ಸಂಸ್ಥೆಯತ್ತ ಬೊಗಳುವ ಬಿ.ಜೆ.ಪಿ.

"ಬೊಗಳುವ ನಾಯಿ ಕಚ್ಚುವುದಿಲ್ಲ" ಎಂಬ ನಾಣ್ಣುಡಿಯೊಂದಿದೆ. ಬಿ.ಜೆ.ಪಿ.ಯ ನಡವಳಿಕೆ ಈ ಮಾತಿಗೆ ತಕ್ಕಂತೆ ಇದೆ. ಬಿ.ಜೆ.ಪಿ.ಯ ಹೊಸ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಖುಶಭಾವ್ ಠಾಕ್ರೆಯವರು ವಿಶ್ವವ್ಯಾಪಾರ ಸಂಸ್ಥೆಯಲ್ಲಿ ಭಾರತ ಸರ್ಕಾರ ತೀವ್ರ ಚೌಕಾಸಿ ಮಾಡಬೇಕು, ಹಿಂದಿನ ಸರಕಾರ ವಿಚಾರ ಮಾಡದೇ ಈ ಒಪ್ಪಂದಕ್ಕೆ ಸಹಿ ಹಾಕಿ ಭಾರತದ ಅಭಿವೃದ್ಧಿ ಈಗ ವಿಶ್ವವ್ಯಾಪಾರ ಸಂಸ್ಥೆಯ ಅಜೆಂಡಾಗಳಾದ 'ಆರ್ಥಿಕವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ತೆರೆಯುವುದು, ಜಾಗತೀಕರಣ, ಇತ್ಯಾದಿಗಳಲ್ಲೇ ಇದೆ ಎಂಬ ಭಾವನೆ ಹುಟ್ಟಿಸಿತು' ಎಂದಿದ್ದಾರೆ ಅವರು.

ಭಾರತದ ಆರ್ಥಿಕವನ್ನು ಹದಗೊಳಿಸುವ ಕಾರ್ಯವಾಗಬೇಕಾಗಿತ್ತು. ಆದರೆ ಹಿಂದಿನ ಸರ್ಕಾರಗಳು ಅದನ್ನು ಮಾಡಿಲ್ಲ ಎಂಬುದು ಅವರ ಅಭಿಪ್ರಾಯ.

ಮೇಲಿನ ಮಾತುಗಳಲ್ಲಿ ಸತ್ಯವಿದೆ. ಆದರೆ ಕಾಂಗ್ರೆಸ್ ಆಡಳಿತದಲ್ಲಿದ್ದಾಗಲೂ ದೊಡ್ಡ ಪಕ್ಷವೇ ಆಗಿ ವಿರೋಧಿ ಸ್ಥಾನದಲ್ಲಿದ್ದ ಬಿ.ಜೆ.ಪಿ. ಆಗ ತನ್ನ ಧ್ವನಿಯನ್ನು ಯಾಕೆ ಎತ್ತಲಿಲ್ಲ? ಹಾಗೆಯೇ ಇಂದು ಕೂಡ ವಿದೇಶೀ ನೇರ ಹೂಡಿಕೆಗಾಗಿ ಬಿ.ಜೆ.ಪಿ.ಯೇಕೆ ತಹತಹಿಸುತ್ತಿದೆ. ಅದೇ ವಿಶ್ವವ್ಯಾಪಾರ ಸಂಸ್ಥೆ ಒಡ್ಡಿರುವ ಅಜೆಂಡಾಗಳಿಗೇ ಏಕೆ ಬಿ.ಜೆ.ಪಿ. ಸರ್ಕಾರ ಜೋತು ಬಿದ್ದಿದೆ? ಈ ಪ್ರಶ್ನೆಗಳಿಗೆ ಬಿ.ಜೆ.ಪಿ. ಅಧ್ಯಕ್ಷರ ಭಾಷಣದಲ್ಲಿ ಉತ್ತರಗಳಿಲ್ಲ.

ಇದರ ಅರ್ಥವೇನು? ಹಿಂದಿನ ಸರ್ಕಾರಗಳ ನೀತಿಗಳು ಸರಿಯಿರಲಿಲ್ಲ ಎಂದು ನಾವು ಟೀಕಿಸುತ್ತೇವೆ. ಜೊತೆಗೆ ಅಂತಹುದೇ ನೀತಿಗಳನ್ನು ನಾವು ಮುಂದುವರಿಸಿಕೊಂಡು ಹೋಗುತ್ತೇವೆ ಎಂದಲ್ಲವೆ ಇದರ ಅರ್ಥ!

ಬಿ.ಜೆ.ಪಿಯ ಸ್ವದೇಶೀ ಜಾಗರಣ ಮಂಚದ ಸದಸ್ಯರನ್ನು ಖುಷಿಪಡಿಸುವ ಸಲುವಾಗಿ ಮಾತ್ರ ಆಡಿರುವ ಮಾತುಗಳಿರಬಹುದೇ ಇವು? ಹಾಗೆಯೇ ಸ್ವದೇಶೀ ಜಾಗರಣ ಮಂಚದವರು ಪಕ್ಷದ ಅಧ್ಯಕ್ಷರು ಇಂತಹ ವಿವರಣೆ ನೀಡಿದ ಕೂಡಲೇ ಅದನ್ನು ಒಪ್ಪಿಕೊಂಡು ತೃಪ್ತರಾಗಬೇಕೆಂಬ ಒಡಂಬಡಿಕೆ ಇರಬಹುದೆ ಅವರಲ್ಲಿ?

ಕರ್ನಾಟಕದಲ್ಲಿ ಕಳೆದವಾರ

ಮೇ 8, 1998

◆ ವಿಧಾನ ಪರಿಷತ್‌ನ ಏಳು ಸ್ಥಾನಗಳ ಚುನಾವಣೆಯಲ್ಲಿ ಲೋಕಶಕ್ತಿ ಅಭ್ಯರ್ಥಿಗೆ ಸೋಲು - ಜನತಾದಳಕ್ಕೆ 4, ಕಾಂಗ್ರೆಸ್‌ಗೆ 2, ಬಿ.ಜೆ.ಪಿ.ಗೆ 1 ಸ್ಥಾನ.

◆ ಮೈಸೂರು ಅರಮನೆಯನ್ನು ಸ್ವಾಧೀನ ಪಡಿಸಿಕೊಳ್ಳುವ ವಿಧೇಯಕಕ್ಕೆ ವಿಧಾನ ಪರಿಷತ್‌ನಲ್ಲಿ ಸರ್ವಾನುಮತದ ಅಂಗೀಕಾರ.

◆ 7ನೇ ತರಗತಿ ಪರೀಕ್ಷೆಗಳಲ್ಲಿ ಶೇ. 86.49 ರಷ್ಟು ಉತ್ತೀರ್ಣತೆ. ಬಾಲಕಿಯರ ತೇರ್ಗಡೆ ದರ 88.48%, ಬಾಲಕರದ್ದು 84.77%. ಗ್ರಾಮಾಂತರ ಶೇಕಡವಾರು 85.33%, ನಗರ ಪ್ರದೇಶಗಳಲ್ಲಿ 88.35%

ಮೇ 9, 1998

◆ ಗಿರೀಶ್ ಕಾಸರವಳ್ಳಿ ನಿರ್ದೇಶನದ 'ತಾಯಿ ಸಾಹೇಬ' ಚಲನಚಿತ್ರಕ್ಕೆ 'ಸ್ವರ್ಣ ಕಮಲ' ಪ್ರಶಸ್ತಿ.

◆ ಭಾಲ್ಕಿ, ಔರಾದ್ ತಾಲ್ಲೂಕುಗಳಲ್ಲಿ ಮತ್ತೆ ಮೂವರು ರೈತರ ಆತ್ಮಹತ್ಯೆ.

ಮೇ 10, 1998

◆ ಚಿತ್ರದುರ್ಗ ಜೈಲಿನಲ್ಲಿ ಪೋಲೀಸರ ಮೇಲೆ ಮತ್ತೆ ಕೈದಿಗಳ ಹಲ್ಲೆ-ಅಶ್ರುವಾಯು ಪ್ರಯೋಗ.

ಮೇ 11, 1998

◆ ದುಸ್ಥಿತಿಯಲ್ಲಿರುವ ಸರಕಾರಿ ಸಕ್ಕರೆ ಕಾರ್ಖಾನೆಗಳಿಗೆ ಹಣಕಾಸಿನ ನೆರವು ಒದಗಿಸಲು ಎರಡು ತಿಂಗಳಲ್ಲಿ 'ಸಕ್ಕರೆ ಬಾಂಡ್' ಜ್ಯಾರಿ ಮಾಡುವುದಾಗಿ ವಿಧಾನ ಪರಿಷತ್‌ನಲ್ಲಿ ಸಚಿವರು.

ಮೇ 12, 1998

◆ ಭೂ ಕಂದಾಯ ತಿದ್ದುಪಡಿ ಮಸೂದೆಗೆ ವಿಧಾನ ಸಭೆಯ ಅಂಗೀಕಾರ

◆ ಮೈಸೂರು ಅರಮನೆ ಸ್ವಾಧೀನ ಮಸೂದೆಗೆ ಬಿ.ಜೆ.ಪಿ., ಕನ್ನಡ ಚಳುವಳಿ ಪಕ್ಷದ ವಿರೋಧದ ನಡುವೆ ವಿಧಾನ ಸಭೆಯಿಂದಲೂ ಅಂಗೀಕಾರ.

ಮೇ 13, 1998

◆ ಪಿ.ಯು.ಸಿ. ಮೌಲ್ಯಮಾಪನ ಬಹಿಷ್ಕಾರ ವಾಪಸ್ಸು.

◆ ಜೂನ್ 1 ರಿಂದ ಹಾಲಿನ ಬೆಲೆ ಮತ್ತೆ 1-50 ರೂ. ಹೆಚ್ಚಿ 12 ರೂ. ಆಗುವುದೆಂದು ಪಶುಸಂಗೋಪನಾ ರಾಜ್ಯ ಸಚಿವರ ಪ್ರಕಟಣೆ

ಮೇ 14, 1998

◆ ರಾಜ್ಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಮೂವರು ಸದಸ್ಯರನ್ನು ನೇಮಕ ಮಾಡಲು ಅಧಿಕಾರ ನೀಡುವ ಮಸೂದೆಗೆ ಮತದಾನದ ನಂತರ ವಿಧಾನಸಭೆಯ ಅಂಗೀಕಾರ.

◆ ಕರ್ನಾಟಕ ಸರಕಾರ ತನ್ನ ವಿರುದ್ಧ ಮಾಡಿರುವ ಹೂಡಿರುವ ಎಲ್ಲಾ ಮೊಕದ್ದಮೆಗಳನ್ನು ತಮಿಳುನಾಡಿಗೆ ವರ್ಗಾಯಿಸಿದರೆ ಬೇಷರತ್ತಾಗಿ ಶರಣಾಗುವ ಇಂಗಿತ ಕಾಡುಗಳ್ಳ ವೀರಪ್ಪನ್‌ನಿಂದ.

ಹೋರಾಟದ ಹಾದಿಯಲ್ಲಿ ಹೋರಾಟಗಾರರಿಂದಲೇ ಸಹಕಾರಿ ಸಂಘದ ಸ್ಥಾಪನೆ

28-4-98ರಂದು ರಾಯಚೂರು ಜಿಲ್ಲೆಯ ದೇವದುರ್ಗದಲ್ಲಿ ತಾಲೂಕಾ ಮಟ್ಟದ ಸಹಕಾರಿ ಸಂಘದ ಮೊದಲ ಶೇರುದಾರರ ಮಹಾಸಭೆ ನಡೆಸುವ ಮುಖಾಂತರ "ಎ.ಕೆ. ಗೋಪಾಲನ್ ಕೃಷಿಕಾಭಿವೃದ್ಧಿ ಸಹಕಾರಿ ಸಂಘ" ಅಸ್ತಿತ್ವವನ್ನು ಪಡೆಯಿತು.

ಹದಿನಾಲ್ಕು ಜನರನ್ನು ನಿರ್ದೇಶಕ ಮಂಡಳಿಗೆ ಆಯ್ಕೆ ಮಾಡಲಾಯಿತು. 1) ಚಂದ್ರಶೇಖರ ಬಾಳೆ 2) ಮಲ್ಲಯ್ಯ ಜಾಲಹಳ್ಳಿ 3) ವೈ. ರಾಮಯ್ಯ 4) ಬಸ್ಸನಗೌಡ ದೇಸಾಯಿ 5) ಅಮರೇಶ್ ಪೂಜಾರಿ 6) ಭೀಮಯ್ಯ 7) ರಾಮಲಿಂಗಪ್ಪ ಗೌಡ 8) ಸಯ್ಯದ್ ಘೌಸ್ 9) ಸುಲೋಚನಮ್ಮ 10) ಚಂದ್ರಾಮಪ್ಪ ಗೌಡ 11) ರಂಗಪ್ಪ ಯಮನೂರ 12) ಚಂದಪ್ಪ ಬುದ್ದಿನ್ನಿ 13) ಗೋವಿಂದಪ್ಪ 14) ಡಾಕಪ್ಪ

ಕಾಂII ಚಂದ್ರಶೇಖರ ಬಾಳೆಯವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಸಹಕಾರಿ ಸಂಘ ರಚಿಸಿದ ಹಿನ್ನೆಲೆ

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬಲದಂಡೆ ಕಾಲುವೆ ಮುಖಾಂತರ ರಾಯಚೂರ ಜಿಲ್ಲೆಯ ಲಿಂಗಸಗೂರು, ದೇವದುರ್ಗ, ಹಾಗೂ ರಾಯಚೂರ ತಾಲೂಕಿನ ಆರು ಲಕ್ಷ ಎಕರೆಗೆ ನೀರೊದಗಿಸಬೇಕಾದ ಯೋಜನೆಯನ್ನು ಹಿಂದಿನ ಕಾಂಗ್ರೆಸ್ ಸರಕಾರ ಕೈಬಿಟ್ಟಿತ್ತು. ಕರ್ನಾಟಕ ಪ್ರಾಂತ ರೈತ ಸಂಘ 1982 ರಿಂದ ಈ ಯೋಜನೆಗೆ ಒತ್ತಾಯಿಸಿ ಹೋರಾಟ ನಡೆಸುತ್ತಾ 1997ರಲ್ಲಿ ವಿಶಾಲ ವಿಭಾಗದ ಜನರನ್ನೊಳಗೊಂಡ ಹೋರಾಟ ಸಮಿತಿ ನಡೆಸಿ ಬೃಹತ್ ಚಳುವಳಿಯ ಮುಖಾಂತರ ಕಾಲುವೆಗೆ ಮಂಜೂರಾತಿಯನ್ನು ಪಡೆದು ಈಗ 70 ಕಿ.ಮಿ. ಮುಖ್ಯ ಕಾಲುವೆ ಕೆಲಸ ಮುಗಿಯುವ ಹಂತದಲ್ಲಿದೆ.

ಈ ಮಹಾಯೋಜನೆಗೆ ಸಿ.ಪಿ.ಐ.(ಎಂ) ಕಾರ್ಯಕರ್ತರೇ ಕಾರಣೀ ಭೂತರಾಗಿದ್ದು, ಇಂದಿಗೂ ಹೋರಾಟ ಸಮಿತಿಯ ನಾಯಕತ್ವದಲ್ಲಿ ಸಿ.ಪಿ.ಐ.(ಎಂ) ಮುಖಂಡರಿದ್ದಾರೆ.

ಇಂತಹ ಹೋರಾಟದ ಪರಂಪರೆಯಿಂದ ಬಂದ ನೀರಾವರಿಯ ಪ್ರಯೋಜನ ಎಲ್ಲಾ ರೈತರಿಗೆ ಸಿಗುವಾಗಲೇ ಬಹು ಸಂಖ್ಯಾತರಾಗಿರುವ ಬಡ ಹಾಗೂ ಮಧ್ಯಮ ರೈತರಿಗೆ ಸಿಗಬೇಕೆನ್ನುವುದಾದರೆ ದುಡಿಯುವ ರೈತರನ್ನು ಹಾಗೂ ಕೃಷಿ ಕೂಲಿಕಾರರನ್ನು ಐಕ್ಯಗೊಳಿಸಿ ಭೂಮಿಗೆ ನೀರೊದಗಿಸುವ ಪೂರ್ವದಲ್ಲಿ, ಭೂ ಸಮಪಾತಳಿ ಮಾಡುವುದು, ಹೊರಗಾಲುವೆಗಳನ್ನು ಮಾಡುವುದು ಸೇರಿದಂತೆ ನೀರಾವರಿ ಕೃಷಿಗೆ ಬೇಕಾದ ತಿಳುವಳಿಕೆ ಹಾಗೂ ತಂತ್ರಜ್ಞಾನವನ್ನು ದುಡಿಯುವ ರೈತರಿಗೆ ಒದಗಿಸುವಂತಾಗಬೇಕಿದೆ.

ಈ ಕೆಲಸಗಳಿಗಾಗಿ ಕೋಟ್ಯಾಂತರ ಬಂಡವಾಳ ರಾಜ್ಯ ಸರಕಾರದಿಂದ ಕಾಡಾ ಮುಖಾಂತರ ಸಾಲ ರೂಪದಲ್ಲಿ ಹಾಗೂ ಸಹಾಯ ರೂಪದಲ್ಲಿ ವೆಚ್ಚ ಮಾಡಲಾಗುತ್ತಿದೆ. ಈ ಮುಂಚೆ ಕಾರ್ಯಗತಗೊಂಡ ನೀರಾವರಿ ಯೋಜನೆಯಡಿಯಲ್ಲಿ ಶ್ರೀಮಂತ ರೈತರು, ಭೂಮಾಲೀಕರು, ಗುತ್ತೇದಾರರು ಎಲ್ಲಾ ಸೌಲಭ್ಯಗಳನ್ನು ಬಳಸಿಕೊಂಡು, ಆರ್ಥಿಕವಾಗಿ ಸಬಲರಾಗಿದ್ದು, ಆಳುವ ಪಕ್ಷಗಳ ಪ್ರಬಲ ವರ್ಗವಾಗಿ ಗ್ರಾಮೀಣ ಪ್ರದೇಶದಲ್ಲಿ ಬೆಳೆದು ನಿಂತಿದ್ದಾರೆ. ಇನ್ನೊಂದೆಡೆ ದುಡಿಯುವ ರೈತರು ಸಾಲಕ್ಕೆ ಗುಯಾಗಿ ಬಡತನದಲ್ಲಿ ನರಳಿ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ.

ಈ ಅನುಭವದ ಆಧಾರದಲ್ಲಿ ಬಹು ಸಂಖ್ಯಾತ ದುಡಿಯುವ ರೈತ ಕೃಷಿಕೂಲಿಕಾರರನ್ನೇ ಸಹಕಾರಿ ರಂಗದ ಮುಖಾಂತರ ಸರಕಾರಿ ಸೌಲಭ್ಯಗಳನ್ನು ಪಡೆಯುವುದು ಹಾಗೂ ಆಳುವವರಿಂದ ಆಗುವ ಲೂಟಿಯನ್ನು ತಡೆಗಟ್ಟುವ ಮುಖಾಂತರ ಸಾಮಾನ್ಯ ರೈತರನ್ನು ಸಹಕಾರ ಚಳುವಳಿಯಲ್ಲಿ ತೊಡಗಿಸುವ ಉದ್ದೇಶದಿಂದ ಎ.ಕೆ. ಗೋಪಾಲನ್ ಕೃಷಿಕಾಭಿವೃದ್ಧಿ ಸಹಕಾರಿ ಸಂಘವನ್ನು ರಚಿಸಲಾಗಿದೆ.

ಹದಿಮೂರು ಎಕರೆಗಿಂತ ಹೆಚ್ಚಿಗೆ ಭೂಮಿಯಿರುವ ಶ್ರೀಮಂತ ಕುಟುಂಬಗಳಿಗೆ ಶೇರುದಾರರಾಗಲು ಅವಕಾಶವಿಲ್ಲದಂತೆ ಬೈಲಾ ರೂಪಿಸಲಾಗಿದ್ದು, ಹರಿಜನ, ಗಿರಿಜನರನ್ನೇ ಹೆಚ್ಚು ಆಧರಿಸಿ ದುಡಿಯುವವರನ್ನೇ ಸದಸ್ಯರನ್ನಾಗಿಸಲಾಗುತ್ತಿದೆ.

ಕಳೆದ ಹತ್ತಾರು ವರ್ಷಗಳಿಂದ ದುಡಿಯುವ ಜನಗಳಿಗಾಗಿ, ನೀರಾವರಿ ಯೋಜನೆಗಳಿಗಾಗಿ ಹೋರಾಟ ಮಾಡಿದ ಸಂಗಾತಿಗಳೇ ಡೈರೆಕ್ಟರ್‌ಗಳಾಗಿದ್ದು ಶೇರುದಾರರ ಉಪಸಮಿತಿಗಳನ್ನು ಮಾಡುವ ಮುಖಾಂತರ ಸಾಮಾನ್ಯ ದುಡಿಯುವವರನ್ನು ಸಹಕಾರಿ ಚಳುವಳಿಯ ಕುರಿತು ಅರಿಯಲು ಹಾಗೂ ಆ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವಂತೆ ಮಾಡಲಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುವ ಮುಖಾಂತರ ಪ್ರಯೋಜನ ವನ್ನು ಪಡೆಯುವಂತೆ ನಿಯಮಗಳನ್ನು ರೂಪಿಸಲಾಗುತ್ತಿದೆ. ರಾಜ್ಯದಲ್ಲಿ ಹಾಗೂ ಇತರ ರಾಜ್ಯಗಳಲ್ಲಿರುವ ಸಹಕಾರಿ ಚಳುವಳಿಯ ಅನುಭವಗಳನ್ನು ಸಂಗ್ರಹಿಸಿ, ಬಳಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ.

ರಾಜ್ಯ ಹಾಗೂ ಕೇಂದ್ರ ಸರಕಾರದ ಹಲವಾರು ಯೋಜನೆಗಳಲ್ಲಿರುವ ದೊಡ್ಡ ಮೊತ್ತದ ಹಣವನ್ನು ಒಂದೆಡೆ ಬಂಡವಾಳ ಶಾಹಿ ರಾಜಕೀಯ ಪಕ್ಷಗಳು ದುರುಪಯೋಗ ಮಾಡುತ್ತಿವೆ. ಇನ್ನೊಂದೆಡೆ ಸ್ವಯಂಸೇವಾ ಸಂಸ್ಥೆಗಳು ದುಡಿಯುವ ಜನತೆಯನ್ನು ಪ್ರಜಾಪ್ರಭುತ್ವ ಚಳುವಳಿಯಿಂದ ವಿಮುಖಗೊಳಿಸಲು ಈ ಹಣವನ್ನು ಬಳಸುತ್ತಿವೆ. ಈ ಹಿನ್ನೆಲೆಯಲ್ಲಿ ಇಂತಹ ಯೋಜನೆಯ ಹಣವನ್ನು ಸಹಕಾರಿ ಸಂಘದ ಮುಖಾಂತರ ದುಡಿಯುವವರೇ ಪಡೆಯುವಂತೆ ಮಾಡಲು ಸಂಘ ಅಧ್ಯಯನನಡೆಸಿದೆ.

500 ಶೇರುಗಳು ಈಗಾಗಲೇ ಸಂಗ್ರಹವಾಗಿದ್ದು ಮಹಿಳೆಯರು ಹೆಚ್ಚು ಆಸಕ್ತಿಯನ್ನು ಹೊಂದಿರುವುದು ಗಮನಾರ್ಹ ವಾಗಿದೆ. ಮೊದಲ ಸರ್ವಸದಸ್ಯರ ಸಭೆ ಕರೆದು ಕಮಿಟಿ ರಚಿಸುವ ಜೊತೆಗೆ, ಬಹುಸಂಖ್ಯಾತ ಬಡವರನ್ನು ಶೇರುದಾರ ರನ್ನಾಗಿ ಮಾಡಲು ಕರೆ ಕೊಡಲಾಗಿದ್ದು, ತುರ್ತಾಗಿ ಸದಸ್ಯರು ಸಂಘದಿಂದ ಏನು ಆಶಿಸುತ್ತಾರೆಂಬುದನ್ನು ಅರಿಯಲು ವಿಶೇಷ ಚರ್ಚೆಗೆ ಒಳಪಡಿಸಲಾಯಿತು. ಸರ್ವಾನು ಮತದಿಂದ ಸದಸ್ಯರು ಈ ಅಭಿಪ್ರಾಯಕ್ಕೆ ಬಂದರು. ತುರ್ತಾಗಿ ಕೃಷಿಕ ಬಜಾರ್ (ನ್ಯಾಯಬೆಲೆ ಅಂಗಡಿಯಲ್ಲಿ ಸಿಗದ ಇತರ ಎಲ್ಲಾ ವಸ್ತುಗಳನ್ನು ನ್ಯಾಯಬೆಲೆಯಲ್ಲಿ ಒದಗಿಸುವುದು) ಆರಂಭಿಸಲು ಹಾಗೂ ಉತ್ತಮ ಬೀಜ, ಕ್ರಿಮಿನಾಶಕ, ರಸಗೊಬ್ಬರ ಒದಗಿಸಲು ಸಮಯ ಹಿಡಿದರೂ ವಿಶೇಷ ವಾಗಿ ಪ್ರಯತ್ನಿಸುವುದು, ಮಹಿಳೆಯರಿಗೆ ಹೊಲಿಗೆ ಯಂತ್ರ ಹಾಗೂ ಇತರ ಗುಡಿಕೈಗಾರಿಕೆಗೆ ಆದ್ಯತೆ ಕೊಡುವುದು.

- ಚಂದ್ರಶೇಖರ ಬಾಳೆ

ಕೋಮುವಾದದ ವಿರುದ್ಧ ಹೋರಾಟ:

ಡಿ.ವೈ.ಎಫ್.ಐ. 6ನೇ ಬೆಂಗಳೂರು ಜಿಲ್ಲಾ ಸಮ್ಮೇಳನದ ನಿರ್ಧಾರ

ಬೆಂಗಳೂರು : ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಬೆಂಗಳೂರು 6ನೇ ಜಿಲ್ಲಾ ಸಮ್ಮೇಳನವು ಕೆ.ಆರ್. ಪುರಂನ ಬಿ. ನಾರಾಯಣಪುರದಲ್ಲಿ ಏಪ್ರಿಲ್ 25-26ರಂದು ಸಮಾಜದ ಪಿಡುಗು, ಯುವ ಜನರ ಜೀವಕ್ಕೆ ಕುಂದು ತರುವ ಸಮಾಜದ ಅಶಾಂತಿ ಕೂಗು, ಅಲ್ಪ ಸಂಖ್ಯಾತರ ಬದುಕಿಗೆ ಬಂದೆರಗುವ ಕೋಮುವಾದದ ವಿರುದ್ಧ ಪ್ರಬಲ ಹೋರಾಟ ನಡೆಸುವ ಪಣದೊಂದಿಗೆ ಯಶಸ್ವಿಯಾಗಿ ನೆರವೇರಿತು.

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಪ್ರಗತಿಪರ ಚಿಂತಕ, ಚಿತ್ರನಟ ಪ್ರೊ|| ಜಿ.ಕೆ. ಗೋವಿಂದ್‌ರಾವ್ ಸ್ವಾತಂತ್ರ್ಯ ಸಂಗ್ರಾಮದ ವೀರ ಸಂಗಾತಿಗಳ ಬಗ್ಗೆ ಯುವ ಜನತೆಗೆ ವಿವರಿಸಬೇಕಾಗಿದೆ. ಸ್ವಾತಂತ್ರ್ಯ ಸಂಗ್ರಾಮದ ಮಹತ್ವ ತಿಳಿಯದ ಯುವಜನತೆ ಜಾತಿ ಗಲಭೆ, ಕೋಮುವಾದಕ್ಕೆ ಬಲಿಯಾಗುತ್ತಿದ್ದಾರೆ ಎಂದರು. ಈ ದೇಶ ಪ್ರಗತಿ ಕಾಣಬೇಕಾದರೆ ಯುವಜನತೆ ದೇಶದ ಮುಖ್ಯವಾಹಿನಿಯಲ್ಲಿ ಬೆರೆಯಬೇಕೆಂದರು. ವೆಂಕಟೇಶ್ ಗೌಡ ಅಧ್ಯಕ್ಷತೆ ವಹಿಸಿದ್ದರು.

ಖ್ಯಾತ ವಕೀಲ ನಾಗಮೋಹನ್ ದಾಸ್ ಮಾತನಾಡುತ್ತಾ ದೇಶ ನಿರ್ಮಾಣಕ್ಕೆ ಜಾತಿ-ಮತಭೇದವಿಲ್ಲದೆ ಎಲ್ಲರನ್ನು ಒಗ್ಗೂಡಿಸುವ ದೊಡ್ಡ ಜವಾಬ್ದಾರಿ ಯುವಜನತೆ ಮೇಲಿದೆ ಎಂದರು. ಮೈಕೊ ಶಿವಶಂಕರ್ ಸಮ್ಮೇಳನಕ್ಕೆ ಶುಭ ಕೋರಿದರು.

ನಗರದ ಎಲ್ಲಾ ಪ್ರದೇಶಗಳಿಂದ 200 ಪ್ರತಿನಿಧಿಗಳು ಭಾಗವಹಿಸಿ, ಯುವಜನತೆಯನ್ನು ಕಾಡುತ್ತಿರುವ ನಿರುದ್ಯೋಗ, ಅನಕ್ಷರತೆ, ಭ್ರಷ್ಟಾಚಾರ, ವರದಕ್ಷಿಣೆ ಪದ್ಧತಿ, ಮಹಿಳೆಯರ ಮೇಲಿನ ದೌರ್ಜನ್ಯ, ಸರ್ಕಾರಿ ಆಸ್ಪತ್ರೆಗಳಲ್ಲಿ ಬೇರೂರಿರುವ ಭ್ರಷ್ಟಾಚಾರ, ಯುವಜನತೆಯ ಬದುಕು ನರಕಗೊಳಿಸುತ್ತಿರುವ ಮಾದಕ ವಸ್ತುಗಳು, ಬೆಲೆಏರಿಕೆ, ಸಾರಿಗೆ ಸಮಸ್ಯೆ, ನಗರ ಸಭೆಗಳು ವಿಧಿಸುತ್ತಿರುವ ಅಭಿವೃದ್ಧಿ ಶುಲ್ಕ ಮುಂತಾದವುಗಳ ಬಗ್ಗೆ ಚರ್ಚಿಸಿದರು.

ಪ್ರತಿನಿಧಿಗಳನ್ನುದ್ದೇಶಿಸಿ ರಾಜ್ಯ ಡಿ.ವೈ.ಎಫ್.ಐ. ಕಾರ್ಯದರ್ಶಿ ಗುರುಶಾಂತ್ ಮಾತನಾಡುತ್ತಾ ಡಿ.ವೈ.ಎಫ್ .ಐ. ಸಮಸ್ಯೆಗಳ ಕಾರಣಗಳನ್ನು ಹುಡುಕ ಬೇಕಾಗಿದೆ. ಸಾಮೂಹಿಕವಾಗಿ ಅಭಿವೃದ್ಧಿ ಯತ್ತ ಸಮಾಜವನ್ನು ಕೊಂಡೊಯ್ಯುವತ್ತ ಯೋಚಿಸಬೇಕಾಗಿದೆ ಎಂದರು. ಇಂದಿನ ಯುವಜನತೆ ಮುಂದಿರುವ ದೊಡ್ಡ ಸವಾಲು ಕೋಮುವಾದವನ್ನು ಬೇರು ಸಮೇತ ಕಿತ್ತೊಗೆಯ ಬೇಕಾಗಿದೆ ಎಂದರು. ಕೇಂದ್ರದ ಅಧಿಕಾರರೂಢ ಬಿ.ಜೆ.ಪಿ. ತನ್ನ ಪ್ರಣಾಳಿಕೆಯಲ್ಲಿ ವರ್ಷಕ್ಕೆ ಒಂದು ಕೋಟಿ ಉದ್ಯೋಗ ಕೊಡುವ ಭರವಸೆ ನೀಡಿ, ಈಗ ತನ್ನ ರಾಷ್ಟ್ರಸೂಚಿಯಲ್ಲಿ ಕೈ ಬಿಟ್ಟಿರುವ ಬಿ.ಜೆ.ಪಿ.ಯ ದ್ವಿಮುಖ ನೀತಿಯನ್ನು ಖಂಡಿಸಿದರು.

ಇದೇ ಸಂದರ್ಭದಲ್ಲಿ ಡಿ.ವೈ.ಎಫ್.ಐ. ರಕ್ತ ನಿಧಿ ಕೇಂದ್ರ ಉದ್ಘಾಟನೆಗೊಂಡು ಎ.ಎಂ. ರವಿಚಂದ್ರನ್ ಸಂಚಾಲಕರಾಗಿದ್ದಾರೆ. ಸಮ್ಮೇಳನದ ಸಂದರ್ಭದಲ್ಲಿ ಡಿ.ವೈ.ಎಫ್.ಐ.ನ ಹೋರಾಟ ಬಿಂಬಿಸುವ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸ ಲಾಗಿತ್ತು. ಪವಾಡಗಳ ರಹಸ್ಯ ಬಯಲು, ಭರತ ನಾಟ್ಯ, ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ನೂರಾರು ಸಾರ್ವಜನಿಕರು ಭಾಗವಹಿಸಿದ್ದ ಬೃಹತ್ ರ್‍ಯಾಲಿ ಜೊತೆಗೆ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಹೆಚ್.ಎನ್. ಗೋಪಾಲ ಗೌಡ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಗುರುಶಾಂತ್, ಕೆ. ಪ್ರಕಾಶ್ ಮಾತನಾಡಿದರು. ಜಯರಾಮು, ಜೆ.ಎಂ.ಎಸ್.ನ ಎನ್. ಪ್ರಭಾವತಿ ಸ್ವಾಗತ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಪಾಲ್ಗೊಂಡಿದ್ದರು.

ನಿರ್ಣಯಗಳು

ಉದ್ಯೋಗ ಕಡಿತದ ವಿರುದ್ಧ, ಅಭಿವೃದ್ಧಿ ಶುಲ್ಕ ಏರಿಕೆ ವಿರುದ್ಧ, ಅಶ್ಲೀಲ ಸಿನಿಮಾ ನಿಷೇದಕ್ಕೆ ಒತ್ತಾಯ ಕನ್ನಡದಲ್ಲಿ ತಂತಿ ಸಂದೇಶಕ್ಕೆ ಒತ್ತಾಯಿಸಿ, ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ ಹಲವಾರು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ನೂತನ ಸಮಿತಿ

ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು.


ಅಧ್ಯಕ್ಷರು - ಗೋಪಾಲಕೃಷ್ಣ
ಉಪಾಧ್ಯಕ್ಷರು - ಎ.ಎಂ.ರವಿಚಂದ್ರನ್, ಚೆಲುವರಾಜ್, ರಾಮಚಂದ್ರ, ಹೇಮಂತ ರಾಜ್
ಕಾರ್ಯದರ್ಶಿ - ಎನ್. ಲಕ್ಷ್ಮಣ ಕುಮಾರ್
ಸಹಕಾರ್ಯದರ್ಶಿಗಳು - ಕೆ. ಶ್ರೀನಿವಾಸ್, ಎಂ. ಲಕ್ಷ್ಮಣ್, ಟಿ.ಎಂ.ರಾಮಕೃಷ್ಣ, ಗೋಪಾಲ ಎನ್.
ಖಜಾಂಚಿ - ಹೆಚ್.ವೈ. ವೆಂಕಟರೆಡ್ಡಿ.

ರಾಷ್ಟ್ರ ಮಹಿಳಾ ಸಮ್ಮೇಳನ ತಯಾರಿಯತ್ತ

ಬೆಂಗಳೂರಿನಲ್ಲಿ ಮಹಿಳಾ ಸಮಾವೇಶ

5ನೇ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಅಖಿಲ ಭಾರತ ಸಮ್ಮೇಳನಕ್ಕೆ ಸಿದ್ಧತೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ಮೇ 8 ರಂದು ಬೆಂಗಳೂರಿನಲ್ಲಿ ಸಮಾವೇಶವೊಂದನ್ನು ಸಂಘಟಿಸಲಾಗಿತ್ತು. ಜನವಾದಿ ಮಹಿಳಾ ಸಂಘಟನೆಯ ಬೆಂಗಳೂರು ಜಿಲ್ಲಾ ಸಮಿತಿ ಸಂಘಟಿಸಿದ್ದ ಸಮಾವೇಶದಲ್ಲಿ ಸುಮಾರು 150 ಜನ ಮಹಿಳೆಯರು ಪಾಲ್ಗೊಂಡಿದ್ದರು.

ಬ್ಯಾಂಕ್, ಎಲ್.ಐ.ಸಿ., ಅಂಚೆ, ಸರ್ಕಾರಿ ನೌಕರರೂ ಸೇರಿದಂತೆ ಗಾರ್ಮೆಂಟ್ಸ್, ಬೀಡಿ, ಅಗರಬತ್ತಿ, ಎಲೆಕ್ಟ್ರಾನಿಕ್ ಮುಂತಾದ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕ್ಷೇತ್ರದ ಮಹಿಳೆಯರು, ಗೃಹಿಣಿಯರೂ ಪಾಲ್ಗೊಂಡಿದ್ದರು.



ಅಖಿಲ ಭಾರತ ಸಮ್ಮೇಳನಕ್ಕೆ ವ್ಯಾಪಕ ಸಿದ್ಧತೆಗಳನ್ನು ನಡೆಸುವ ಸಲುವಾಗಿಯೇ ಸೇರಿದ್ದ ಸಮಾವೇಶವು ಬೆಂಗಳೂರು ಜಿಲ್ಲೆಯಲ್ಲಿ ವ್ಯಾಪಕವಾದ ಪ್ರಚಾರವನ್ನು ನಡೆಸುವ ಕುರಿತು. ಮಹಿಳಾ ಸಭೆಗಳನ್ನು ನಡೆಸುವ ಕುರಿತು ಹಾಗೆಯೇ ಸದಸ್ಯತ್ವ ಘಟಕಗಳನ್ನು ರಚಿಸುವುದರ ಜೊತೆಗೆ ಸಮ್ಮೇಳನಕ್ಕೆ ಬಹುಮುಖ್ಯವಾದ ನಿಧಿ ಸಂಗ್ರಹ ಮಾಡುವ ಕುರಿತು ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡಿತು. ಜೂನ್ 11 ರಿಂದ 14ರವರೆಗೆ 4 ದಿನಗಳ ಕಾಲ ನಡೆಯುವ ಸಮ್ಮೇಳನಕ್ಕೆ ಸ್ವಯಂ ಸೇವಕರನ್ನು ಗುರುತಿಸುವ ಕೆಲಸವನ್ನು ಸಹ ಸಮಾವೇಶದಲ್ಲಿ ಮಾಡಲಾಯಿತು.

ಸಮಾವೇಶದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕೆ.ಎಸ್. ವಿಮಲ ಭಾಗವಹಿಸಿ ಸಂಘಟನೆಯ ಪರಿಚಯವನ್ನು ಮಾಡುವುದರ ಜೊತೆಗೆ ಸಮ್ಮೇಳನದ ಉದ್ದೇಶ ಮಹತ್ವ ಸಮ್ಮೇಳನದಲ್ಲಿ ಚರ್ಚಿಸುವ ವಿಷಯಗಳ ಕುರಿತು ವಿವರಿಸಿದರು. ಸಮಾವೇಶಕ್ಕೆ ಪೂರಕವಾಗಿ ಹಲವಾರು ವಿಚಾರಗಳನ್ನು ಹಂಚಿಕೊಂಡರು.

ಸಿ.ಐ.ಟಿ.ಯು. ಮುಖಂಡರು ಮತ್ತು ಸಮ್ಮೇಳನದ ಸ್ವಯಂ ಸೇವಕರ ಉಪಸಮಿತಿಯ ಸಂಚಾಲಕರೂ ಆದ ಆರ್. ಶ್ರೀನಿವಾಸ್ ದುಡಿಯುವ ಮಹಿಳೆಯರು ಸಹ ಸಮ್ಮೇಳನದ ಮಹತ್ವವನ್ನು ಅರ್ಥ ಮಾಡಿಕೊಂಡು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಪ್ರಚಾರ, ನಿಧಿ ಸಂಗ್ರಹ, ಸ್ವಯಂ ಸೇವಕರಾಗಿ ಪಾಲ್ಗೊಳ್ಳುವುದು ಮುಂತಾದ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಕರೆ ನೀಡಿದರು.

ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಹಾಗೂ ಪ್ರಚಾರ ಸಮಿತಿಯ ಸಂಚಾಲಕರು ಆದ ಕೆ. ಪ್ರಕಾಶ್ ಪಾಲ್ಗೊಂಡರು. ★ ರಾಷ್ಟ್ರೀಯ ಮಟ್ಟದ ಈ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಯಶಸ್ವಿಗೊಳಿಸಲು ಪ್ರತಿಯೊಬ್ಬರೂ ನಿರ್ದಿಷ್ಟ ಜವಾಬ್ದಾರಿಗಳೊಂದಿಗೆ ಕೆಲಸ ಮಾಡಿ ಇಡೀ ದೇಶದ ಗಮನ ಸೆಳೆಯಲು ಸೂಚಿಸಿದರು. ಇಡೀ ರಾಜ್ಯಕ್ಕೆ ಮಾತ್ರವಲ್ಲ ದೇಶದ ಮೂಲೆ ಮೂಲೆಗೂ ಸಮ್ಮೇಳನದ ಸಂದೇಶ ತಲುಪುವ ರೀತಿಯ ಪ್ರಚಾರ ನಡೆಸಲು ಕೋರಿ ರೂಪರೇಷೆಗಳನ್ನು ನೀಡಿದರು. ಸಮ್ಮೇಳನದ ಸಂದರ್ಭದಲ್ಲಿ ನಡೆಯುವ ಮಹಿಳಾ ರ್‍ಯಾಲಿಗೆ ಹೆಚ್ಚು ಜನರನ್ನು ಸಂಘಟಿಸಲು ಸಮಾವೇಶ ನಿರ್ಧರಿಸಿತು.

ಸಮಾವೇಶದ ಅಧ್ಯಕ್ಷತೆಯನ್ನು ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಸಹ ಕಾರ್ಯದರ್ಶಿ ಎನ್. ಪ್ರಭಾ ವಹಿಸಿದ್ದರು.

ಕೆ.ಆರ್. ಪುರಂನ ಗೌರಮ್ಮ ಸ್ವಾಗತಿಸಿ ಗಾರ್ಮೆಂಟ್ಸ್ ಯೂನಿಯನ್ ಮುಖಂಡರಾದ ಲೀಲಾವತಿಯವರು ವಂದನಾರ್ಪಣೆ ಮಾಡುವುದರೊಂದಿಗೆ ಸಮಾವೇಶ ಮುಕ್ತಾಯಗೊಂಡಿತು.

ಬಿಜೆಪಿ ಮತ್ತು ಸಂವಿಧಾನ ವಿಮರ್ಶೆ

ಪ್ರಕಾಶ್ ಕಾರಟ್


ಬಿಜೆಪಿ ಮತ್ತೆ-ಮತ್ತೆ ಈಗ 'ಸಮಗ್ರ ಸಂವಿಧಾನ ಪುನರ್ವಿಮರ್ಶೆ'ಯ ರಾಗ ಏಕೆ ಹಾಡುತ್ತಿದೆ? ಅಧ್ಯಕ್ಷೀಯ ಮಾದರಿಯ ಪ್ರತಿಪಾದನೆ ಏಕೆ ಮಾಡುತ್ತಿದೆ? ತನ್ನ ಸರ್ವಾಧಿಕಾರಶಾಹಿ ಹಿಂದುತ್ವದ ಕಣ್ಣೋಟವನ್ನು ನಮ್ಮ ದೇಶದ ಪ್ರಭುತ್ವದ ನೀತಿಯಾಗಿ ಮಾಡುವ ಹಿಂಬಾಗಿಲಿನ ಪ್ರಯತ್ನವಿದು, ಹೇಗೆ? ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್‌ರವರ ಈ ವಿಶ್ಲೇಷಣೆಯನ್ನು ನೋಡಿ.

ಬಿಜೆಪಿ ನೇತೃತ್ವದ ಸರಕಾರ ಸಂವಿಧಾನವನ್ನು "ಸಮಗ್ರ"ವಾಗಿ ವಿಮರ್ಶಿಸುವ ತನ್ನ ಆಶಯವನ್ನು ಪ್ರಕಟಿಸಿದೆ. ಇದಕ್ಕಾಗಿ ಒಂದು ಆಯೋಗವನ್ನು ನೇಮಿಸಲಾಗುವುದಂತೆ. ಇದು ಮಾಡಬೇಕಾದ ಬದಲಾವಣೆಗಳನ್ನು ಸೂಚಿಸುತ್ತದಂತೆ. ಇದು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ತಯಾರಿಸಿದ ರಾಷ್ಟ್ರೀಯ ಅಜೆಂಡಾದ ಒಂದು ಅತ್ಯಂತ ಮಹತ್ವದ ಹಾಗೂ ಆತಂಕಕಾರಿ ಸೂಚನೆ. ಬಿಜೆಪಿ ಮಾತ್ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಇಂತಹ ಭರವಸೆ ನೀಡಿದೆಯಷ್ಟೆ; ಅದರ ಬೇರೆ ಯಾವುದೇ ಚುನಾವಣಾ-ಪೂರ್ವ ಮಿತ್ರಪಕ್ಷ ಇಂತಹ ಭರವಸೆ ನೀಡಿರಲಿಲ್ಲ. ಆದರೂ ತನ್ನ ಪ್ರಶ್ನೆಗಳಾದ ಅಯೋಧ್ಯೆಯಲ್ಲಿ ರಾಮದೇವಸ್ಥಾನದ ನಿರ್ಮಾಣ, 370ನೇ ಕಲಮಿನ ರದ್ದತಿ ಮತ್ತು ಸಮರೂಪದ ನಾಗರಿಕ ಸಂಹಿತೆಯನ್ನು ಈ ಅಜೆಂಡಾದಲ್ಲಿ ಸೇರಿಸದ ಬಿಜೆಪಿ ಈ ಸಂವಿಧಾನ ವಿಮರ್ಶೆಯನ್ನು ಮಾತ್ರ ಅಜೆಂಡಾದಲ್ಲಿ ಸೇರಿಸಬೇಕೆಂದು ಒತ್ತಾಯಿಸಿತು.

ಅಪಾಯಕಾರಿ ಭ್ರಮೆ

ಕೆಲವು ಉದಾರ ಮನೋಭಾವದ ಸಾಂವಿಧಾನಿಕ ಮತ್ತು ಕಾನೂನು ತಜ್ಞರು ಈ ಬಿಜೆಪಿ ಪ್ರೇರಿತ ಪ್ರಯತ್ನದಲ್ಲಿ ತೊಂದರೆಯೇನು, ಸುಮಾರು 5 ದಶಕಗಳ ಅನುಭವದಿಂದ ಸಂವಿಧಾನದಲ್ಲಿ ತರಬೇಕಾದ ಬದಲಾವಣೆಗಳ ಬಗ್ಗೆ ಪರಿಶೀಲಿಸುವ ಒಂದು ಪ್ರಯತ್ನ ತಾನೇ ಎನ್ನಬಹುದು. ಇದೊಂದು ಅಪಾಯಕಾರೀ ಭ್ರಮೆ. ಬಿಜೆಪಿಯ ಈ ಪ್ರಯತ್ನ ಭಾರತೀಯ ಸಂವಿಧಾನದ ಮೇಲೆ ಧಾಳಿಯ ಒಂದು ಭಾಗ. ಏಕೆಂದರೆ ಸುಪ್ರೀಂ ಕೋರ್ಟು ಧರ್ಮನಿರಪೇಕ್ಷತೆ ಈ ಸಂವಿಧಾನದ ಒಂದು ಮೂಲಭೂತ ಲಕ್ಷಣ ಎಂದಿದೆ. ಇದು ಬಿಜೆಪಿ-ಆರ್‌ಎಸ್‌ಎಸ್ ಕೂಟ ಪ್ರಚಾರ ಮಾಡುವ ಹಿಂದುತ್ವ ತತ್ವಕ್ಕೆ ತದ್ವಿರುದ್ಧವಾದದ್ದು.

ಸಂವಿಧಾನವನ್ನು ವಿಮರ್ಶಿಸುವ ಈ ಕಸರತ್ತಿಗೆ ಬಿಜೆಪಿ ಇಷ್ಟೊಂದು ಮಹತ್ವ ಏಕೆ ಕೊಡುತ್ತಿದೆ? ಮೇಲ್ನೋಟಕ್ಕೆ ಇದೊಂದು ತರ್ಕಬದ್ಧ ಕ್ರಮ ಎನಿಸಬಹುದು. ಬಿಜೆಪಿ ಮುಖಂಡತ್ವ ಹೇಳುವಂತೆ 50ವರ್ಷಗಳ ಸ್ವಾತಂತ್ರ್ಯದ ನಂತರ ಸಂವಿಧಾನದತ್ತ ಇನ್ನೊಂದು ನೋಟ ಬೀರಬೇಕು. ಇಂತಹ ಕೆಲಸವನ್ನು ಸಂವಿಧಾನ ತಜ್ಞರ, ಸಂಸದರ



ನಿಮ್ಮ ಕೆಲವು ಮಿತ್ರರು ಐ.ಪಿ.ಸಿ., ಕ್ರಿಮಿನಲ್ ಪ್ರೊಸಿಜರ್ ಕೋಡ್‌ಗಳನ್ನೂ ಪುನರ್ವಿಮರ್ಶೆ ಮಾಡಿದರೂ ಸಂತುಷ್ಟರಾಗುತ್ತಾರೆ......

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿಯವರ ವ್ಯಂಗ್ಯ

ಒಂದು ಆಯೋಗ ಮಾಡುವುದರಲ್ಲಿ ತಪ್ಪೇನು? ಹೇಗೂ ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿನಲ್ಲಿ ಮೂರನೇ ಎರಡು ಬಹುಮತ ಬೇಕಿರುವಾಗ ಯಾವುದೇ ಒಂದು ಪಕ್ಷದ ಅಜೆಂಡಾವನ್ನು ಪಾಸು ಮಾಡಿಸಿಕೊಳ್ಳಬಹುದು ಎಂಬ ಭಯ ಬೇಕಿಲ್ಲ ಎಂದು ವಾಜಪೇಯಿ ಮತ್ತು ಅಡ್ವಾಣಿ ಇಬ್ಬರೂ ಹೇಳಿದ್ದಾರೆ ತಾನೇ? ಬಿಜೆಪಿ ಮುಖಂಡರ ಪ್ರಕಾರ ಅವರು ಬಯಸುವುದು ಕೇಂದ್ರ -ರಾಜ್ಯ ಸಂಬಂಧಗಳ ಪುನರ್ರಚನೆ, ಬಹಳ ಅಗತ್ಯವೆನಿಸುತ್ತಿರುವ ಚುನಾವಣಾ ಸುಧಾರಣೆಗಳನ್ನು ತರುವುದು ಮತ್ತು ಪ್ರಸಕ್ತ ರಾಜಕೀಯ ವ್ಯವಸ್ಥೆಯಲ್ಲಿ ಏನಾದರೂ ಬದಲಾವಣೆ ಬೇಕೇ ಎಂದು ಪರೀಕ್ಷಿಸುವುದು !

ಸಂಸತ್ತಿನಲ್ಲಿ ವಾಜಪೇಯಿ ಸರಕಾರದ ವಿಶ್ವಾಸ ಠರಾವಿನ ಚರ್ಚೆಯ ವೇಳೆ ಮತ್ತು ನಂತರ ರಾಷ್ಟ್ರಪತಿ ಭಾಷಣಕ್ಕೆ ಧನ್ಯವಾದದ ಠರಾವಿನ ಚರ್ಚೆಯಲ್ಲಿ ಸಂವಿಧಾನದಲ್ಲಿ ಬದಲಾವಣೆಗಳನ್ನು ತರಬೇಕೆನ್ನುವ ಹಿಂದೆ ಇರುವ ಬಿಜೆಪಿಯ ಉದ್ದೇಶದ ಬಗ್ಗೆ ಸಂದೇಹ ವ್ಯಕ್ತಪಡಿಸಿದಾಗ ವಾಜಪೇಯಿ ಮತ್ತು ಅಡ್ವಾಣಿ ಇಬ್ಬರೂ ನೊಂದವರಂತೆ ಮಾತನಾಡಿದರು. ನ್ಯಾಯಮೂರ್ತಿ ಕೃಷ್ಣ ಐಯ್ಯರ್, ನ್ಯಾಯಮೂರ್ತಿ ಖನ್ನಾ, ಮಧುದಂಡವತೆ ಮತ್ತಿತರರ ಹೆಸರನ್ನು ಉದ್ಧರಿಸುತ್ತಾ ಇವರೂ ಕೂಡಾ ಸಂವಿಧಾನದ ಮರುವಿಮರ್ಶೆ ಅಗತ್ಯ ಎಂದಿದ್ದಾರೆ ಎನ್ನುತ್ತಾ ದಾರಿ ತಪ್ಪಿಸಲು ಪ್ರಯತ್ನಿಸಿದರು. ನಿಜ, ಒಂದಿಲ್ಲೊಂದು ರೀತಿಯಲ್ಲಿ ಸಂವಿಧಾನದಲ್ಲಿ ತಿದ್ದುಪಡಿ ಬಯಸುವವರು ಬಹಳ ಜನರಿದ್ದಾರೆ. ಆದರೆ ಬಿಜೆಪಿ ಸಂವಿಧಾನದ ಸಮಗ್ರ ಪುನರ್ವಿಮರ್ಶೆ ಬೇಕೆನ್ನುವುದು ಈ ಅರ್ಥದಲ್ಲಿ ಅಲ್ಲ. ಬಿಜೆಪಿಯ ವಿವಿಧ ಮುಖಂಡರು ಎಂದಿನ ಬಿಜೆಪಿ-ಆರ್‌ಎಸ್‌ಎಸ್ ಶೈಲಿಯಲ್ಲಿ ಒಬ್ಬೊಬ್ಬರು ಒಂದೊಂದು ದನಿಯಲ್ಲಿ ಮಾತನಾಡಿದರು. ಮಧುದಂಡವತೆ ಅಧ್ಯಕ್ಷೀಯ ಮಾದರಿಯ ಪರವಾಗಿ ವಾದ ಮಾಡಿದ್ದಾರೆ ಎಂದು ಅಡ್ವಾಣಿ ತಪ್ಪು-ತಪ್ಪೇ ಹೇಳಿಕೊಂಡರು. ಮತ್ತೊಬ್ಬ ಬಿಜೆಪಿ ಮುಖಂಡರು ಸಂವಿಧಾನದ ಪುನರ್ವಿಮರ್ಶೆಯೆಂದರೆ ಕೇಂದ್ರ-ರಾಜ್ಯ ಸಂಬಂಧಗಳ ಪುನರ್ವಿಮರ್ಶೆ ಎಂದರ್ಥ ಎಂದು ತಮ್ಮ ಬುದ್ಧಿವಂತಿಕೆ ಪ್ರದರ್ಶಿಸಿದರು.

ಮುಗ್ಧ ಪ್ರಯತ್ನವಲ್ಲ

ಆದರೆ ಇದರಲ್ಲಿ ಹೊರನೋಟಕ್ಕೆ ಕಾಣುವಷ್ಟು ಮುಗ್ಧತೆಯೇನಿಲ್ಲ. ಈ ಪ್ರಶ್ನೆಯಲ್ಲಿ ಬಿಜೆಪಿಯ ನಿಜ ಉದ್ದೇಶವನ್ನು ಪ್ರಶ್ನಿಸಲು ಹಾಗೂ ಪುನರ್ವಿಮರ್ಶೆ ಮಾಡಬೇಕೆಂದು ಹೇಳುವ ಅವರ ಹಕ್ಕಿಗೆ ಸವಾಲು ಹಾಕಲು ಸಾಕಷ್ಟು ಆಧಾರಗಳಿವೆ. ಸಂವಿಧಾನ ನಮ್ಮದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯ ಎಂದು ಒತ್ತಿ ಹೇಳುವ ಮೂಲಭೂತ ಶಾಸನ ಇದು ಈ ಸಂವಿಧಾನದ ಸಮಗ್ರ ಪುನರ್ವಿಮರ್ಶೆ ಯೆನ್ನುವುದು ಎಲ್ಲಾ ನಾಗರಿಕರು ಗಂಭೀರವಾಗಿ ಪರಿಗಣಿಸಬೇಕಾದ ಒಂದು ಮೂಲಭೂತ ಪ್ರಶ್ನೆ. ಗಣತಂತ್ರ ಸಂವಿಧಾನ ಅಂಗೀಕರಿಸಿದ ನಲ್ವತ್ತೆಂಟು ವರ್ಷಗಳ ನಂತರ ಅದರ ಮೂಲಭೂತ ಒಲವು ಭಾರತ ಒಂದು ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಬದುಕುಳಿಯುವುದರಲ್ಲಿ ಒಂದು ಪ್ರಧಾನ ಆಧಾರ ಸ್ಥಂಭವಾಗಿದೆ ಎಂದು ನಮ್ಮ ಸ್ವಂತ ಅನುಭವದಿಂದ ಕಂಡುಕೊಂಡಿದ್ದೇವೆ. ಸ್ವಾತಂತ್ರ್ಯ ಹೋರಾಟದ ಅನುಭವದಿಂದ ಮೂಡಿಬಂದ ಭಾರತೀಯ ಸಂವಿಧಾನ ಏನೇ ಅಪೂರ್ಣತೆಗಳು, ಮಿತಿಗಳಿದ್ದರೂ ಅದು ಸಂಸದೀಯ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷ-ಪ್ರಜಾಪ್ರಭುತ್ವ ಮೌಲ್ಯಗಳು ಹಾಗು ಒಕ್ಕೂಟವಾದದ ಮೂಲಾಂಶಗಳ ತಳಪಾಯವನ್ನು ಒದಗಿಸಿದೆ. ಈ ಸಂವಿಧಾನವನ್ನು ತಿದ್ದುಪಡಿ ಮಾಡುವ ಅಗತ್ಯ ಈ ಹಿಂದೆಯೂ ಬಂದಿತ್ತು, ಮುಂದೆಯೂ ಬರುತ್ತದೆ. ಆದರೆ "ಸಮಗ್ರ"ವಾಗಿ ಸಂವಿಧಾನವನ್ನು ಪುನರ್ವಿಮರ್ಶೆ ಮಾಡುವ ಬಿಜೆಪಿ ಮಾತಿನ ಹಿಂದೆ ದುರ್ಲಕ್ಷಣಗಳಿವೆ.

ಬಿಜೆಪಿ ಬಹಿರಂಗವಾಗಿಯೇ ಹಿಂದುತ್ವ ತತ್ವಕ್ಕೆ ತಾನು ವಿಧೇಯ ಎಂದು ಹೇಳಿಕೊಳ್ಳುವ ಒಂದು ಪಕ್ಷ. ಸಂವಿಧಾನದ ಮರುವಿಮರ್ಶೆಯ ಮಾತನಾಡಿರುವ 1998ರ ಅದೇ ಚುನಾವಣಾ ಪ್ರಣಾಳಿಕೆಯಲ್ಲಿ ಬಿಜೆಪಿ ಆರ್‌ಎಸ್‌ಎಸ್‌ನ 'ಒಂದು ರಾಷ್ಟ್ರ, ಒಂದು ಜನ, ಒಂದು ಸಂಸ್ಕೃತಿ'ಯ ಘೋಷಣೆಯನ್ನು ಪ್ರತಿಧ್ವನಿಸಿದೆ; ಹಿಂದುತ್ವ ಸಾಂಸ್ಕೃತಿಕ ರಾಷ್ಟ್ರವಾದದ ಮೂಲಾಂಶ, ಇದು ಭಾರತೀಯ ಪ್ರಭುತ್ವದ ನೀತಿಯಾಗಬೇಕು ಎಂದಿದೆ; ರಾಮಜನ್ಮಭೂಮಿ ಆಂದೋಲನ "ಭಾರತದ ದಿಕ್ಕು ತಪ್ಪಿದ ರಾಜಕಾರಣಕ್ಕೆ ದಿಕ್ಕು ನೀಡಿದ" ಸ್ವಾತಂತ್ರ್ಯೋತ್ತರ ಭಾರತದ ಅತ್ಯಂತ ಮಹಾನ್ ಆಂದೋಲನ ಎಂದು ವರ್ಣಿಸಿದೆ!

ಪುನರ್ವಿಮರ್ಶೆಯ ಪರದೆ

ಬಿಜೆಪಿ- ಆರ್‌ಎಸ್‌ಎಸ್ ಬಯಸುವ ಸಂವಿಧಾನ 'ಸುಧಾರಣೆ'ಯ ಮುಖ್ಯ ಒತ್ತು ಇರುವುದು ಭಾರತೀಯ ಪ್ರಭುತ್ವದ ಮತ್ತು ಸಮಾಜದ ಧರ್ಮನಿರಪೇಕ್ಷ ಸ್ವರೂಪವನ್ನು ಬದಲಿಸುವಲ್ಲಿ. ಅವರಿಗೆ ಹಿಂದುತ್ವವನ್ನು ಪ್ರಭುತ್ವದ ಮಾರ್ಗದರ್ಶಕ ನೀತಿಯಾಗಿ ಪ್ರತಿಷ್ಠಾಪಿಸುವಲ್ಲಿ ಸಂವಿಧಾನವೇ ಒಂದು ದೊಡ್ಡ ಅಡ್ಡಿಯಾಗಿ ಕಾಣಿಸುತ್ತದೆ. ಸ್ವಂತ ಬಹುಮತವಿಲ್ಲದ ಬಿಜೆಪಿ ಒಂದು ಸಮ್ಮಿಶ್ರ ಸರಕಾರ ನಡೆಸಬೇಕಾಗಿರುವಂತಹ ಪ್ರಸ್ತುತ ಸನ್ನಿವೇಶದಲ್ಲಿ ಸಂವಿಧಾನದ ವಿಷಯ ದಲ್ಲಿ ಹಿಂದುತ್ವ ಸಿದ್ಧಾಂತವನ್ನು ನೇರವಾಗಿ ತುರುಕಿಸುವ ಹಾಗಿಲ್ಲ. ಆದ್ದರಿಂದ ಅದು ಪರೋಕ್ಷವಾಗಿ ಅದನ್ನು ಸರಕಾರದ ಅಜೆಂಡಾದಲ್ಲಿ ತರಲು ಪ್ರಯತ್ನಿಸುತ್ತಿದೆ. ಇದನ್ನೆಲ್ಲಾ ಮರೆಮಾಚಲು ಅದು ಸಮಗ್ರ ಸಾಂವಿಧಾನಿಕ ಪುನರ್ವಿಮರ್ಶೆಯ ಪರದೆಯನ್ನು ತಂದಿದೆ.

ಸಂವಿಧಾನವನ್ನು ತಾನು ಏನು ಮಾಡಬಯಸುತ್ತೇನೆ ಎನ್ನುವುದನ್ನು ಬಿಜೆಪಿ ತನ್ನ 1991ರ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿತ್ತು. "ಅಧ್ಯಕ್ಷೀಯ ವ್ಯವಸ್ಥೆ ಈಗಿನ ಸಂಸದೀಯ ವ್ಯವಸ್ಥೆಗಿಂತ ಹೆಚ್ಚು ಸ್ಥಿರವಾದ ಒಂದು ಸರಕಾರವನ್ನು ಕೊಡಬಲ್ಲುದೇ ಎಂದು ಅಧ್ಯಯನ ಮಾಡಿ ವರದಿ ಮಾಡಲು ಒಂದು ಆಯೋಗ"ದ ಮಾತನಾಡಿತ್ತು. ಅದರಲ್ಲಿದ್ದ ಎರಡನೇ ಬೇಡಿಕೆ 30ನೇ ಕಲಮನ್ನು ಪರಿವರ್ತಿಸುವುದು. ಸಂವಿಧಾನದ ಈ ಕಲಮು ಅಲ್ಪಸಂಖ್ಯಾತರಿಗೆ ತಮ್ಮ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹಕ್ಕಿನ ಭರವಸೆ ನೀಡುತ್ತದೆ. ಬಿಜೆಪಿ ಅಲ್ಪಸಂಖ್ಯಾತರಿಗೆ ನೀಡಿರುವ ಸಾಂವಿಧಾನಿಕ ರಕ್ಷಣೆಯನ್ನು ಕೊನೆಗೊಳಿಸುವ ರೀತಿಯಲ್ಲಿ ಈ ಕಲಮನ್ನು ತಿದ್ದುಪಡಿ ಮಾಡ ಬಯಸುತ್ತದೆ. ಆ ಪ್ರಣಾಳಿಕೆಯಲ್ಲಿ ಸೂಚಿಸಿದ ಮೂರನೇ ಬದಲಾವಣೆ ಯೆಂದರೆ ಜಮ್ಮು-ಕಾಶ್ಮೀರ ಕುರಿತಾದ 370ನೇ ಕಲಮಿನ ರದ್ಧತಿ.

ಆದರೆ ಮಹತ್ವದ ಸಂಗತಿಯೆಂದರೆ 1996ರ ಮತ್ತು 1998ರ ಚುನಾವಣಾ ಪ್ರಣಾಳಿಕೆಗಳಲ್ಲಿ ಮೊದಲೆರಡು ಬೇಡಿಕೆಗಳನ್ನು ಹೇಳಿಲ್ಲ. ಅದರ ಬದಲು ಸಂವಿಧಾನದ ಒಂದು ಸಮಗ್ರ



ಕೃಪೆ: ಪ್ರಜಾಶಕ್ತಿ

ಪುನರ್ವಿಮರ್ಶೆಯ ಬೇಡಿಕೆಯಿದೆ. ಇದು ಏಕೆಂದರೆ 1996ರ ವೇಳೆಗಾಗಲೇ ಬಿಜೆಪಿಗೆ ತನ್ನ ಈ ಬೇಡಿಕೆಯನ್ನು ಒಪ್ಪದ ಮಿತ್ರರನ್ನು ಕಲೆಹಾಕುವ ಅಗತ್ಯದ ಅರಿವು ಮೂಡಿತ್ತು. ಆದ್ದರಿಂದ ಅದು ಈ ಪ್ರಶ್ನೆಗಳನ್ನು ಪರೋಕ್ಷವಾಗಿ ಎತ್ತಿಕೊಳ್ಳುವ ನಿರ್ಧಾರ ಮಾಡಿತ್ತು. ಅದಕ್ಕೇ ಸಂವಿಧಾನದ ಪುನರ್ವಿಮರ್ಶೆಯ ಈ ತಂತ್ರ.

ಸರ್ವಾಧಿಕಾರಶಾಹಿ ಕಣ್ಣೋಟ

ಬಿಜೆಪಿ ಈಗಿನ ಸಂಸದೀಯ ವ್ಯವಸ್ಥೆಯ ಬದಲು ಅಧ್ಯಕ್ಷೀಯ ವ್ಯವಸ್ಥೆ ತರಲು ಕಾತುರವಾಗಿದೆ.ಏಕೆಂದರೆ ಭಾರತೀಯ ಪ್ರಭುತ್ವದಲ್ಲಿ ಹಿಂದುತ್ವದ ಅಜೆಂಡಾವನ್ನು ತೂರಲು ಇದರಿಂದ ಅದಕ್ಕೆ ಸಹಾಯವಾಗುತ್ತದೆ. ಒಬ್ಬ ಮುಖಂಡನ ಕೈಯಲ್ಲಿ ಎಲ್ಲಾ ಅಧಿಕಾರಗಳು ಕೇಂದ್ರೀಕೃತವಾಗಿರುವ ಈ ಅಧ್ಯಕ್ಷೀಯ ವ್ಯವಸ್ಥೆ ಹಿಂದುತ್ವ ತತ್ವಕ್ಕೆ ಹೆಚ್ಚು ಸೂಕ್ತ ಎಂದು ಅವರಿಗೆ ಅನಿಸಿದ್ದರೆ ಆಶ್ಚರ್ಯವಿಲ್ಲ. ಅಂದರೆ 'ಒಂದು ದೇಶ, ಒಂದು ಜನ, ಒಂದು ಸಂಸ್ಕೃತಿ'ಯ ಅದರ ಘೋಷಣೆಯನ್ನು ವಿಸ್ತರಿಸಿ 'ಒಬ್ಬ ಮುಖಂಡ' ಎಂಬುದನ್ನು ಸೇರಿಸುವುದಷ್ಟೇ. ಪರಮಾಧಿಕಾರಗಳಿರುವ ಇಂತಹ ಒಬ್ಬ ಮುಖಂಡ ಈಗಿರುವ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೆಚ್ಚು ಸರ್ವಾಧಿಕಾರಶಾಹಿ ರೀತಿಯಲ್ಲಿ ಪುನರ್‍ರೂಪಿಸಬಹುದು. ಇದು ಆರ್‌ಎಸ್‌ಎಸ್ ನ ಬಹುಸಂಖ್ಯಾತ ಕೋಮಿನ ಆಳ್ವಿಕೆಯ ಕಣ್ಣೋಟಕ್ಕೆ ಅನುಗುಣವಾದದ್ದಲ್ಲವೇ? ಅಧ್ಯಕ್ಷೀಯ ವ್ಯವಸ್ಥೆಯಲ್ಲಿ ರಾಷ್ಟ್ರಾಧ್ಯಕ್ಷ ಸರಕಾರೀ ಯಂತ್ರ ನಡೆಸಲು ತನಗೆ ಬೇಕಾದವರನ್ನೇ ಹೆಕ್ಕಿಕೊಳ್ಳಬಹುದು. ಇವರು ನೇರವಾಗಿ ಸಂಸತ್ತಿಗೆ ಜವಾಬ್ದಾರರಾಗಿರುವುದಿಲ್ಲ. ಭಾರತದಲ್ಲಿ ಈಗಾಗಲೇ ಬೇರು ಬಿಟ್ಟಿರುವ ಸಂಸದೀಯ ವ್ಯವಸ್ಥೆ ಭಾರತೀಯ ಸಮಾಜದ ವೈವಿಧ್ಯತೆಗೆ ಹೆಚ್ಚು ಸ್ಪಂದಿಸಬಲ್ಲ ವ್ಯವಸ್ಥೆ. ಅಧ್ಯಕ್ಷೀಯ ಮಾದರಿಯ ಬಿಜೆಪಿ ಪ್ರತಿಪಾದನೆಯ ಹಿಂದಿರುವುದು ಒಬ್ಬ ಬಲಿಷ್ಠ ಮುಖಂಡನ ಆಳ್ವಿಕೆಯ "ಅಖಂಡ ಭಾರತ"ದ ಸರ್ವಾಧಿಕಾರಶಾಹಿ ಕಣ್ಣೋಟ.

ಆರ್‌ಎಸ್‌ಎಸ್ ನಡೆಸುವ 'ಆರ್ಗನೈಸರ್' ಮತ್ತು 'ಪಾಂಚಜನ್ಯ' ಪತ್ರಿಕೆಗಳ ಪುಟಗಳ ಮೇಲೆ ಕಣ್ಣಾಡಿಸುವ ಯಾರಿಗೇ ಆದರೂ ಆರೆಸ್ಸೆಸ್ ತತ್ವಗಳು ಭಾರತೀಯ ಸಂವಿಧಾನದ ಮಾರ್ಗದರ್ಶಕ ನೀತಿಗಳಿಗೆ ಹೇಗೆ ತದ್ವಿರುದ್ಧವಾಗಿವೆ, ಹಾನಿಕಾರಕವಾಗಿವೆ ಎಂಬುದು ತಿಳಿಯುತ್ತದೆ. ಒಬ್ಬ ಬಲಿಷ್ಠ ಮುಖಂಡನ ಆಳ್ವಿಕೆಯ ಪ್ರತಿಪಾದನೆ ಹಾಗೂ ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಅಪನಂಬಿಕೆ ಈ ಪತ್ರಿಕೆಗಳ ಲೇಖನಗಳಲ್ಲಿ ಮತ್ತೆ-ಮತ್ತೆ ಕಾಣಬರುವ ಒಂದು ಪ್ರಮುಖ ಪ್ರಜಾಪ್ರಭುತ್ವ-ವಿರೋಧಿ ಕಣ್ಣೋಟ. ಉದಾಹರಣೆಗೆ ಮೇ 4,1997ರ 'ಆರ್ಗನೈಸರ್'ನಲ್ಲಿ ಪ್ರಕಟವಾದ ಒಂದು ಲೇಖನದ ಈ ಮಾತುಗಳನ್ನು ನೋಡಿ- *"ಕಳೆದ ಐವತ್ತು ವರ್ಷಗಳಲ್ಲಿ ಮಿಲಿಟರಿ ಹಿನ್ನೆಲೆಯ ಒಬ್ಬನೇ ಒಬ್ಬ ಭಾರತೀಯ ಮುಖಂಡ ಬರದಿರುವುದು ಒಂದು ದುರಂತ. ತದ್ವಿರುದ್ಧವಾಗಿ ಅಮೇರಿಕಾವನ್ನೇ ನೋಡಿ. ಅಲ್ಲಿ ಪ್ರತಿಯೊಬ್ಬ ಮುಖಂಡನೂ ಯುದ್ಧದಲ್ಲಿ ದುಡಿದಾತ".* ಇನ್ನೊಬ್ಬ ಆರೆಸ್ಸೆಸ್ ಮುಖಂಡ, ಲೋಕಸಭೆಯ ಉಪಾಧ್ಯಕ್ಷರಾದ, ಈಗ ಉತ್ತರ ಪ್ರದೇಶದ ರಾಜ್ಯಪಾಲರಾಗಿ ನೇಮಕರಾಗಿರುವ ಸೂರಜ್ ಭಾನ್ ಸಂಸದ್ ಸದಸ್ಯರಿಗೆ ಶಿಕ್ಷಣಾರ್ಹತೆಯನ್ನು ವಿಧಿಸಬೇಕೆಂದು ಪ್ರತಿಪಾದಿಸಿರುವುದಾಗಿ ಅದೇ ಆರ್ಗನೈಸರ್ ಪತ್ರಿಕೆ ವರದಿ ಮಾಡಿದೆ. ಈ ದಿಕ್ಕಿನಲ್ಲಿ ಜನತಾ ಪ್ರಾತಿನಿಧ್ಯ ಶಾಸನಕ್ಕೆ ತಿದ್ದುಪಡಿ ತರಬೇಕೆಂದೂ ಅವರು ಪ್ರತಿಪಾದಿಸಿದ್ದಾರಂತೆ.

ಸಂವಿಧಾನದ ವಿಮರ್ಶೆಯ ಹಿಂದೆ ಇನ್ನೊಂದು ಉದ್ದೇಶವೂ ಇದೆ. ಯಾವುದೇ ನೈಜ ಪ್ರಜಾಪ್ರಭುತ್ವ ವ್ಯವಸ್ಥೆಯ ಸಂವಿಧಾನದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಅಂಶಗಳು ಇದ್ದೇ ಇರುತ್ತವೆ. ಬಿಜೆಪಿ ಇಂತಹ ಅಂಶಗಳ ವಿರುದ್ಧವೇ ಗಮನ ಕೇಂದ್ರೀಕರಿಸುತ್ತದೆ. ಆದ್ದರಿಂದಲೇ ಒಂದೆಡೆ ಹೊಸದಾಗಿ ತಾನು ರಾಜ್ಯಗಳಿಗೆ ಹೆಚ್ಚಿನ ಅಧಿಕಾರದ ಪರವಾಗಿದ್ದೇನೆ ಎನ್ನುತ್ತಲೇ ಇನ್ನೊಂದೆಡೆ ಜಮ್ಮು-ಕಾಶ್ಮೀರಕ್ಕೆ ಸ್ವಾಯತ್ತತೆ ನೀಡುವ 370ನೇ ಕಲಮನ್ನು ರದ್ದು ಮಾಡಬೇಕೆನ್ನುತ್ತದೆ. ಅದೇ ರೀತಿ ಅಲ್ಪಸಂಖ್ಯಾತರಿಗೆ ತಮ್ಮ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹಕ್ಕು ಕೊಡುವುದು "ಅಲ್ಪಸಂಖ್ಯಾತರನ್ನು ತುಷ್ಟೀಕರಿಸುವ" ನೀತಿಯಾಗಿ ಕಾಣುವ ಬಿಜೆಪಿ ಅದಕ್ಕಾಗಿ 30ನೇ ಕಲಮನ್ನು ರದ್ದು ಮಾಡಬೇಕೆನ್ನುತ್ತದೆ. ಇನ್ನೊಂದು ಕಡೆ ಗೋರಕ್ಷಣೆ, ಸಮರೂಪದ ನಾಗರಿಕ ಸಂಹಿತೆ ಇತ್ಯಾದಿ ಸಂವಿಧಾನದ ನಿರ್ದೇಶಕ ಸೂತ್ರಗಳನ್ನು ಜ್ಯಾರಿ ಮಾಡಬೇಕೆಂದು ಆರೆಸ್ಸೆಸ್ ಬಹಿರಂಗವಾಗಿಯೆ ಪ್ರತಿಪಾದಿಸುತ್ತಿದೆ.

➚

‘ಸಮಗ್ರ ವಿಮರ್ಶೆ’ಯೇನೂ ಬೇಕಿಲ್ಲ

ಎಲ್.ಕೆ.ಅಡ್ವಾಣಿಯವರು ಕೇಂದ್ರ-ರಾಜ್ಯ ಸಂಬಂಧಗಳನ್ನು ಪುನರ್ವಿಮರ್ಶಿಸಿ ರಾಜ್ಯಗಳಿಗೆ ಹೆಚ್ಚಿನ ಅಧಿಕಾರ ಕೊಡಿಸುವ ಬಗ್ಗೆ, ಚುನಾವಣಾ ಸುಧಾರಣೆಗಳನ್ನು ತಂದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಬೇಕೆಂದು ಹೇಳುತ್ತಿದ್ದಾರೆ. ಈ ಎರಡರ ಬಗ್ಗೆಯೂ ವ್ಯಾಪಕ ಸಹಮತವಿದೆ, ಇದಕ್ಕೆ ವಾಜಪೇಯಿ ಸರಕಾರ ತರಬೇಕೆನ್ನುವ ಸಮಗ್ರ ಸಂವಿಧಾನ ವಿಮರ್ಶೆಯೇನೂ ಬೇಕಿಲ್ಲ. 356ನೇ ಕಲಮು ಅಥವಾ ಕೇಂದ್ರ-ರಾಜ್ಯ ಸಂಬಂಧಗಳನ್ನು ಕುರಿತ ಬೇರಾವುದೆ ಸೂಕ್ತ ತಿದ್ದುಪಡಿ ತರುವ ಬಗ್ಗೆ ಚರ್ಚಿಸಲು ಸರ್ವಸಮ್ಮತ ಸುಧಾರಣೆಗಳನ್ನು ರೂಪಿಸಲು ಅಂತರ-ರಾಜ್ಯಮಂಡಳಿ ಸೂಕ್ತ ವೇದಿಕೆಯಾದರೆ, ಚುನಾವಣಾ ಸುಧಾರಣೆಗಳ ವಿಷಯದಲ್ಲಿ ಗೃಹಮಂತ್ರಿಗಳು ಸ್ವತಃ ಅವರೂ ಸದಸ್ಯರಾಗಿದ್ದ ದಿನೇಶ ಗೋಸ್ವಾಮಿ ಸಮಿತಿಯ ಶಿಫಾರಸುಗಳನ್ನು ಆಧರಿಸಿ ಶಾಸನ ತಂದರಷ್ಟೆ ಸಾಕು. ಇನ್ನು ಉಳಿಯುವುದು ಬಿಜೆಪಿಯ ಪ್ರಿಯ ಯೋಜನೆ ಮಾತ್ರ - ಅಂದರೆ ಈ ಸಂವಿಧಾನದ ರಾಜಕೀಯ ವ್ಯವಸ್ಥೆಯ ಮೂಲಭೂತ ಸ್ವರೂಪವನ್ನು ಬದಲಿಸಿ ಅಧ್ಯಕ್ಷೀಯ ಮಾದರಿ ತರುವುದು.

ಸಂವಿಧಾನದ ಯಾವುದೇ ವಿಮರ್ಶೆ ಅಥವಾ ಟೀಕೆ ನಿಜವಾಗಿ ಪ್ರಜಾಪ್ರಭುತ್ವ, ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ತತ್ವ ಇವನ್ನು ಬಲಪಡಿಸುವ ಕೆಲಸ ನೆರವೇರಿಸುವಲ್ಲಿ ಅಡ್ಡಿಯಾಗುವ ಮಿತಿಗಳು ಮತ್ತು ದೌರ್ಬಲ್ಯಗಳ ಮೇಲೆ ಗಮನ ಕೇಂದ್ರೀಕರಿಸಬೇಕು. ಸಂವಿಧಾನ ಹೇಳಿದ ಮೂಲಭೂತ ಹಕ್ಕುಗಳು ಮತ್ತು ನಾಗರಿಕರೆಲ್ಲರಿಗೂ ಸಮಾನತೆ ಇನ್ನೂ ಬಹುಪಾಲು ಜನರಿಗೆ ದಕ್ಕಿಲ್ಲ. ಆದ್ದರಿಂದ ಸಂವಿಧಾನ ಬದಲಾವಣೆಗೆ ಸಂಬಂಧಪಟ್ಟಂತೆ ಎಡ ಪ್ರಜಾಪ್ರಭುತ್ವವಾದಿ ಶಕ್ತಿಗಳ ಅಭಿಪ್ರಾಯವೆಂದರೆ ಉದ್ಯೋಗದ ಹಕ್ಕು, ಸಮಾನ ಅವಕಾಶಗಳು ಮತ್ತು ಎಲ್ಲಾ ನಾಗರಿಕರಿಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಬಲಪಡಿಸುವುದು. ಆದರೆ ಬಿಜೆಪಿಯ ಆಶಯ ಇದಲ್ಲ.

ಆಕ್ಷೇಪಾರ್ಹ ವಿಧಾನ

ಈ ಪ್ರಸ್ತಾವಿತ ಸಂವಿಧಾನ ವಿಮರ್ಶೆಯನ್ನು ಕೈಗೊಳ್ಳಬೇಕೆಂದಿರುವ ರೀತಿ ಕೂಡಾ ಸಂಪೂರ್ಣವಾಗಿ ಆಕ್ಷೇಪಾರ್ಹ. ವಾಜಪೇಯಿ ಸರಕಾರ ಆರಿಸಿದ ಪರಿಣತರ ಒಂದು ಸಣ್ಣ ತಂಡ ಸಂವಿಧಾನದ ಮೂಲಭೂತ ಪುನರ್ವಿಮರ್ಶೆ ಕೈಗೊಳ್ಳಲಿರುವ ಆಯೋಗವಾಗುತ್ತದೆ. 1948 ರಲ್ಲಿ ಕರಡು ಸಂವಿಧಾನ ರೂಪಿಸಲು ರಚನೆಗೊಂಡ ಸಂವಿಧಾನ ಸಭೆಯಲ್ಲಾದರೂ ಕನಿಷ್ಟ ಮೂರನೇ ಎರಡರಷ್ಟು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಅವರು ಸ್ವಾತಂತ್ರ್ಯ ಹೋರಾಟದ ಗುರಿಗಳನ್ನು, ಅನುಭವಗಳನ್ನು ಸಭೆಯಲ್ಲಿ ಚರ್ಚೆಗೆ ತರುತ್ತಿದ್ದರು. ತದ್ವಿರುದ್ಧವಾಗಿ ಈಗ ಪ್ರಸ್ತಾವಿತ ಸಂವಿಧಾನ ತಜ್ಞರ ಹಾಗೂ ಪ್ರಸಿದ್ಧ ಸಂಸದರ ಆಯೋಗ ಸಂಸತ್ತಿನ ಮಂಜೂರಾತಿ ಇಲ್ಲದೆ ರಚಿಸಲ್ಪಡುತ್ತದೆ. ಇದೇ ಒಂದು ಪ್ರಜಾಪ್ರಭುತ್ವ- ವಿರೋಧಿಯಾದ ಯಾವುದೇ ಕಾನೂನು ಬೆಂಬಲವಿಲ್ಲದ ಕ್ರಮ. ಸಂವಿಧಾನದ 368ನೇ ಕಲಮಿನ ಪ್ರಕಾರ ಅದನ್ನು ತಿದ್ದುಪಡಿ ಮಾಡುವ ಅಧಿಕಾರವಿರುವುದು ಭಾರತೀಯ ಜನತೆಯ ಚುನಾಯಿತ ಸಂಸ್ಥೆಯಾದ ಸಂಸತ್ತಿಗೆ ಮಾತ್ರ. ಒಂದು ಸಂವಿಧಾನ ಪುನರ್ವಿಮರ್ಶೆಯ ಆದೇಶ ಮತ್ತು ವ್ಯಾಪ್ತಿಯನ್ನು ಕೇವಲ ಸಂಸತ್ತು ಮಾತ್ರವೇ ನಿರ್ಧರಿಸಬಲ್ಲದು.

ಸಂವಿಧಾನ ಕೆಲವು ಸಂವಿಧಾನ ‘ಪರಿಣತರು’ ಆಚೀಚೆ ಕೊಯ್ದು ಪರೀಕ್ಷಿಸಬಹುದಾದ ಕೇವಲ ಒಂದು ಕಾನೂನು ದಸ್ತಾವೇಜು ಅಲ್ಲ. ಅದು ಭಾರತದ ಪ್ರಜಾಪ್ರಭುತ್ವದ ಅಡಿಗಲ್ಲು. ಸಂಸತ್ತು ಕೈಗೊಳ್ಳುವ ಒಂದು ಪೂರ್ಣ ಪ್ರಮಾಣದ ಪ್ರಜಾಸತ್ತಾತ್ಮಕ ನಿರ್ಣಯ ಮಾತ್ರವೇ ಸಂವಿಧಾನವನ್ನು ಬದಲಿಸುವ ಯಾವುದೇ ಪ್ರಶ್ನೆಯನ್ನು ಆರಂಭಿಸಲು ಸಾಧ್ಯ. ಬಿಜೆಪಿ ಒಂದು ಸಣ್ಣ ಪರಿಣತರ ತಂಡದ ವ್ಯವಸ್ಥೆಯ ಮೂಲಕ ಸಂವಿಧಾನದಲ್ಲಿ ಮೂಲಭೂತ ಬದಲಾವಣೆಗಳನ್ನು ತರಬಯಸುತ್ತದೆ. ಬಿಜೆಪಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಈ ಮೂಲಕವೇ ಅದರ ಯೋಜನೆಗಳಿಗೆ ಒಂದು ಕಾನೂನು ಬದ್ಧತೆ ಕೊಡಿಸಿದಂತಾಗಿದೆ. ಬಿಜೆಪಿಗೆ ಅದೇ ಒಂದು ಸಾಧನೆ. ಆದರೆ ಇದಕ್ಕೆ ಅವಕಾಶ ಕೊಡಲು ಸಾಧ್ಯವಿಲ್ಲ, ಆದ್ದರಿಂದ ಸಂವಿಧಾನ ಅಧಿಕಾರ ನೀಡದ ಯಾವುದೇ ಆಯೋಗದ ರಚನೆಯನ್ನು ದೃಢವಾಗಿ ವಿರೋಧಿಸಬೇಕು, ತಡೆಯಬೇಕು. ○

ರೈತರೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ?

ಹೊರಲಾರದ ಸಾಲಗಳಿಂದಾಗಿ ಹಾಗೂ ನಿರ್ಲಕ್ಷ್ಯ ಧೋರಣೆಗಳಿಂದಾಗಿ ಎನ್ನುತ್ತಾರೆ ಆರ್ಥಿಕ ತಜ್ಞೆ

ಡಾ|| ಉತ್ಸಾ ಪಟ್ನಾಯಕ್

ತುಂಬು ಜೀವನದ ಹೊಸ್ತಿಲಲ್ಲಿರುವ ವಯಸ್ಕರು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದರೆ ಅದು ಸ್ಪಷ್ಟವಾಗಿ ಹೇಳಲಾರದ ಹತಾಶೆಯ ಮಟ್ಟವನ್ನು ತೋರಿಸುತ್ತದೆ. ಈಗ ಒಂದು ವರ್ಷಕ್ಕೂ ಹೆಚ್ಚು ಸಮಯದಿಂದ ರೈತರ ಆತ್ಮಹತ್ಯೆಯ ಸುದ್ದಿಗಳು ಬರುತ್ತಿವೆ. ಆಂಧ್ರಪ್ರದೇಶದ ಹತ್ತಿ ಬೆಳೆಯುವ ರೈತರ ಆತ್ಮಹತ್ಯೆಗಳಿಂದ ಆರಂಭವಾದ ಈ ಸುದ್ದಿ, ನಂತರ ಕರ್ನಾಟಕ, ಮಧ್ಯಪ್ರದೇಶದವರೆಗೂ ಇನ್ನೊಂದು ಕಡೆ ಹರ್ಯಾಣ, ಪಂಜಾಬಕ್ಕೂ ಹರಡಿವೆ.

ಈ ವೈಯಕ್ತಿಕ ಹತಾಶೆ, ನಿರಾಸೆಗಳಿಗೆ ಸಾಮಾನ್ಯವಾಗಿ ಸಾಮಾಜಿಕ ಕಾರಣಗಳಿರುತ್ತವೆ. ಇವರ ಆತ್ಮಹತ್ಯೆಗಳ ಅಧ್ಯಯನ ಮಾಡಿದಾಗ ಒಂದು ಸಂಗತಿ ಕಂಡುಬರುತ್ತದೆ. ಕರ್ನಾಟಕದ ಒಣ ಪ್ರದೇಶಗಳಿಂದ ಹಿಡಿದು ಪಂಜಾಬಿನ ಸಮೃದ್ಧ ಬಯಲಿನವರೆಗಿನ ವಿವಿಧ ಪ್ರದೇಶಗಳಲ್ಲಿ ರೈತರ ಆತ್ಮಹತ್ಯೆಗಳಿಗೆ ತಕ್ಷಣದ ಕಾರಣಗಳು ಭಿನ್ನವಾಗಿದ್ದರೂ ಇವೆಲ್ಲದರ ನಡುವೆ ಒಂದು ಸಾಮಾನ್ಯ ಎಳೆ ಇದ್ದಂತಿದೆ.

ಹತ್ತಿ ಬೆಳೆಯುವ ರೈತರಿಂದ ಆರಂಭಿಸೋಣ. ಸುಮಾರು ಹತ್ತು ವರ್ಷಗಳ ಹಿಂದೆ, ರಾಜೀವ್ ಸರಕಾರ ಆರಂಭಿಸಿದ್ದ ವ್ಯಾಪಾರ ಹತೋಟಿ ರದ್ದತಿಯ ಭಾಗವಾಗಿ ಕಚ್ಚಾ ಹತ್ತಿ ರಫ್ತಿಗೆ ಅವಕಾಶ ನೀಡಲಾಯಿತು. 1989-90 ರಲ್ಲಿದ್ದ ರಫ್ತಿನ ವಾರ್ಷಿಕ ಸರಾಸರಿ 35000 ಟನ್ 1990-91 ರಲ್ಲಿ 374000 ಟನ್‌ಗೇರಿತು. ಅಂದರೆ ಹತ್ತು ಪಟ್ಟಿಗಿಂತಲೂ ಹೆಚ್ಚು ಹೆಚ್ಚಳ - ಒಂದೇ ವರ್ಷದಲ್ಲಿ. ಮುಂದಿನ ಎರಡು ವರ್ಷಗಳನ್ನೂ ಪರಿಗಣನೆಗೆ ತಗೊಂಡಾಗ ಸರಾಸರಿ ಎರಡು ಲಕ್ಷ ಟನ್ ಕಚ್ಚಾ ಹತ್ತಿ ರಫ್ತಾಯಿತು. ಈ ಬೃಹತ್ ಹೆಚ್ಚಳಕ್ಕೆ ಕಾರಣ ವಿಶ್ವ ಮಾರುಕಟ್ಟೆಯಲ್ಲಿ ಹತ್ತಿಬೆಲೆ ಏರಿಕೆ ಹಾಗೂ ಇದರ ಸಂಪೂರ್ಣ ಲಾಭ ಪಡೆದು ವಿದೇಶಿ ವಿನಿಮಯ ಹೆಚ್ಚಿಸಿಕೊಳ್ಳುವ ವಾಣಿಜ್ಯ ಮಂತ್ರಾಲಯದ ಆಸೆ. ಇಂತಹ ರಫ್ತು ಒತ್ತಡ ದೇಶದೊಳಗೆ ಕಚ್ಚಾಹತ್ತಿಯ ಬರಕ್ಕೆ ಎಡೆಮಾಡಿಕೊಟ್ಟಿತು. ಇದರಿಂದ ಹಲವಾರು ಪವರ್‌ಲೂಂಗಳು ಮುಚ್ಚಿಹೋದವು. ಕೈಮಗ್ಗ ನೇಕಾರರಿಗೂ ಇದು ತೀವ್ರವಾಗಿ ತಟ್ಟಿತು.

ಆಹಾರ ಧಾನ್ಯಗಳನ್ನು ಬಿಟ್ಟು

ವಸಾಹತು ಕಾಲದಲ್ಲಿ ಭಾರತೀಯ ರೈತ ವಿಶ್ವ ಮಾರುಕಟ್ಟೆಯ ಭಾಗವಾದ. ಅಂದಿನಿಂದಲೂ ಆತ ವಿಶ್ವ ಮಾರುಕಟ್ಟೆಯ ಬೆಲೆಗಳಿಗೆ ಸ್ಪಂದಿಸಲಾರಂಭಿಸಿದ. ಒಳ್ಳೆಯ ಪ್ರತಿಫಲ ಪಡೆಯುವ ನಿರೀಕ್ಷೆಯಿಂದ ಲಕ್ಷಾಂತರ ರೈತರು ವಿಪರೀತ ಸಾಲ ಮಾಡಿ ತಂದು ಹತ್ತಿ ಬೆಳೆಯುವ ಪ್ರದೇಶಗಳನ್ನು ವಿಸ್ತರಿಸಿದರು. ಹಿಂದೆ ಹತ್ತಿ ಬೆಳೆಯದವರೂ ಹತ್ತಿಬೆಳೆಯಲು ಮುಂದಾದರು. ಮುಖ್ಯವಾಗಿ ಆಂಧ್ರಪ್ರದೇಶ, ಉತ್ತರ ಕರ್ನಾಟಕ ಮತ್ತು ಮಹಾರಾಷ್ಟ್ರದ ವಿದರ್ಭಾ ಪ್ರದೇಶದ ರೈತರು. ಇವರಲ್ಲಿ ಹೆಚ್ಚಿನವರು ಮಧ್ಯಮ ಮತ್ತು ಸಣ್ಣ ರೈತರಾಗಿದ್ದು ತಮ್ಮ ಜಮೀನು ಸಾಲದೆ, ಇತರರ ಜಮೀನನ್ನು ಗೇಣಿಗೆ ಪಡೆದು ಕೆಲಸ ಮಾಡಿದರು. ಎಣ್ಣೆ ಕಾಳುಗಳನ್ನು ಬಿಟ್ಟು ಬೇರೆ ಯಾವುದೇ ಬೆಳೆಗಿಂತ ಹತ್ತಿ ಬೆಳೆಯ ಸಾಗುವಳಿ ಪ್ರದೇಶ 1990 ರ ದಶಕದಲ್ಲಿ ತ್ವರಿತವಾಗಿ ವಿಸ್ತಾರಗೊಂಡಿತು ಎಂದು ಅಖಿಲ ಭಾರತ ಅಂಕಿ-ಅಂಶಗಳಿಂದ ಕಾಣುವ ಸಂಗತಿ. 1990-91 ರಿಂದ 1995-96 ರ ನಡುವೆ ಹತ್ತಿ ಬೆಳೆಯುವ ಪ್ರದೇಶಗಳಲ್ಲಿ 17 ಲಕ್ಷ ಹೆಕ್ಟೇರುಗಳಷ್ಟು ಹಾಗೂ ಎಣ್ಣೆಕಾಳು ಬೆಳೆಯುವ ಪ್ರದೇಶದಲ್ಲಿ 18 ಲಕ್ಷ ಹೆಕ್ಟೇರುಗಳಷ್ಟು ಹೆಚ್ಚಳವಾಗಿದೆ.

ಈ ರೀತಿ ಆಹಾರ-ಧಾನ್ಯಗಳ ಬೆಳೆಯಿಂದ ಭೂಮಿಯನ್ನು ಬೇರೆ ಬೆಳೆಗಳಿಗಾಗಿ ಬಳಸಿದ್ದರಿಂದ ಈ ಧಾನ್ಯಗಳ ಉತ್ಪಾದನೆ ಇಳಿದು ಬೆಲೆಗಳು ಹೆಚ್ಚಿವೆ. ಆಂಧ್ರಪ್ರದೇಶದಲ್ಲಿ ಅಲ್ಲಿಯ ಕೃಷಿ ಆಯುಕ್ತರ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ತೆಲಂಗಾಣ ಜಿಲ್ಲೆಗಳಲ್ಲಿ ಸುಮಾರು 9 ಲಕ್ಷ ಹೆಕ್ಟೇರುಗಳಲ್ಲಿ ರೈತರು ಜೋಳದ ಬದಲು ಹತ್ತಿ ಬೆಳೆಯಲಾರಂಭಿಸಿದ್ದರಿಂದ ಜೋಳದ ಬೆಲೆ ಇತರ ಧಾನ್ಯಗಳ ಬೆಲೆಗಳಿಗಿಂತ ಹೆಚ್ಚಿನ ವೇಗದಲ್ಲಿ ಏರಿದೆ.

ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಹತ್ತಿ ಉತ್ಪಾದನೆಯಲ್ಲಿ 70% ನ್ನು ಗೇಣಿ ಕಟ್ಟುವ ರೈತರು ಗೇಣಿಗೆ ಪಡೆದ ಭೂಮಿಯಲ್ಲಿ ಸಾಲ ಪಡೆದು ಮಾಡಿದ್ದಾರೆ. ಈ ಸಾಲದಲ್ಲಿ 10% ಕೂಡಾ ಸಹಕಾರಿ ವಲಯದಿಂದ ಬಂದಿಲ್ಲ, ಬಹುಪಾಲು ಕಮಿಷನ್ ಏಜೆಂಟುಗಳಿಂದ ಕಠಿಣ ಬಡ್ಡಿ ದರಗಳಲ್ಲಿ ಪಡೆದ ಸಾಲಗಳು.

ನೂರು ವರ್ಷಗಳ ಹಿಂದೆಯೂ

1990 ರ ದಶಕದಲ್ಲಿ ಕಂಡು ಬಂದ ಈ ‘ಕಚ್ಚಾ ಹತ್ತಿ ಸುಗ್ಗಿ’, ಒಂದು ಶತಮಾನದ ಹಿಂದೆ 1860 ರ ದಶಕದಲ್ಲಿ ಕಂಡು ಬಂದ ದೃಶ್ಯಗಳಂತೆಯೇ ಇತ್ತು. ಆಗ ಅಮೆರಿಕಾದ ಅಂತರ್ಯುದ್ಧದಿಂದಾಗಿ ಬ್ರಿಟನ್ನಿಗೆ ಹತ್ತಿಯ ಪೂರೈಕೆ ಕಮ್ಮಿಯಾಯಿತು. ಇದರಿಂದ ವಿಶ್ವ ಮಾರುಕಟ್ಟೆಯಲ್ಲಿ ಹತ್ತಿ ಬೆಲೆಗಳು ಏರಿದವು. ದಖ್ಖಣ ಪೀಠ ಭೂಮಿಯ ರೈತರು ವಿಪರೀತ ಸಾಲ ಮಾಡಿಕೊಂಡು ತಮ್ಮ ಹೊಲಗಳಲ್ಲಿ ಹತ್ತಿ ಬೆಳೆಯಲಾರಂಭಿಸಿದರು. ಇದರಿಂದ ಅಂತಹ ಸ್ಥಳಗಳಲ್ಲಿ ಆಹಾರಧಾನ್ಯಗಳ ಬೆಲೆಗಳೂ ಏರಿದ್ದು ‘ಕೊನೆಗೂ ಭಾರತೀಯ ರೈತ ಪ್ರೌಢನಾದ, ವಿಶ್ವ ಬೆಲೆಗಳ ಕಕ್ಷೆಗೆ ಬಂದ’ ಎಂದು ಆಗ ಸಾಮ್ರಾಜ್ಯಶಾಹಿ ಕಣ್ಣೋಟದ ಒಬ್ಬ ಲೇಖಕ ಹೇಳಿದರಂತೆ. ಆದರೆ ಈ ಪ್ರಕರಣ ಮುಂದುವರೆದು ‘ಡೆಕ್ಕನ್ ದಂಗೆ’ಗಳು ನಡೆದವು; ಅಮೆರಿಕನ್ ಅಂತರ್ಯುದ್ಧ ಮುಗಿದಾಗ ವಿಶ್ವ ಹತ್ತಿ ಬೆಲೆಗಳು ಇಳಿದವು. ಆಹಾರಧಾನ್ಯಗಳ ಬೆಲೆಗಳೂ ಇಳಿದವು. ವಿಪರೀತ ಸಾಲ ಹೊತ್ತ ಪುಣೆ, ಅಹಮದ್ ನಗರದ ರೈತರು ತಾವು ಪಡೆದ ಸಾಲಗಳಿಗೆ ತಮ್ಮ ಜಮೀನನ್ನು ಸಾಹುಕಾರರು ಕಿತ್ತುಕೊಳ್ಳುವುದನ್ನು ಕಂಡು ಅವರ ಮೇಲೆ ಹಲ್ಲೆ ಮಾಡಲಾರಂಭಿಸಿದರು. ಸಾಲಪತ್ರಗಳನ್ನು ಸುಟ್ಟುಹಾಕಲಾರಂಭಿಸಿದರು.

ಇತ್ತೀಚಿನ ದಿನಗಳಲ್ಲಿ ಹತ್ತಿ ಬೆಳೆಗಾರರು ಇದೇ ಸನ್ನಿವೇಶಗಳನ್ನು ಬೇರೆ ರೂಪದಲ್ಲಿ ಎದುರಿಸುತ್ತಿದ್ದಾರೆ. ಪ್ರತಿಯೊಂದು ಪ್ರಾಥಮಿಕ ಸರಕಿನ ಅಥವಾ ಕಚ್ಚಾ ಸಾಮಗ್ರಿಯ ವಿಶ್ವ ಬೆಲೆಗಳಲ್ಲಿ ವಿಪರೀತ ಏರು-ಪೇರುಗಳಿರುತ್ತವೆ. ಆದರೆ ಯಾವುದೇ ಬೆಳೆಗೆ ವಿಪರೀತ ಬೆಲೆ ಇದ್ದಾಗಲೂ ರೈತರಿಗೆ ಸಿಗುವುದು ಅದರ ಒಂದು ಸಣ್ಣ ಪಾಲು ಮಾತ್ರ. ವಿಶ್ವ ಬೆಲೆಗಳು ಏರಿದಾಗ ಅದರ ಸಿಂಹಪಾಲು ಮಧ್ಯವರ್ತಿಗಳಿಗೆ ಮತ್ತು ರಫ್ತುದಾರರಿಗೇ ಹೋಗುತ್ತದೆ. ವಿದೇಶಗಳಲ್ಲಿರುವ ಬೆಲೆಗಳ 5 ರಿಂದ 8 ಶೇಕಡಾ ಮಾತ್ರ ರೈತನಿಗೆ ದಕ್ಕುತ್ತದೆ ಎಂದು ಕೆಲವು ಅಧ್ಯಯನಗಳು ತೋರಿಸಿವೆ.

ಬಾಧಕಗಳು ರೈತನ ಮೇಲೆಯೇ

ಹೀಗೆ ವಾಣಿಜ್ಯ ಬೆಳೆಗಳನ್ನು ಹೆಚ್ಚು ಬೆಳೆಸುವುದರ ಸಂಪೂರ್ಣ ಬಾಧಕಗಳು ರೈತನ ಮೇಲೆಯೇ ಇರುತ್ತದೆ. ಮುಂಗಡ ಸಾಲ ನೀಡುವ ಕಮಿಷನ್ ಏಜೆಂಟರು ಮತ್ತು ಆಗತ್ಯವಿಲ್ಲದಿದ್ದರೂ ವಿಪರೀತ ಕೀಟ ನಾಶಕಗಳನ್ನು ಬಳಸುವಂತೆ ಮಾಡಿ ತಮ್ಮ ಮಾರಾಟವನ್ನು ಹೆಚ್ಚಿಸಬಯಸುವ ಕೀಟನಾಶಕ ತಯಾರಕರು ಮತ್ತು ವ್ಯಾಪಾರಸ್ಥರು ಇದನ್ನು ಇನ್ನಷ್ಟು ತೀವ್ರಗೊಳಿಸುತ್ತಾರೆ. ಹತ್ತಿ ಬೆಳೆ ಹಲವು ಕೀಟಗಳಿಗೆ ಬಲಿಯಾಗುವಂತದ್ದು. ವ್ಯಾಪಾರಸ್ಥರಿಂದಾಗಿ ಹುಚ್ಚಾಪಟ್ಟೆ ರಾಸಾಯನಿಕ ಕೀಟನಾಶಕಗಳ ಬಳಕೆ ಹಾಗೂ ಕಳಪೆ ಕೀಟನಾಶಕಗಳಿಂದಾಗಿ ಕೀಟಗಳ ಪ್ರತಿರೋಧ ಬೆಳೆದಿದ್ದು ಭಾರೀ ಬೆಲೆ ಬಾಳುವ ಕೀಟನಾಶಕಗಳನ್ನು ಬಳಸಿದರೂ ಸ್ವಲ್ಪವಾದರೂ ಬೆಳೆಯನ್ನು ಉಳಿಸಿಕೊಳ್ಳಲಾಗದೆ ರೈತರು ಒದ್ದಾಡುವಂತಾಗಿದೆ. ದಿವಾಳಿಯೆದ್ದ ರೈತ ತನ್ನ ಸಾಲ ಮನ್ನಾ ಮಾಡಿಕೊಳ್ಳಬಹುದು. ಆದರೆ ಹಾಗೆ ದಿವಾಳಿಯೆಂದು ಸಾರಿದ ಮೇಲೆ ಭವಿಷ್ಯದಲ್ಲಿ ಸಾಲವೇ ಸಿಗದಂತಾಗುತ್ತದೆ.

ರಾಜ್ಯ ಮಟ್ಟದ ‘ಸಂರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮ’ವನ್ನು ಜಾರಿಗೆ ತರಲು ಕಟಿಬದ್ಧವಾದಂತಿರುವ ಆಂಧ್ರಪ್ರದೇಶದ ಸರಕಾರದ ನೀತಿಗಳ ತರ್ಕದ ಪ್ರಕಾರ ವಿಶ್ವ ಬೆಲೆಗಳ ಏರು-ಪೇರು ಹಾಗೂ ಕೀಟಗಳ ತೊಂದರೆಗಳನ್ನು ಎದುರಿಸುತ್ತಾ ರೈತ ‘ಸ್ಪರ್ಧೆ’ಯೆದುರಿಸಲು ಸಮರ್ಥವಾಗುವ ದಕ್ಷತೆ ಪಡೆಯಬೇಕು. ಆದರೆ ಇಂತಹ ಸ್ಪರ್ಧೆಯನ್ನು ಎದುರಿಸಬೇಕೆನ್ನುವ ದೇಶಗಳೇ ತಮ್ಮ ಪ್ರತಿ ರೈತನಿಗೆ ಪ್ರತಿವರ್ಷ 25 ಸಾವಿರದಿಂದ 30 ಸಾವಿರ ಡಾಲರುಗಳಷ್ಟು ಸಬ್ಸಿಡಿ ಕೊಡುತ್ತದೆ ಎಂಬ ಅಂಶವನ್ನು ಮಾತ್ರ ಮರೆಯಲಾಗಿದೆ.

ಲಾಗುವಾಡುಗಳಿಗೆ ಹಣ ತೊಡಗಿಸಲು ವಿಪರೀತ ಸಾಲ, ಗೇಣಿ ತೆರಲಾಗದ ಪರಿಸ್ಥಿತಿ ಹಾಗೂ ಮುಂದೆ ಸಾಲ ಸಿಗಲಾರದ ಪರಿಸ್ಥಿತಿಯಿಂದಾಗಿ ಹಲವು ರೈತರು ತಮ್ಮ ವಿನಾಶದಲ್ಲಿ ದೊಡ್ಡ ಪಾತ್ರ ವಹಿಸಿದ ಕೀಟನಾಶಕಗಳನ್ನೇ ತಿಂದು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. 1870 ರ ದಶಕದಲ್ಲಿ ಇಂತಹ ಪರಿಸ್ಥಿತಿ ಬಂದೊದಗಿದ ರೈತರು ‘ದಂಗೆ’ ಯೆದ್ದಿದ್ದರು. ಆದರೆ ಇಂದು ಸ್ವತಂತ್ರ ಭಾರತದಲ್ಲಿ ಸಾಲ ಕೊಡುವವರು ವ್ಯಕ್ತಿಗಳಲ್ಲ, ಸಾಮಾನ್ಯವಾಗಿ ಗುರುತು-ಪತ್ತೆಯಿಲ್ಲದ ಸಂಸ್ಥೆಗಳು; 1991 ರಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಆದ್ಯತೆ ವಲಯದ ಸಾಲ ನೀಡಿಕೆಯಲ್ಲಿ ಕಡಿತ ಹಾಗೂ ನಿರ್ಲಕ್ಷ್ಯ, ರಾಜ್ಯ ಸರಕಾರಗಳ ‘ಉದಾರೀಕರಣ’ ಮಂತ್ರ ಜಪದಿಂದಾಗಿ ಆರ್ಥಿಕವಾಗಿ ದುರ್ಬಲರಾದ ಗೇಣಿ ರೈತರಿಗೆ ಈ ವೈಯಕ್ತಿಕ ಪರಿಹಾರವಲ್ಲದೆ ಬೇರೇನೂ ಕಾಣುತ್ತಿಲ್ಲ. ತಮ್ಮ ಕುಟುಂಬದವರನ್ನು ಸಾವಿನ ನಂತರ ಈ ಕ್ರೂರ ಜಗತ್ತನ್ನು ಎದುರಿಸಲು ಬಿಟ್ಟು ಹೋಗುತ್ತಾರೆ.

ನಿಜ ಆತ್ಮಹತ್ಯೆ ಪ್ರಕರಣಗಳು ಹತ್ತಿ ಬೆಳೆಯುವ ರೈತರಿಗೆ ಸೀಮಿತವಾಗಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಆರ್ಥಿಕವಾಗಿ ದುರ್ಬಲರಾದ ರೈತರು ಎಲ್ಲಾ ರೀತಿಯ ಅಪಾಯಗಳಿಗೆ, ಬಾಧಕಗಳಿಗೆ ತಮ್ಮನ್ನು ಒಡ್ಡಿಕೊಳ್ಳಬೇಕಾಗಿ ಬರುತ್ತದೆ. ರಫ್ತು ಆಧಾರಿತ ಸಾಗುವಳಿಯಲ್ಲಿ ಬಹಳ ಬಾಧಕಗಳಿವೆ ನಿಜ. ಆದರೆ ಸ್ಥಳೀಯ ಮಾರುಕಟ್ಟೆಗಾಗಿ ಬೆಳೆಯುವಲ್ಲಿಯೂ ಈ ಅಂಶಗಳು ಇರುತ್ತವೆ. ವಿಶೇಷವಾಗಿ ಅಭಿವೃದ್ಧಿಯ ಮೇಲೆ ಸಾರ್ವಜನಿಕ ಖರ್ಚನ್ನು ಸರಕಾರಗಳು ಕಮ್ಮಿ ಮಾಡಿರುವುದರಿಂದಾಗಿ ಸಣ್ಣ ಬೆಳೆಗಾರರಿಗೆ ಪೂರಕ ಆದಾಯದ ಆಗಿರುವ ಅವಕಾಶಗಳು ಕಡಿತವಾಗಿರುವ ಸನ್ನಿವೇಶದಲ್ಲಿ ಅವರ ಸ್ಥಿತಿ ಇನ್ನಷ್ಟು ಶೋಚನೀಯವಾಗುತ್ತದೆ.

ಎಲ್ಲಾ ಸಣ್ಣ ಪ್ರಮಾಣದ ವಾಣಿಜ್ಯ ಬೆಳೆಗಳ ಬೆಳೆಗಾರರು ಸಂಸ್ಥೆಗಳಿಂದ ಅಥವಾ ಲೇವಾದೇವಿಗಾರರಿಂದ ವಿಪರೀತ ಬಡ್ಡಿ ದರದಲ್ಲಿ ಸಾಲ ಪಡೆಯಲೇಬೇಕಾಗುತ್ತದೆ. ಹತ್ತಿ ಬೆಳೆಗಾರರಷ್ಟೇ ಅಲ್ಲ ಉತ್ತರ ಕರ್ನಾಟಕದ ತೊಗರಿ ಬೇಳೆ, ಮೆಣಸು ಹಾಗೂ ಮೆಕ್ಕೆ ಜೋಳದ ಬೆಳೆಗಾರರು ದೇಶಿ ಮಾರುಕಟ್ಟೆಗಾಗಿ ಉತ್ಪಾದಿಸುತ್ತಿದ್ದರೂ ಅನಿರೀಕ್ಷಿತ ಹವಾಮಾನದಿಂದಾಗಿ ಬೆಳೆ ದಕ್ಕದೆ ವಿಪರೀತ ಸಾಲದ ಬಲೆಯಲ್ಲಿ ಸಿಲುಕಿದ್ದಾರೆ.


ಪಂಜಾಬ್, ಹರ್‍ಯಾಣಗಳಲ್ಲಿ

ಇನ್ನು ಪಂಜಾಬ್, ಹರ್‍ಯಾಣ ಗಳಲ್ಲಿಯೂ ಕಳೆದ ಕೆಲವು ವರ್ಷಗಳಿಂದ ದೊಡ್ಡ ಪ್ರಮಾಣದಲ್ಲಿ ರೈತರ ಆತ್ಮಹತ್ಯೆಗಳು ಬೆಳಕಿಗೆ ಬರುತ್ತಿವೆ. ಅವರ ಸಂಬಂಧಿಕರು ಮರಣೋತ್ತರ ಪರೀಕ್ಷೆಗಳನ್ನು ತಪ್ಪಿಸಬಯಸುವುದರಿಂದ ಸಾಮಾನ್ಯವಾಗಿ ಇವು ಪ್ರಕಟವಾಗಿಲ್ಲ. ಇದು ಕೆಲವರಿಗೆ ಆಶ್ಚರ್ಯವನ್ನುಂಟು ಮಾಡಬಹುದು. ಆದರೆ ರಾಜ್ಯವಾರು ಗ್ರಾಮೀಣ ಬಡತನದಲ್ಲಿನ ಪ್ರವೃತ್ತಿಗಳ ವಿಶ್ಲೇಷಣೆ ಮಾಡಿದವರಿಗೆ ಇದು ಆಶ್ಚರ್ಯದ ಸಂಗತಿಯೇನಲ್ಲ. 1990 ರ ದಶಕದಿಂದ ‘ಸಂರಚನಾ ಹೊಂದಾಣಿಕೆ’ಯ ಭಾಗವಾಗಿ ಗ್ರಾಮೀಣ ಅಭಿವೃದ್ಧಿಯ ಮೇಲಿನ ಸಾರ್ವಜನಿಕ ಖರ್ಚನ್ನು ತೀವ್ರವಾಗಿ ಕಡಿತ ಮಾಡಿದ್ದರಿಂದ ಕೃಷಿಯೇತರ ಉದ್ಯೋಗಾವಕಾಶ ಇಳಿಮುಖವಾಗಿ ಪಂಜಾಬ್ ಮತ್ತು ಹರ್‍ಯಾಣ ಎರಡೂ ಕಡೆ ಗ್ರಾಮೀಣ ಬಡತನ ಹೆಚ್ಚಿದೆ. ಬಿಹಾರ ಮತ್ತು ಒರಿಸ್ಸಾ ಬಿಟ್ಟರೆ ದೇಶದ ಇತರೆಡೆಗಳಂತೆ ಹೆಚ್ಚಿನ ಪ್ರಮಾಣದಲ್ಲಿ ಇದು ಹೆಚ್ಚಿದೆ. ಇದುವರೆಗೆ ದೇಶದ ಅತ್ಯಂತ ಸಮೃದ್ಧಿಶೀಲ ಪ್ರದೇಶಗಳೆನಿಸಿದ ಈ ಎರಡು ರಾಜ್ಯಗಳಲ್ಲಿ ಹಲವು ಸಣ್ಣ ಮತ್ತು ಮಧ್ಯಮ ರೈತರ ಆತ್ಮಹತ್ಯೆಗಳಿಗೂ ತೀರಿಸಲಾಗದ ವಿಪರೀತ ಸಾಲ, ನಿರುದ್ಯೋಗಕ್ಕೂ ನೇರ ಸಂಬಂಧವಿದೆ.

ಹೊಸ ಬಿಜೆಪಿ ಸರಕಾರ ಇದೇ ಸಂದರ್ಭದಲ್ಲಿ ಸರಿಯಾಗಿ ಯೋಚಿಸದೆ ಹೊಸ ಆಮದು-ರಫ್ತು ಧೋರಣೆ ಪ್ರಕಟಿಸಿದೆ. ಇದು ಹಲವಾರು ಕೃಷಿ ಸರಕುಗಳ ಮೇಲಿನ ಲೈಸೆನ್ಸ್ ಮಿತಿಗಳನ್ನು ರದ್ದು ಮಾಡಿ ಬೇಕಾಬಿಟ್ಟಿಯಾಗಿ ಆಮದು ಮಾಡಲು ಅವಕಾಶ ಕೊಡುತ್ತದೆ. ತರಕಾರಿಗಳು, ಖಾದ್ಯ ತೈಲಗಳು, ರಬ್ಬರನ್ನು ಕೂಡಾ ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಇದು ಈ ಬೆಳೆಗಳನ್ನು ಬೆಳೆಸುವ ರೈತರ ಸಮಸ್ಯೆಗಳನ್ನು ಇನ್ನಷ್ಟು ಹೆಚ್ಚಿಸುತ್ತದೆ. ಪ್ರಸ್ತುತ ಘಟ್ಟದಲ್ಲಿ ತುರ್ತಾಗಿ ಆಗಬೇಕಾದ್ದೆಂದರೆ ಕೃಷಿಯನ್ನು ತಟ್ಟುವ ಸಾಲ ವ್ಯವಸ್ಥೆ, ಗ್ರಾಮೀಣ ಪ್ರದೇಶಗಳಲ್ಲಿ ಸಾರ್ವಜನಿಕ ಖರ್ಚು, ರಫ್ತು ಒತ್ತಡ ಮುಂತಾದ ಧೋರಣೆಗಳ ಬಗ್ಗೆ ಒಂದು ಸಮಗ್ರ ಮರು ಚಿಂತನೆ ಹಾಗೂ ಅದರ ಆಧಾರದಲ್ಲಿ ಧೋರಣೆಗಳನ್ನು ಪುನರೂಪಿಸಬೇಕಾಗಿದೆ.

ಪರಮಾಣು ಸಾಧನ ಪರೀಕ್ಷಾ ಸ್ಫೋಟ : ಏತಕ್ಕಾಗಿ?

ಮೇ 11 ರಿಂದ ಮೇ 13 ವರೆಗೆ 5 ಪರಮಾಣು ಸಾಧನಗಳ ಪರೀಕ್ಷಾರ್ಥ ಸ್ಫೋಟ ಬಿ.ಜೆ.ಪಿ. ನೇತೃತ್ವದ ಸರಕಾರದ ಒಂದು ದೊಡ್ಡ ಸಾಧನೆಯೆಂಬಂತೆ ಡಂಗುರ ಸಾರಲಾಗುತ್ತಿದೆ. ಎಲ್ಲೆಡೆ 'ದೇಶಭಕ್ತಿ' ಉಕ್ಕಿ ಹರಿಯುತ್ತಿರುವಂತ ಕಾಣುತ್ತಿದೆ. ಆದರೆ ಆ ಭಾವೋದ್ರೇಕದ ನಡುವೆಯೂ ತರ್ಕಬದ್ಧ ಯೋಚನೆಗೆ ಮಂಪರು ಬಡಿದಿಲ್ಲ. ಈ ಅಭಿಪ್ರಾಯಗಳಲ್ಲಿ ಕಂಡುಬರುವ ಒಂದು ಸಾಮಾನ್ಯ ಸಂಗತಿಯೆಂದರೆ ನಮ್ಮ ಉಪಖಂಡದಲ್ಲಿ ಅಭದ್ರತೆ ಹುಟ್ಟಿಸಬಹುದೆಂಬ ಆತಂಕ ಹಾಗೂ ಇದರ ಹಿಂದಿರುವ ಬಿ.ಜೆ.ಪಿ.ಯ ನಿಜವಾದ ಲೆಕ್ಕಾಚಾರ. ಮಾಧ್ಯಮಗಳಲ್ಲಿ ಪ್ರಕಟವಾದ ಕೆಲವು ಪ್ರತಿಕ್ರಿಯೆಗಳು:



ಕೈಗಾರಿಕಾ ಹಿಂಜರಿತ ಮುಗಿದುಬಿಡುತ್ತದೆ, ಅಪ್ಪಾ. ಜನ ಈ ಹೊಸ ಡಿಸೈನಿನ ಟಿ.ವಿ., ರಿಫ್ರಿಜರೇಟರ್‌ಗಳನ್ನು ಇಷ್ಟ ಪಡುತ್ತಾರೆ.

ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಉನ್ನಿ ವ್ಯಂಗ್ಯ

"ವಿನಾಶಕಾರಿ ಅಸ್ತ್ರಗಳಿಂದಲ್ಲ..."

ರಾಷ್ಟ್ರೀಯ ಭದ್ರತೆ ಕುರಿತು ಭಾರತೀಯ ಜನತಾ ಪಕ್ಷದ ನೇತೃತ್ವದ ಸಮ್ಮಿಶ್ರ ಸರಕಾರದ ಇತ್ತೀಚಿನ ಚಿಂತನೆ ಅರಿತವರಿಗೆ ಸೋಮವಾರ ರಾಜಸ್ಥಾನದ ಪೋಖ್ರಾನ್ ನಲ್ಲಿ ನಡೆಸಿದ ಮೂರು ಅಣ್ವಸ್ತ್ರ ಸಾಧನಗಳ ಪರೀಕ್ಷಾರ್ಥ ಪ್ರಯೋಗದಿಂದ ಆಶ್ಚರ್ಯವೇನೂ ಉಂಟಾಗದು. ಆದರೆ ಈ ಪರೀಕ್ಷಾರ್ಥದ ಸ್ಫೋಟ ನಡೆಸಿದ್ದರ ಹಿಂದಿಣ ಲೆಕ್ಕ, ವಿಚಾರಧಾರೆ ಮತ್ತು ಔಚಿತ್ಯ ಜ್ಞಾನಗಳನ್ನು ನಿರ್ವಿವಾದವೆಂದು ಒಪ್ಪಿಕೊಳ್ಳಲಾರದು. ...... ರಕ್ಷಣಾ ನೀತಿ ಮತ್ತು ತಂತ್ರ ಕುರಿತಂತೆ ಸರಕಾರ ಹೇಳಿದ ಪುನರ್ವಿಮರ್ಶೆ ಕಾರ್ಯ ನಡೆದಿಲ್ಲ. ಅದಕ್ಕೂ ಮೊದಲೆ ಅಣ್ವಸ್ತ್ರ ಸಾಧನಗಳ ಪ್ರಯೋಗ ನಡೆದಿದೆ.....

ದೇಶದ ಭದ್ರತೆ ಬಗ್ಗೆ ಆತಂಕ ಮೂಡಿಸುವಂಥ ಹುಯಿಲೆಬ್ಬಿಸಿ ನಂತರ ಪರಿಹಾರವೆಂಬಂತೆ ಮುಂದಿಟ್ಟ ಈ ಪರೀಕ್ಷಾರ್ಥ ಪ್ರಯೋಗವನ್ನು ಜನತೆ ಸರಕಾರದ ಸಾಧನೆ ಎಂದು ತಿಳಿಯುತ್ತಾರೆ ಎಂದು ಭಾವಿಸಿದ್ದರೆ ಅದು ಕೇವಲ ಭ್ರಮೆಯಾದೀತು. ನಮ್ಮ ಗಡಿಗಳನ್ನು ರಕ್ಷಿಸಿಕೊಳ್ಳಬೇಕು, ರಾಷ್ಟ್ರ ಭದ್ರತೆ ಕಾಪಾಡಿಕೊಳ್ಳಬೇಕು ಎಂಬುದನ್ನು ಯಾರೂ ಅಲ್ಲಗಳೆಯಲಾರರು. ಆದರೆ ವಿನಾಶಕಾರಿ ಅಸ್ತ್ರಗಳಿಂದಲ್ಲ. ಅಣ್ವಸ್ತ್ರದಂಥ ಪ್ರಯೋಗಗಳಿಂದ ಜನರ ಮನಸ್ಸನ್ನು ಹೆಚ್ಚು ಕಾಲ ಜ್ವಲಂತ ಸಮಸ್ಯೆಗಳಿಂದ ದೂರವಿಡಲಾಗದು ಎಂಬುದನ್ನು ಸಮ್ಮಿಶ್ರ ಸರ್ಕಾರ ಅರಿತುಕೊಳ್ಳಬೇಕು. ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಇಂಥ ಹಲವಾರು ಜ್ವಲಂತ ಸಮಸ್ಯೆಗಳಿಗೆ ಸಿಗಬೇಕಾದ ಆದ್ಯತೆ ಅಣ್ವಸ್ತ್ರಕ್ಕೆ ದೊರೆತಿರುವುದು ಅಹಿಂಸೆಯ ನಾಡಿನ ಒಂದು ವಿಪರ್ಯಾಸ

- 'ಪ್ರಜಾವಾಣಿ' ಸಂಪಾದಕೀಯ 13-5-91

ಕಚ್ಚಾಟ ಹಿನ್ನೆಲೆಗೆ

ಮೂರು ಪರಮಾಣು ಪರೀಕ್ಷೆಗಳ ಒಂದೇ ಏಟಿನಿಂದ ಬಿ.ಜೆ.ಪಿ. ನೇತೃತ್ವದ ಸಮ್ಮಿಶ್ರ ಸರಕಾರ ಆಂತರಿಕ ಕಚ್ಚಾಟಗಳಿಂದ ಉಂಟಾಗಿರುವ ಆಂತರಿಕ ಒತ್ತಡಗಳನ್ನು ಎಸೆದು ಬಿಡುವಲ್ಲಿ ಯಶಸ್ವಿಯಾದಂತೆ ಕಾಣುತ್ತದೆ. ಈ ಸಮ್ಮಿಶ್ರ ಸರಕಾರ ಅಧಿಕಾರಕ್ಕೆ ಬಂದಂದಿನಿಂದ ಪ್ರತಿದಿನ ಸುದ್ದಿಯಾಗುತ್ತಿದ್ದ ಕಚ್ಚಾಟ ಹಿನ್ನೆಲೆಗೆ ಸರಿದಿದೆ.

- ಡೆಕ್ಕನ್ ಹೆರಾಲ್ಡ್ ನ್ಯೂಸ್ ಸರ್ವೀಸ್

"ಯುದ್ಧಕೋರ ದುರಭಿಮಾನವಾಗಿ ಅವನತಿಗೊಳ್ಳದಿರಲಿ"

ಇಂತಹ ಗಂಭೀರ ಕ್ಷಣದಲ್ಲಿ ಭಾರತದ ರಕ್ಷಣಾ ಸಿದ್ಧತೆಯನ್ನು ದೃಢಗೊಳಿಸಿದ ಒಂದು ವೈಜ್ಞಾನಿಕ ಸಾಧನೆಯ ಬಗ್ಗೆ ಸಹಜವಾದ ರಾಷ್ಟ್ರೀಯ ಹೆಮ್ಮೆಯನ್ನು ಒಂದು ಯುದ್ಧಕೋರ ದುರಭಿಮಾನದ ಮಟ್ಟಕ್ಕಿಳಿಸುವ ಪ್ರಲೋಭನೆಗೊಳಗಾಗದಂತೆ ನೋಡಿಕೊಳ್ಳುವುದು ಮುಖ್ಯ. ಇಲ್ಲವಾದರೆ ನಮ್ಮ ಪ್ರದೇಶದ ಭದ್ರತಾ ವಾತಾವರಣ ಕರಾಳಗೊಳ್ಳುತ್ತದಷ್ಟೆ. ಭಾರತದ ಪರಮಾಣು ಶಸ್ತ್ರಾಸ್ತ್ರ ಸ್ಥಾನಮಾನ ಪ್ರಕಟವಾಗುವುದರೊಂದಿಗೆ ಪಾಕಿಸ್ತಾನ ಕೂಡಾ ಇದೇ ರೀತಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುವ ಒತ್ತಡಕ್ಕೆ ಮಣಿಯುವುದು ಅನಿವಾರ್ಯವಾಗುತ್ತದೆ. 1974ರ ಮೊದಲ ಸ್ಫೋಟದ ಮೂರುದಶಕದ ನಂತರ, ಭಾರತದ ಪರಮಾಣು ಸಾಮರ್ಥ್ಯದ ವಿಶ್ವಾಸಾರ್ಹತೆಯನ್ನು ತೋರಿಸುವ ಪ್ರಯತ್ನ ಪ್ರಾಥಮಿಕವಾಗಿ ಪಾಕಿಸ್ತಾನ ಅಥವಾ ಚೀಣಾದ ವಿರುದ್ಧ ವೈಷಮ್ಯದಿಂದ ಪ್ರೇರಿತವಾದದ್ದು ಎಂದು ಕಾಣದಂತೆ ವಾಜಪೇಯಿ ಸರಕಾರ ನೋಡಿಕೊಳ್ಳಬೇಕು.

.... ಮುಂದೆ ಸಾಗುವ ಒಂದೇ ದಾರಿಯೆಂದರೆ ಎರಡೂ ದೇಶಗಳಿಗೆ ಪರಮಾಣು ಸಾಮರ್ಥ್ಯಗಳಿವೆ ಎಂಬ ವಾಸ್ತವತೆಯನ್ನು ಒಪ್ಪಿಕೊಂಡು ಪಾಕಿಸ್ತಾನದೊಡನೆ ಪರಸ್ಪರ ವಿಶ್ವಾಸ ಕುದುರಿಸುವ ಮಾತುಕತೆ ನಡೆಸುವುದು. ಭಾರತ ಈ ಪ್ರಯತ್ನ ನಡೆಸದಿದ್ದರೆ ಸೋಮವಾರದ ಪರೀಕ್ಷೆಗಳಿಂದ ಪಡೆದ ಪ್ರಯೋಜನಗಳಿಗಿಂತ ಅದಕ್ಕೆ ತೆರಬೇಕಾದ ಬೆಲೆ ವಿಶ್ವವ್ಯಾಪಕವಾಗಿ ಹಾಗೂ ಪ್ರಾದೇಶಿಕವಾಗಿ ಬಹಳ ಹೆಚ್ಚಾಗುವುದನ್ನು ತಡೆಯಲು ಕಷ್ಟವಾದೀತು.

'ದಿ ಹಿಂದೂ' ಸಂಪಾದಕೀಯ 13-5-1998

'ಕಾರ್ಯಕರ್ತರ ತಳಮಳವನ್ನು ತಡೆಯಲು?'

ರಾಷ್ಟ್ರೀಯ ಭದ್ರತೆ ಈಗ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ಇತ್ತೀಚಿನ ರಾಗ. ಸಂಘ ಪರಿವಾರ ತನ್ನ ಕಾರ್ಯಕರ್ತರಲ್ಲಿ ಹುರುಪು ತುಂಬಲು ಸೋಮವಾರದ ಪರಮಾಣು ಪರೀಕ್ಷಣೆಗಳಿಂದ ಉಂಟಾಗಿದೆಯೆನ್ನಲಾದ ಭಾವೋದ್ರೇಕದಿಂದ ಪ್ರಯೋಜನ ಪಡೆಯುವ ನಿರೀಕ್ಷೆಯಲ್ಲಿದೆ. ಮಿತ್ರಪಕ್ಷ ಗಳೊಂದಿಗೆ ಸಮ್ಮಿಶ್ರ ಸರಕಾರದಲ್ಲಿರುವಾಗ ಅಯೋಧ್ಯೆಯ ಮೇಲೆ ಕರ್ಕಶವಾದ ಸಾರ್ವಜನಿಕ ಆಲಾಪನೆ ಸಾಧ್ಯವಿಲ್ಲ ಎಂದು ಸಂಘ ಪರಿವಾರಕ್ಕೆ ತಿಳಿದಿದೆ.

ವಾಸ್ತವವಾಗಿ, ಒಂದು ಕಾಕತಾಳವೆಂದರೆ ಆರ್‌ಎಸ್‌ಎಸ್ ಮುಖವಾಣಿ 'ಆರ್ಗನೈಸರ್' ಮೇ 17 ರ ಸಂಚಿಕೆಯ ಮುಖ್ಯ ವಿಷಯ 'ಪರಮಾಣು ಭಾರತ' ಎಂಬುದು. ಪರೀಕ್ಷಣೆ ನಡೆದ ಕೆಲವೇ ಗಂಟೆಗಳಲ್ಲಿ ಅದು ಪ್ರಕಟವಾಯಿತು.

..... ಮೊದಲ ಪೋಖ್ರಾನ್ ಸ್ಫೋಟದ 25 ವಾರ್ಷಿಕೋತ್ಸವ ಹಾಗೂ ಆ ಸಂಚಿಕೆಯ ಲೇಖನಗಳಲ್ಲಿ ಪಾಕಿಸ್ತಾನ ಮತ್ತು ಚೀಣಾ ಬೆದರಿಕೆಗಳನ್ನು ಒಡ್ಡಿವೆಯೆನ್ನುತ್ತಾ ಭಾರತ ತನ್ನ ಪರಮಾಣು ಆಯ್ಕೆಯನ್ನು ಮಾಡಿಕೊಳ್ಳಬೇಕು ಎನ್ನಲಾಗಿದೆ......ಬಿಜೆಪಿ ಕಾರ್ಯಕರ್ತರ ತಳಮಳ ಹಾಗೂ ಒಂದು ನಿರ್ದಿಷ್ಟ ದಿಕ್ಕಿನ ಅಗತ್ಯ ಗಾಂಧಿನಗರದಲ್ಲಿ ಈ ತಿಂಗಳ ಆರಂಭದಲ್ಲಿ ನಡೆದ ಪಕ್ಷದ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಸ್ವಯಂವೇದ್ಯವಾಗಿತ್ತು. ಪರಮಾಣು ಪರೀಕ್ಷಣೆಗಳು ಈ ಎರಡೂ ಉದ್ದೇಶಗಳನ್ನು ಈಡೇರಿಸಿವೆ.

- ಇಂಡಿಯನ್ ಎಕ್ಸ್‌ಪ್ರೆಸ್ ನಲ್ಲಿ ಸುದ್ದಿ ವಿಶ್ಲೇಷಣೆ 13.5.98

"ನೆರೆಯ ರಾಷ್ಟ್ರಗಳೊಂದಿಗೆ ಬಾಂಧವ್ಯಕ್ಕೆ ಕುಂದು ತರುವ ಹಾಗೂ ಅನಗತ್ಯವಾಗಿ ಆತಂಕಕ್ಕೆಡೆ ಮಾಡಿಕೊಡುವ ಇಂಥ ಅಣುಸಾಧನದ ಪರೀಕ್ಷೆಯ ಅಗತ್ಯವಿರಲಿಲ್ಲ. ಭಾರತ ನಡೆಸಿದ ಈ ಪರೀಕ್ಷೆಯಿಂದ ಇತರೆ ರಾಷ್ಟ್ರಗಳೂ ಅದೇ ಮಾರ್ಗ ಹಿಡಿಯಬಹುದು.

ಶತ್ರುರಾಷ್ಟ್ರಗಳ ಮೇಲೆ ಅಣುಬಾಂಬ್ ಹಾಕಿ ಆ ದೇಶವನ್ನು ಯುದ್ಧದಲ್ಲಿ ಗೆಲ್ಲುವುದು ಯಾವ ರಾಷ್ಟ್ರಕ್ಕೂ ಸಾಧ್ಯವಿಲ್ಲ. ನಮ್ಮ ದೇಶ ಎಲ್ಲಾ ಕ್ಷೇತ್ರಗಳಲ್ಲೂ ಬಲಿಷ್ಠವಾಗಿರಬೇಕು

- ಡಾ|| ಹೆಚ್. ನರಸಿಂಹಯ್ಯ

ಟೈಮ್ಸ್ ಆಫ್ ಇಂಡಿಯಾದಲ್ಲಿ ಆರ್.ಕೆ.ಲಕ್ಷ್ಮಣ್ ವ್ಯಂಗ್ಯ



ಪ್ರಗತಿಪರ ಜನಸಮುದಾಯ ಪತ್ರಿಕೆ ಬಿಡುಗಡೆ

ಮಂಗಳೂರು : ಪ್ರಜಾಪ್ರಭುತ್ವೀಯ ವ್ಯವಸ್ಥೆಯ ನಾಲ್ಕನೆಯ ಆಧಾರ ಸ್ತಂಭವಾಗಿ ಸಮಾಜದ ಸರ್ವಾಂಗೀಣ ಅಭಿವೃದ್ಧಿಯ ಕೆಲಸದಲ್ಲಿ ಪತ್ರಿಕಾರಂಗಕ್ಕೆ ಮಹತ್ವದ ಸ್ಥಾನವಿದೆ. ವೈಜ್ಞಾನಿಕ ಮನೋಭಾವ, ಜಾತ್ಯಾತೀತತೆ, ಪ್ರಗತಿಪರ ಚಿಂತನೆ ಇವೇ ಮೊದಲಾದ ಸಂವಿಧಾನದ ಆಶಯಗಳನ್ನು ಪ್ರತಿಬಿಂಬಿಸುವಲ್ಲಿ ಪತ್ರಿಕಾ ಮಾಧ್ಯಮ ತನ್ನ ಚಾರಿತ್ರಿಕ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಬೇಕು ಎಂದು ರಾಜ್ಯದ ಕೈಗಾರಿಕಾ ಸಚಿವರೂ, ದ.ಕ. ಜಿಲ್ಲಾ ಉಸ್ತುವಾರಿ ಸಚಿವರೂ ಆದ ಬಿ.ಎ. ಮೊಯ್ದೀನ್‌ರವರು ಅಭಿಪ್ರಾಯ ಪಟ್ಟರು.

ಅವರು ನಿರಂತರ ಪ್ರಕಾಶನವು ಹೊರತರುತ್ತಿರುವ ಹೊಸ ಮಾಸ ಪತ್ರಿಕೆ 'ಪ್ರಗತಿಪರ ಜನಸಮುದಾಯ"ವನ್ನು ಬಿಡುಗಡೆಗೊಳಿಸುತ್ತಾ ಮಾತನಾಡಿದರು. ಪತ್ರಿಕಾ ಮೌಲ್ಯಗಳ ಕುಸಿತದ ಬಗ್ಗೆ ವ್ಯಕ್ತಿಗಳ ಅವಹೇಳನದಂತಹವುಗಳ ಬಗ್ಗೆಯೇ ಹೆಚ್ಚಿನ ವರದಿಗಳು ಬರುತ್ತಿದ್ದು ಜನಸಾಮಾನ್ಯರ ನೋವು ದುಃಖಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ವಸ್ತುನಿಷ್ಠ ವರದಿ ಬರುತ್ತಿಲ್ಲ. ಆದರೆ ಪ್ರಗತಿಪರ ಜನಸಮುದಾಯವು ಪ್ರಗತಿಪರ, ಜನರಪರವಾಗಿರಲಿ ಮತ್ತು ಸಮುದಾಯಕ್ಕೆ ತನ್ನನ್ನು ಅರ್ಪಿಸಿಕೊಂಡಿರಲಿ ಎಂದು ಆಶಿಸಿದರು.

ಮುಖ್ಯ ಅತಿಥಿಯಾಗಿದ್ದ ಮಹಾನಗರ ಪಾಲಿಕೆ ಕಮಿಷನರ್ ಎ.ಬಿ. ಇಬ್ರಾಹಿಂರವರು ಕರ್ನಾಟಕದಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದ್ದು ಕೇರಳ, ಪಶ್ಚಿಮ ಬಂಗಾಳದಂತೆ ಶೇಕಡಾ ನೂರು ಸಾಕ್ಷರತೆ ಇಲ್ಲದಿರುವ ಕಾರಣ ಪುಸ್ತಕಗಳನ್ನು ಪತ್ರಿಕೆಗಳನ್ನು ಕ್ರಯಕ್ಕೆ ಪಡೆದು ಓದುವ ಹವ್ಯಾಸ ಕಡಿಮೆ ಇದೆ. ಇದು ಬಡ ರಾಷ್ಟ್ರದ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಉತ್ತಮ ಬೆಳವಣಿಗೆಯಲ್ಲವೆಂದು ಹೇಳಿದರು.


ಸಮಾರಂಭಕ್ಕೆ ಖ್ಯಾತ ಸಾಹಿತಿ ರಂಜಾನ್ ದರ್ಗಾರವರು ತನ್ನ ಶುಭ ಸಂದೇಶವನ್ನು ಕಳುಹಿಸಿ ರಾಜ್ಯದ ಪ್ರಥಮ ಪತ್ರಿಕೆ ಮಂಗಳೂರು ಸಮಾಚಾರ ಹಾಗೂ ದೇಶದ ಪ್ರಥಮ ಪತ್ರಿಕೆ ಬೆಂಗಾಲ್ ಗೆಜೆಟಿಯರ್‌ನಂತಹ ಪತ್ರಿಕಾರಂಗದ ಉನ್ನತ ಆದರ್ಶ, ಪರಂಪರೆಗಳು ಹೊಸ ಪತ್ರಿಕೆಗೆ ಲಭಿಸಲಿ ಎಂದು ಆಶಿಸಿದರು.

ಪತ್ರಿಕೆಯ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಿ.ಐ.ಟಿ.ಯು.ವಿನ ಬಿ. ಮಾಧವರವರು ಅಧ್ಯಕ್ಷ ಭಾಷಣದಲ್ಲಿ ಪ್ರಜಾಪ್ರಭುತ್ವ ಭಾರತದಲ್ಲಿ ಆಗಾಗ ಪತ್ರಿಕಾ ರಂಗದ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಯುತ್ತಿದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ವಿಶ್ವಮಾನ್ಯ ಕವಿ ರವೀಂದ್ರನಾಥ್ ಠಾಗೋರರ ಕವನವನ್ನೂ ಪ್ರಕಟಿಸದೇ ಇದ್ದಂತಹ ಕೆಟ್ಟ ದಾಖಲೆ ಇದೆ. ಉದಾರೀಕರಣ ಅನುಸರಿಸುತ್ತಿರುವ ನಮ್ಮ ಸರಕಾರದ ನೀತಿಗಳಿಂದ ಕೇವಲ ಜಾಹಿರಾತುದಾರರನ್ನು ಓಲೈಸಲಿಕ್ಕಾಗಿಯೇ, ಸತ್ಯ ವಿಷಯಗಳನ್ನು ಮರೆಮಾಚಲಾಗುತ್ತಿದೆ. ಇಂತಹ ಅಪಾಯಗಳ ವಿರುದ್ಧ ಜನತೆ ಎಚ್ಚೆತ್ತಬೇಕೆಂದರು.

ಡಿ.ವೈ.ಎಫ್.ಐ. ರಾಜ್ಯ ಉಪಾಧ್ಯಕ್ಷ ವಸಂತ ಆಚಾರಿಯವರು ದ.ಕ. ಜಿಲ್ಲೆಯಲ್ಲಿ ಎಲ್ಲಾ ಪ್ರಗತಿಪರ ಚಿಂತಕರು, ಸಂಘಟನೆಗಳು, ವ್ಯಕ್ತಿಗಳು ಬದಲಾದ ಇಂದಿನ ರಾಜಕೀಯ ಸನ್ನಿವೇಶದಲ್ಲಿ ಹೊಸ ಜನಪರ ಮೌಲ್ಯಗಳಿಗಾಗಿ ಶ್ರಮಿಸಬೇಕಾಗಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಪತ್ರಿಕೆಯ ಸಂಪಾದಕರಾದ ಕೃಷ್ಣಪ್ಪ ಕೊಂಚಾಡಿಯವರು "ಪ್ರಗತಿಪರ ಜನಸಮುದಾಯ"ವು ಇಡೀ ನಾಗರೀಕ ಸಮಾಜ ಗೌರವಿಸುವ ಉನ್ನತ ಆದರ್ಶ ಧ್ಯೇಯ ಪರಂಪರೆಗಳಿಗೆ ಬದ್ಧವಾಗಿದ್ದು ಸಮಾಜದ ಪ್ರಗತಿಪರ ಬದಲಾವಣೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲಿದೆ ಎಂದು ಹೇಳಿದರು.

ಪತ್ರಿಕೆಯ ಸಂಪಾದಕ ಮಂಡಳಿ ಸದಸ್ಯರಾದ ನಾಗೇಶ್ ಕುಮಾರ್ ಕೆ. ಕಾರ್ಯಕ್ರಮ ನಿರ್ವಹಿಸಿದರು. ಪತ್ರಿಕೆಯ ಪ್ರಕಾಶಕರಾದ ಕೆ. ಯಾದವ ಶೆಟ್ಟಿ ಸ್ವಾಗತಿಸಿದರು. ಸಂಪಾದಕ ಮಂಡಳಿ ಸದಸ್ಯರಾದ ಸುನೀಲ್ ಕುಮಾರ್ ಬಜಾಲ್ ವಂದಿಸಿದರು.



ದಲಿತನ ಕಗ್ಗೊಲೆ : ಸಿ.ಪಿ.ಐ.(ಎಂ) ಖಂಡನೆ

ಚಿಂತಾಮಣಿ ತಾಲ್ಲೂಕಿನ ಕಂಬಾಲಹಳ್ಳಿ ಗ್ರಾಮದ ದಲಿತ ಕುಟುಂಬಕ್ಕೆ ಸೇರಿದ ವೆಂಕಟರಮಣಪ್ಪ ಎಂಬುವರನ್ನು ಮೇ 5ರಂದು ಅದೇ ಗ್ರಾಮದ ಸವರ್ಣೀಯರ ನಾಯಕತ್ವದ ಗುಂಪೊಂದು ವೆಂಕಟರಮಣಪ್ಪ ನವರ ಮನೆಗೆ ನುಗ್ಗಿ ಕಲ್ಲುಗಳಿಂದ ಹೊಡೆದು ಅಮಾನುಷವಾಗಿ ಕೊಲೆ ಮಾಡಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತಾಲ್ಲೂಕು ಸಮಿತಿಯು ಉಗ್ರವಾಗಿ ಖಂಡಿಸಿದೆ.

ಹಳೆಯ ವೈಷಮ್ಯವನ್ನು ನೆಪವಾಗಿಟ್ಟುಕೊಂಡು ದಲಿತ ಕುಟುಂಬಕ್ಕೆ ಸೇರಿದ ವೆಂಕಟರಮಣಪ್ಪನನ್ನು ಕೊಲೆ ಮಾಡಿರುವವರನ್ನು ಪೋಲೀಸರು ತಕ್ಷಣ ಬಂಧಿಸಬೇಕು. ಹಾಗೂ ಉಗ್ರ ಶಿಕ್ಷೆಯಾಗುವಂತೆ ಕ್ರಮ ವಹಿಸಬೇಕು. ಮೃತನ ಕುಟುಂಬಕ್ಕೆ ಯೋಗ್ಯ ಪರಿಹಾರ ನೀಡಬೇಕು ಮತ್ತು ಇಂತಹ ಎಲ್ಲಾ ಸಂದರ್ಭಗಳಲ್ಲಿ ಬಡವರಿಗೆ ರಕ್ಷಣೆ, ನ್ಯಾಯ ಸಿಗುವಂತೆ ಪೋಲೀಸ್ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಿ.ಪಿ.ಐ.(ಎಂ) ಆಗ್ರಹಿಸಿರುತ್ತದೆ.

ಗ್ರಾಮಗಳಲ್ಲಿ ಸಣ್ಣಪುಟ್ಟ ಸಮಸ್ಯೆಗಳು ಬಂದಾಗ ಪರಸ್ಪರ ಸೌಹಾರ್ದಯುತವಾಗಿ ಸಮಸ್ಯೆಗಳ ಪರಿಹಾರಕ್ಕೆ ಗ್ರಾಮಸ್ಥರು ಮುಂದಾಗಬೇಕು. ಅಂತಹ ಸನ್ನಿವೇಶಗಳಲ್ಲಿ ಗ್ರಾಮಗಳ ವಾತಾವರಣವನ್ನು ಕೆಡಿಸುವ ಕ್ರಮಗಳಿಗೆ ಗ್ರಾಮಸ್ಥರು ಮುಂದಾಗಬಾರದು, ದಲಿತ-ದಲಿತೇತರರು ಎಂಬ ಹೆಸರಿನಲ್ಲಿ ಜನರನ್ನು ಹೊಡೆಯುವ ಶಕ್ತಿಗಳ ವಿರುದ್ಧ ರೈತ, ಕೂಲಿಕಾರ್ಮಿಕರು ಸದಾ ಎಚ್ಚರದಿಂದ ಇದ್ದು, ಜಾತಿವಾದಿ ಮತ್ತು ಮತೀಯವಾದಿ ಗಳನ್ನು ಜನತೆಯಿಂದ ದೂರವಿಡಬೇಕು.

ಇತ್ತೀಚೆಗೆ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ, ದಬ್ಬಾಳಿಕೆಗಳನ್ನು ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳು ವಿರೋಧಿಸಬೇಕು. ಮತ್ತು ಸಾಮಾಜಿಕ ಸಾಮರಸ್ಯವನ್ನು ಉಳಿಸಲು ಮುಂದಾಗಬೇಕೆಂದು ಸಿ.ಪಿ.ಐ.(ಎಂ) ವಿನಂತಿಸಿದೆ.

ದೇವದುರ್ಗ ಡಿ.ವೈ.ಎಫ್.ಐ. ಪದಾಧಿಕಾರಿಗಳು

ತಾಲೂಕಿನ ಜಾಲಹಳ್ಳಿ ಡಿ.ವೈ.ಎಫ್.ಐ.ನ ಸರ್ವಸದಸ್ಯರ ಸಭೆಯು ಮೇ 9ರಂದು ಮಲ್ಲಯ್ಯ ಜಾಲಹಳ್ಳಿಯವರ ಮಾರ್ಗದರ್ಶನದಲ್ಲಿ ನಡೆದು ಸ್ಥಳೀಯ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮುಂದಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಅಧ್ಯಕ್ಷರು - ಶೈಲೇಶ್ ಕುಮಾರ್ ಘನಾತೆ, ಉಪಾಧ್ಯಕ್ಷರು - ರಂಗಪ್ಪಗೌಡಿಕೇರ ಗರ್ಜನಗಂಟಿ, ಕಾರ್ಯದರ್ಶಿ- ಚಂದ್ರಶೇಖರ್ ನಾಡಗೌಡ. ಸಹ ಕಾರ್ಯದರ್ಶಿಗಳು - ರಂಗಪ್ಪ ಬಂಜ, ನಾಗರಾಜ ಆವೇರ, ಖಜಾಂಚಿ - ಮುದುರಂಗ ಗುಡಿಸಲಿ ಹಾಗೂ 11 ಸದಸ್ಯರ ಸಮಿತಿಯು ಆಯ್ಕೆಗೊಂಡಿತು.

ನೀರಿಗಾಗಿ ಧರಣಿ ಸತ್ಯಾಗ್ರಹ

ಉಡುಪಿ : ಡಿ.ವೈ.ಎಫ್.ಐ. ತೆಂಕನಿಡಿಯಾರು ಘಟಕದ ವತಿಯಿಂದ ತೆಂಕನಿಡಿಯಾರು ಗ್ರಾಮದ ಪ್ರದೇಶಗಳಿಗೆ ನಲ್ಲಿ ನೀರನ್ನು ಕೂಡಲೇ ಸರಬರಾಜು ಮಾಡಬೇಕೆಂದು ಒತ್ತಾಯಿಸಿ ಮೇ 5ರಂದು ತೆಂಕನಿಡಿಯಾರು ಗ್ರಾಮ ಪಂಚಾಯತಿನ ಎದುರು ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಧರಣಿ ಸತ್ಯಾಗ್ರಹವನ್ನು ಹಿರಿಯ ಕಾರ್ಮಿಕ ಮುಖಂಡರಾದ ಕಾಂ|| ಗುರುರಾಜ ಶೆಟ್ಟಿಗಾರ್‌ರವರು ಉದ್ಘಾಟಿಸಿದರು. ಮುಖ್ಯವಾಗಿ ತೆಂಕನಿಡಿಯಾರು ಗ್ರಾಮದ ಪ್ರದೇಶಗಳಿಗೆ ಅತೀ ಶೀಘ್ರವಾಗಿ ನಲ್ಲಿ ನೀರನ್ನು ಸರಬರಾಜು ಮಾಡುವುದು, ಈಶ್ವರನಗರದಲ್ಲಿರುವ ಕೊಳವೆಬಾವಿಗಳನ್ನು ದುರಸ್ತಿಗೊಳಿಸುವುದು, ಈಶ್ವರನಗರ ಕಾಲೋನಿ ಮಧ್ಯದಲ್ಲಿ ನಲ್ಲಿ ಕೊಳವೆಗಳನ್ನು ಜೋಡಿಸಲು ಅಗೆದಿರುವ ಹೊಂಡಗಳನ್ನು ಮುಚ್ಚಿಸುವುದು. ಈ ಬೇಡಿಕೆಗಳ ಮನವಿಯನ್ನು ಗ್ರಾಮ ಪಂಚಾಯತ್ ಅಧ್ಯಕ್ಷೆ ನಳಿನಾಕ್ಷಿಯವರಿಗೆ ಸಲ್ಲಿಸಲಾಯಿತು. ಅತೀ ಶೀಘ್ರದಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸುವುದಾಗಿ ಅಧ್ಯಕ್ಷೆಯವರು ಧರಣಿ ನಿರತರ ಮುಂದೆ ಭರವಸೆಯನ್ನು ನೀಡಿದರು. ಮಲ್ಪೆ ಪ್ರದೇಶದ ಬೀಡಿ ಕೆಲಸಗಾರರ ಸಂಘದ ಕಾರ್ಯದರ್ಶಿ ಕಾಂ|. ದೋಗಲಿ ಸುವರ್ಣ, ಡಿ.ವೈ.ಎಫ್.ಐ. ಉಡುಪಿ ತಾಲೂಕು ಕಾರ್ಯದರ್ಶಿ ಕಾಂ|| ಪಿ. ವಿಶ್ವನಾಥ್, ಕೋಶಾಧಿಕಾರಿ ಕಾಂ|. ರಮೇಶ್ ಮೆಂಡನ್, ತಾಲೂಕು ಸಮಿತಿ ಅಧ್ಯಕ್ಷರಾದ ಕಾಂ|| ಉಮೇಶ್ ಕುಂದರ್ ಹಾಗೂ ತೆಂಕನಿಡಿಯಾರು ಪ್ರದೇಶದ ಡಿ.ವೈ.ಎಫ್.ಐ. ಸದಸ್ಯರು, ನೂರಾರು ಸಾರ್ವಜನಿಕರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ತೆಂಗನಿಡಿಯಾರು ಘಟಕದ ಸದಸ್ಯರಾದ ರಸುಲ್ ಸಾಹೇಬ್‌ರವರು ಧನ್ಯವಾದ ನೀಡಿದರು.



ವಿಷಾದ್ಯಂತ ಈ ವರ್ಷ ಅಂತರಾಷ್ಟ್ರೀಯ ಕಾರ್ಮಿಕ ದಿನವಾದ ಮೇ ದಿನವನ್ನು ನವಉದಾರವಾದ ಹಾಗೂ ಜಾಗತೀಕರಣದ ವಿರುದ್ಧ ವಿಶ್ವವ್ಯಾಪಿ ಹೋರಾಟದ ದಿನವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕ್ಯೂಬಾದಲ್ಲಿ ನಡೆದ ಒಂದು ಬೃಹತ್ ರ್‍ಯಾಲಿಯ ಚಿತ್ರ.

ರಶ್ಯಾದ ರಾಜಧಾನಿ ಮಾಸ್ಕೋದಲ್ಲಿ ನಡೆದ ಮತ್ತೊಂದು ಸಮರಧೀರ ರ್‍ಯಾಲಿಯ ಚಿತ್ರ



ಲೆನಿನ್ ಜನ್ಮದಿನವಾದ ಏಪ್ರಿಲ್ 22 ರಂದು ಯಂಗ್‌ಪಯನೀರ್ಸ್ ದಿನದಂದು ರಶ್ಯಾ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ ಮುಖಂಡ ಝುಗನೋವ್ ಒಬ್ಬ ಯುವ ಕಮ್ಯುನಿಸ್ಟರೊಂದಿಗೆ ಮಾತನಾಡುತ್ತಿರುವುದು. ಈ ದಿನವನ್ನು ವ್ಯಾಪಕವಾಗಿ ಆಚರಿಸಲಾಯಿತು.



ಕರ್ನಾಟಕದಲ್ಲಿ ಮೇ ದಿನಾಚರಣೆ

112ನೇ ವಿಶ್ವಕಾರ್ಮಿಕರ ದಿನಾಚರಣೆಯನ್ನು ಬಂಡವಾಳಶಾಹಿಗಳ ಕೂಸು ಖಾಸಗೀಕರಣ, ಜಾಗತೀಕರಣ ಮತ್ತು ಮಾನವ ಕುಲದ ಕಡು ವೈರಿ ಕೋಮುವಾದದ ವಿರುದ್ಧ ಆಚರಿಸುವುದರ ಜೊತೆಗೆ, 1886ರ ಮೇ ಘೋಷಣೆ '8 ಗಂಟೆ ಕೆಲಸ, 8 ಗಂಟೆ ಮನರಂಜನೆ ಹಾಗೂ 8 ಗಂಟೆ ವಿಶ್ರಾಂತಿ' ಇಡೀ ದುಡಿಯುವ ವರ್ಗಕ್ಕೆ ಲಭಿಸುವ ತನಕ ಹೋರಾಡುವ ಪಣದೊಂದಿಗೆ ರಾಜ್ಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಳೆದ ಸಂಚಿಕೆಯಲ್ಲಿ ಈ ಬಗ್ಗೆ ಕೆಲವು ವರದಿಗಳನ್ನು ನೋಡಿರುವಿರಿ. ಈ ವಾರ ಇನ್ನಷ್ಟು ವರದಿಗಳು.

"ಕಾರ್ಮಿಕರ ಐಕ್ಯ ಹೋರಾಟವನ್ನು ಕಾಪಾಡದಿದ್ದರೆ ಶೋಷಣೆ ತಪ್ಪದು"

ಹೊಸಪೇಟೆ: ಬಂಡವಾಳಗಾರರು, ಕಾರ್ಮಿಕರನ್ನು ಸಮಾನವಾಗಿ ಶೋಷಣೆ ಮಾಡುತ್ತಿದ್ದಾರೆ. ಕಾರ್ಮಿಕರ ಐಕ್ಯ ಹೋರಾಟ ಇದನ್ನು ತಡೆಯದಿದ್ದರೆ ಬಂಡವಾಳದಾರರು ಕಾರ್ಮಿಕರ ಮಧ್ಯ ಒಡಕನ್ನು ಸೃಷ್ಟಿಮಾಡುತ್ತಾರೆ ಎಂದು ಕರ್ನಾಟಕ ರಾಜ್ಯ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ|| ಜಿ.ಎನ್. ನಾಗರಾಜ್ ಹೇಳಿದರು. ನಗರದ ಟೌನ್ ರೀಡಿಂಗ್ ರೂಮ್‌ನ ಆವರಣದಲ್ಲಿ ಮೇ ದಿನಾಚರಣೆಯ ಅಂಗವಾಗಿ ಕಾರ್ಮಿಕರ ಮತ್ತು ನೌಕರರ ಸಂಘಟನೆಗಳು ಏರ್ಪಡಿಸಿದ್ದ ರ್‍ಯಾಲಿಯ ನಂತರದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಅವರು ಕೇಂದ್ರದ ವಾಣಿಜ್ಯ ಖಾತೆ ಸಚಿವರಾದ ರಾಮಕೃಷ್ಣ ಹೆಗಡೆಯವರು ಭಾರತದ ಬೆಳೆಗಳೂ ಸೇರಿದಂತೆ 321 ವಿವಿಧ ವಸ್ತುಗಳ ಆಮದಿಗೆ ಅನುಮತಿ ನೀಡುವುದರ ಮೂಲಕ ಭಾರತದ ರೈತ ಕಾರ್ಮಿಕರಿಗೆ ಉದ್ಯೋಗ ಇಲ್ಲದಂತೆ ಮಾಡಿ ಭಾರತವನ್ನು ಕೈಗಾರಿಕಾ ಮರುಭೂಮಿ ಯನ್ನಾಗಿ ಮಾಡಲು ಹೊರಟಿದ್ದಾರೆ ಎಂದರು. ಅಲ್ಲದೇ ರಸಗೊಬ್ಬರ, ಔಷಧಿ, ವಿದ್ಯುಚ್ಛಕ್ತಿ ಬೆಲೆ ಏರಿಕೆ, ರೈತರ ಆತ್ಮಹತ್ಯೆ ಹಾಗೂ ವಿಶ್ವವಿದ್ಯಾಲಯಗಳ ಹಣಕಾಸಿನ ಮುಗ್ಗಟ್ಟಿಗೆ ಐ.ಎಂ.ಎಫ್. ಹಾಗೂ ವಿಶ್ವಬ್ಯಾಂಕ್‌ಗಳ ಒತ್ತಡಗಳೇ ಕಾರಣ ಎಂದರು.

ಬಹಿರಂಗ ಸಭೆಯಲ್ಲಿ ಮಾತನಾಡಿದ ಎಸ್. ಪ್ರಸನ್ನ ಕುಮಾರ್ ಕಾರ್ಮಿಕರ ಕೆಲಸದ ಅವಧಿಯನ್ನು 8 ಗಂಟೆಗಳಿಗೆ ನಿಗದಿಗೊಳಿಸಿರುವುದನ್ನು ಕಾರ್ಮಿಕರ ಹೋರಾಟದಿಂದ ಪಡೆಯಲಾಗಿದೆ. ಆದರೆ ಜಿಂದಾಲ್ ಉಕ್ಕು ಕಾರ್ಖಾನೆಯಲ್ಲಿ ಇಂದಿಗೂ 12 ಗಂಟೆಗಳ ಕಾಲ ಕಾರ್ಮಿಕರನ್ನು ಹೆಚ್ಚಿಗೆ ದುಡಿಸಿಕೊಳ್ಳಲಾಗುತ್ತಿದೆ ಎಂದರು. ಮುಂದುವರೆದು ಮಾತನಾಡಿದ ಅವರು ಕಾರ್ಮಿಕ ಸಂಘ ಎಂದರೆ ಕೇವಲ ಕೂಲಿಗಾಗಿ ಬಡಿದಾಡುವ ಸಂಘ ಅಲ್ಲ. ಅದು ಈ ಸಮಾಜದ ಆಮೂಲಾಗ್ರ ಬದಲಾವಣೆಗಾಗಿ ಹೋರಾಡುವ ಸಂಘ ಎಂದರು. ಹಾಗೂ ಈ ದೇಶದಲ್ಲಿ ಆಸ್ತಿಯ ಹಕ್ಕು ಇದ್ದು ಕೆಲಸದ ಹಕ್ಕು ಇಲ್ಲದೇ ಇರುವುದೊಂದು ವಿಪರ್ಯಾಸ ಎಂದರು. ಕೇಂದ್ರದ ಬಿ.ಜೆ.ಪಿ. ಸರ್ಕಾರವು ಕೈಗಾರಿಕಾ ವಿವಾದಗಳ ಕಾಯ್ದೆಗೆ ಬದಲಾಗಿ ಕೈಗಾರಿಕಾ ಸಂಬಂಧಗಳ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಬೇಕೆನ್ನುವ ಪ್ರಸ್ತಾಪದ ಮೂಲಕ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುವ ಪ್ರಯತ್ನ ಮಾಡುತ್ತಿದೆ ಎಂದರು.

ಬಹಿರಂಗ ಸಭೆಯಲ್ಲಿ ಸಮುದಾಯದ ಗೆಳೆಯರಾದ ಉಳ್ಳೇಶ್ವರ, ನಾಗೇಶ್, ಎ. ಕರುಣಾನಿಧಿ, ಎಸ್. ಅಶೋಕ್, ಮಲ್ಲಿಕಾರ್ಜುನರವರು ಕ್ರಾಂತಿ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ಪಿ.ಎಸ್. ಸಿದ್ಧೇಶ್ವರ ವಹಿಸಿದ್ದರು. ಸ್ವಾಗತ ಸಿ.ಐ.ಟಿ.ಯು.ವಿನ ವೆಂಕಟರಮಣ ಮಾಡಿದರು. ಪ್ರಸ್ತಾವನೆಯನ್ನು ಮಲ್ಲಾರಿ ದೀಕ್ಷಿತ್ ಮಾಡಿದರು. ನಿರ್ವಹಣೆಯನ್ನು ಎಲ್.ಐ.ಸಿ.ಯ ರವಿವರ್ಮ ಮಾಡಿದರು. ಕೊನೆಯಲ್ಲಿ ಎಲ್. ಮಂಜುನಾಥ್‌ರವರು ವಂದನಾರ್ಪಣೆ ಮಾಡಿದರು.

ಬೀದರ್ : ಬೀದರ್ ನಗರದ ಜಿಲ್ಲಾ ಕಾರ್ಮಿಕ ದಿನಾಚರಣೆ ಸಮನ್ವಯ ಸಮಿತಿಯು 16 ಸಂಘಟನೆಗಳು ಸೇರಿ ಅಂಬೇಡ್ಕರ್ ವೃತ್ತದಿಂದ ಮುಖ್ಯ ಬೀದಿಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಮೆರವಣಿಗೆ ಮಾಡುವುದರೊಂದಿಗೆ ಅಂಬೇಡ್ಕರ್ ಸರ್ಕಲ್‌ನಲ್ಲಿ ಬಹಿರಂಗ ಸಭೆ ಸೇರಿ ವಿಶ್ವ ಕಾರ್ಮಿಕರ ದಿನಾಚರಣೆ ಆಚರಿಸಲಾಯಿತು.

ಈ ಸಭೆಯನ್ನು ಉದ್ದೇಶಿಸಿ ಸಿ.ಪಿ.ಐ.(ಎಂ) ಪಕ್ಷದ ಸಂಗ್ರಾಮಪ್ಪ ಮಾತನಾಡುತ್ತಾ ಖಾಸಗೀಕರಣದಿಂದ ದುಡಿಯುವ ವರ್ಗ ಗುಲಾಮರಾಗ ಬೇಕಾಗುತ್ತದೆ. ಆದ್ದರಿಂದ ಖಾಸಗೀಕರಣವನ್ನು ತಡೆಯಲು ನಾವು ಮೇ ದಿನಾಚರಣೆ ಆಚರಿಸುವುದರೊಂದಿಗೆ ಸಿದ್ಧರಾಗಬೇಕಾಗಿದೆ. ಮೇ ದಿನಾಚರಣೆ ಕೇವಲ ಆಚರಣೆಗಾಗಿ ಮಾಡದೆ, ದುಡಿಯುವ ವರ್ಗದ ಮೂಲಭೂತ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಪಣತೊಡಲು ಈ ಕಾರ್ಮಿಕ ದಿನಾಚರಣೆಯನ್ನು ಆಚರಿಸಲಾಗುತ್ತದೆ ಎಂದರು.

ಸಿ.ಪಿ.ಐ. ಪಕ್ಷದ ಮುಖಂಡರಾದ ಬಾಬು ಹೊನ್ನ ಕೇಂದ್ರದಲ್ಲಿ ಕೋಮುವಾದಿ ಪಕ್ಷ ಅಧಿಕಾರದಲ್ಲಿದ್ದು ಆರ್.ಎಸ್.ಎಸ್.ನ ಫ್ಯಾಸಿಸಂ ಪದ್ಧತಿ ಮತ್ತು ಅಧ್ಯಕ್ಷೀಯ ಪದ್ಧತಿಯನ್ನು ತರುವುದಕ್ಕೆ ಪ್ರಯತ್ನಿಸಿರುವುದು ವಿಷಾದನೀಯ, ಇದನ್ನು ತಡೆಗಟ್ಟಲು ನಾವೆಲ್ಲರು ಒಂದಾಗಿ ಹೋರಾಟ ಮಾಡಬೇಕೆಂದು ಹೇಳಿದ್ದರು.

ಕೆ.ಎಸ್.ಆರ್.ಟಿ.ಸಿ. ಸಂಘದ ಅಧ್ಯಕ್ಷರಾದ ಶಿವಲಿಂಗಪ್ಪಾ ಖಾಸಗೀಕರಣದಿಂದ ಉದ್ಯೋಗಗಳನ್ನು ಕಳೆದುಕೊಂಡು ಬೀದಿಪಾಲಾಗುತ್ತಿರುವ ಸಾವಿರಾರು ಜನರಿಗೆ ರಕ್ಷಣೆ ನೀಡಬೇಕು ಎಂದರು. ಟೆಲಿಕಾಂ ಅಧ್ಯಕ್ಷರಾದ ಸಾಗರ ಶೆಂದು, ಸರಕಾರಿ 'ಡಿ' ನೌಕರರ ಸಂಘದ ಅಧ್ಯಕ್ಷರಾದ ಬೀರುಸಿಂಗ, ಹಮಾಲ ಸಂಘದ ಅಧ್ಯಕ್ಷರಾದ ಶೆಂಕ್ರಯ್ಯಾ ಸ್ವಾಮಿ, ಎಲ್.ಐ.ಸಿ. ಯೂನಿಯನ್‌ನ ಅಧ್ಯಕ್ಷರಾದ ಬಸವರಾಜ ಮಾಳಗೆ, ಆಟೋ ಮತ್ತು ಟ್ರಾಲಿ ಯೂನಿಯನ್‌ನ ಅಶೋಕ, ಕನ್ನಡ ಪ್ರಾಧಿಕಾರದ ಸದಸ್ಯರಾದ ಬಾಬುರಾವ್ ವಡ್ಡೆ, ಗ್ರಾಮ ಪಂಚಾಯತ್ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪ್ರಭು ಸಂತೋಷ ಇವರೆಲ್ಲರು ಮಾತನಾಡುತ್ತಾ ಸಮನ್ವಯ ಸಮಿತಿಯನ್ನು ಮುಂದುವರಿಸಿಕೊಂಡು ಐಕ್ಯ ಹೋರಾಟ ನಡೆಸಬೇಕೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷರಾದ ಅಂಬ್ಯತರಾವ್ ಚಿಮಕೋಡೆಯವರು ದುಡಿಯುವ ವರ್ಗದ ಸಮಸ್ಯೆಯನ್ನು ಏಕಾಂಗಿಯಾಗಿ ಹೋರಾಡದೆ ನಾವೆಲ್ಲರು ಒಟ್ಟುಗೂಡಿ ಹೋರಾಡಿದಾಗ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದರು.

ಪ್ರಾರಂಭದಲ್ಲಿ ಶ್ರದ್ಧಾಂಜಲಿ ಅರ್ಪಿಸಲಾಯಿತು. ನಂತರ ಶಂಬುಲಿಂಗ ವಾಲದೊಡ್ಡಿ ಮತ್ತು ಸಂಗಡಿಗರಿಂದ ಕ್ರಾಂತಿಕಾರಿ ಗೀತೆ ಹಾಡಲಾಯಿತು. ಜನರಲ್ ವರ್ಕರ್ಸ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿಗಳಾದ ಸಂಗ್ರಾಮ ಭೋಸಲೆಯವರು ವಿಶ್ವಕಾರ್ಮಿಕ ದಿನಾಚರಣೆ ಮಹತ್ವವನ್ನು ವಿವರಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಕಾಂ|| ಕಂಟಪ್ಪ ಗುಮ್ಮೆ ಮಾಡಿದರು. ಎಂ.ಎಸ್. ಮನೋಹರ ಅವರು ವಂದನಾರ್ಪಣ



ಮಾಡಿದರು.

ಮೇ ದಿನಾಚರಣೆಯ ಅಂಗವಾಗಿ ಪ್ರಭಾತ್‌ಬೇರಿ

ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ವತಿಯಿಂದ ಮೇ ದಿನಾಚರಣೆಯ ಅಂಗವಾಗಿ ದೊಡ್ಡಳಿಕೆಯಿಂದ ಕುಪ್ಪೆಪದವು ತನಕ 2 ಕಿ.ಮಿ. ದೂರ ಬೆಳಿಗ್ಗೆ ಪ್ರಭಾತ್ ಬೇರಿ ಮೆರವಣಿಗೆ ನಡೆಸಲಾಯಿತು.

ನಂತರ ಸಂಘದ ಆಫೀಸ್ ವಠಾರದಲ್ಲಿ ಕೆಂಬಾವುಟವನ್ನು ಹಾರಿಸಿ ಕಾರ್ಮಿಕರ ಸಭೆ ನಡೆಸಲಾಯಿತು.

ಈ ಸಭೆಯಲ್ಲಿ ಸಂಘದ ಅಧ್ಯಕ್ಷರಾದ ಕಾಂ|| ಕೆ. ವಾಸುದೇವ ಆಚಾರ್ಯರವರು ಮೇ ದಿನಾಚರಣೆ ಬಗ್ಗೆ ವಿವರಣೆ ನೀಡಿ ಮಾತನಾಡಿದರು.

ಎನ್.ಎ. ಹಸನಬ್ಬನವರು ಸ್ವಾಗತಿಸಿ ಬಾಲಕೃಷ್ಣ ವಂದಿಸಿದರು.

ಮಂಗಳೂರು: ಕುಪ್ಪೆಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದವತಿಯಿಂದ ಇವ್ವೆಲು ಬಿಯಂದಕೋಡಿಯಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಕೆಂಬಾವುಟವನ್ನು ಹಾರಿಸಿ ಸಂಘದ ಕಾರ್ಯದರ್ಶಿ ಕೆ. ಸದಶಿವ್ ದಾಸ್ ಮಾತನಾಡುತ್ತಾ 8 ಗಂಟೆ ಕೆಲಸ, 8 ಗಂಟೆ ವಿರಾಮಕ್ಕಾಗಿ ಹೋರಾಡಿದ ದಿನವನ್ನು ಮೇ ದಿನವೆಂದು ಆಚರಿಸಿದಂತೆ, ಈ ಮೇ ದಿನಾಚರಣೆಯನ್ನು ಜಾಗತೀಕರಣದ ವಿರುದ್ಧ ಹೋರಾಟದ ದಿನವಾಗಿ ಆಚರಿಸುವಂತೆ ಕರೆ ನೀಡಿದ್ದಾರೆ.

ಬಡಗೆ ಎಡಪದ: ಬಡಗಎಡಪದವು ರೈತ ಸಂಘದ ವಠಾರದಲ್ಲಿ ಮೇ ದಿನಾಚರಣೆಯನ್ನು ಆಚರಿಸಲಾಯಿತು. ಬೆಳಿಗ್ಗೆ 7 ಗಂಟೆಗೆ ಸಿ.ಪಿ.ಐ.(ಎಂ) ಗುರುಪುರ ಪ್ರದೇಶ ಸಮಿತಿ ಸದಸ್ಯರಾದ ಕಾಂ|| ಗೋವಿಂದ ಗೌಡರವರು ಕೆಂಬಾವುಟವನ್ನು ಹಾರಿಸಿ ಮೇ ದಿನಾಚರಣೆಯ ಬಗ್ಗೆ ವಿವರಣೆ ನೀಡಿ ಮಾತನಾಡಿದರು. ನೋಣಯ ಗೌಡ ಸ್ವಾಗತಿಸಿದರು.

ಕೋಲಾರ : ಜಿಲ್ಲೆಯ ಗೌರಿಬಿದನೂರು ತಾಲೂಕು ಕೇಂದ್ರದಲ್ಲಿ ಹಮಾಲಿ ಕಾರ್ಮಿಕರ ಸಂಘದ(ಸಿ.ಐ.ಟಿ.ಯು.) ನೇತೃತ್ವದಲ್ಲಿ ಮೇ ದಿನವನ್ನು ಆಚರಿಸಲಾಯಿತು. ಇನ್ನೂರು ಹಮಾಲಿ ಕಾರ್ಮಿಕರು ತಲೆಗೆ ಕೆಂಪು ಪಟ್ಟಿಕಟ್ಟಿಕೊಂಡು ಘೋಷಣೆಗಳ ಮೂಲಕ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಸಂಘದ ಅಧ್ಯಕ್ಷ ವಿ. ಶ್ರೀನಿವಾಸ ಕರ್ಣಾರ ಅಧ್ಯಕ್ಷತೆಯಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಸಗಟುವ್ಯಾಪಾರಿಗಳ ಸಂಘದ ವೈ.ಎಂ. ಸೂರ್ಯನಾರಾಯಣ ಶೆಟ್ಟಿ, ಪುರಸಭಾ ಸದಸ್ಯ ಲಕ್ಷ್ಮಿ ನಾರಾಯಣ ಮತ್ತು ಜೆ.ಎಂ.ಎಸ್.ನ ಪ್ರೇಮಲತಾ ಮೊದಲಾದವರು ಮಾತನಾಡಿದರು. ಡಿ.ವೈ.ಎಫ್.ಐ.ನ ಅಶ್ವತಪ್ಪ ಮಾತನಾಡಿ ಹಮಾಲಿಗಳ ಮಕ್ಕಳು ವಿದ್ಯಾವಂತರಾಗಬೇಕೆಂದರು. ಶ್ರೀನಿವಾಸಕರ್ಣ ಮಾತನಾಡಿ ಕೇಂದ್ರ ರಾಜ್ಯ ಸರ್ಕಾರಗಳು ಕಾರ್ಮಿಕ ವಿರೋಧಿ ನೀತಿ ಅನುಸರಿಸುತ್ತಿದ್ದು ಅದನ್ನು ಹಿಮ್ಮೆಟ್ಟಿಸಲು ಹೋರಾಟವೇ ಮಾರ್ಗವೆಂದರು. ರಮೇಶ್ ಸ್ವಾಗತ ಬಯಸಿದರೆ ಕೃಷ್ಣಪ್ಪ ವಂದನೆ ಸಲ್ಲಿಸಿದರು.

ಸಭೆಯ ಪ್ರಾರಂಭದಲ್ಲಿ ಅಗಲಿದ ನಾಯಕ ಇ.ಎಂ.ಎಸ್.ಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.





ದಿಲ್ಲಿಯಲ್ಲಿ ಕಲಾವಿದರ ಪ್ರತಿಭಟನೆ.

ಕಲಾಕಾರ ಹುಸೇನರ ಮೇಲೆ ದಾಳಿಯಲ್ಲಿ ಬಿ.ಜೆ.ಪಿ.ಯ ಬಚ್ಚಿಟ್ಟ ಅಜೆಂಡಾದ ವಾಸನೆಯಿದೆ

ಎನ್ನುತ್ತಾರೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರೂ ಸ್ವತಃ ಒಬ್ಬ ಕಲಾ ವಿಮರ್ಶಕರೂ ಆದ ಸುನೀತ್ ಚೋಪ್ರಾ

20 ವರ್ಷಗಳ ಹಿಂದಿನ ಎಂ.ಎಫ್. ಹುಸೇನ್ ಕಲಾ ಕೃತಿಗಳ ಮೇಲೆ ಈಗೇಕೆ ಈ ಸಂಘ ಪರಿವಾರದವರು ಹರಿ ಹಾಯುತ್ತಿದ್ದಾರೆ ಎಂದು ಯಾರಿಗಾದರೂ ಆಶ್ಚರ್ಯವೆನಿಸಬಹುದು. ವಾರಣಾಸಿ, ಮಥುರಾದ ಮಸೀದಿಗಳ ಮೇಲೆ ಧಾಳಿಯ ಬೆದರಿಕೆ ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಬಿ.ಜೆ.ಪಿ. ಯ ಕಣ್ಣು ಈಗ ಧರ್‌ನಲ್ಲಿರುವ 'ಭೋಜಶಾಲೆ' ಮೇಲೂ ಬಿದ್ದಿದೆ ಎಂದು ಬಹಳ ಜನಕ್ಕೆ ತಿಳಿದಿಲ್ಲ. ಇದಕ್ಕೂ ಇತ್ತೀಚಿಗೆ ಹುಸೇನರ ಮೇಲಿನ ಧಾಳಿಗಳಿಗೂ ಸಂಬಂಧವಿದೆ ಎಂಬುದೂ ಬಹಳ ಜನಕ್ಕೆ ಅರ್ಥವಾಗದು. ಆದರೆ ಕೋಮುವಾದಿ ರೀತಿಯೇ ಇದು.

ಇಂದೂರಿನ ಸಮೀಪವಿರುವ "ಭೋಜ ಶಾಲೆ" ಹಿಂದೂಗಳು ಮತ್ತು ಮುಸ್ಲಿಮರು ಇಬ್ಬರೂ ಭೇಟಿ ನೀಡುವ ಸ್ಥಳ. ವಿ.ಹೆಚ್.ಪಿ. ಈಗ ಮುಸ್ಲಿಮರು ಅಲ್ಲಿ ಪ್ರಾರ್ಥನೆ ಸಲ್ಲಿಸುವುದನ್ನು ನಿಲ್ಲಿಸಬೇಕೆಂದಿದೆ. ಇದು 'ಜನಾಂಗ ಶುದ್ಧೀಕರಣ'ದ ಅವರ ಕಾರ್ಯಾಚರಣೆಯ ಒಂದು ಭಾಗ. ಆ ಕಟ್ಟಡ ದೇವಸ್ಥಾನದ ಹಾಗೆ ಕಾಣುತ್ತಿಲ್ಲ. ಆದರೆ ಅದು ಸರಸ್ವತಿಯ ದೇವಸ್ಥಾನ ವಾಗಿತ್ತು, ಅಲ್ಲಿಯ ಸರಸ್ವತಿ ಮೂರ್ತಿ ಈಗ ಬ್ರಿಟನ್‌ನಲ್ಲಿದೆ ಎಂಬುದು ಅವರ ಬೊಬ್ಬೆ.

ಆದರೆ ಬ್ರಿಟಿಶರು ಹಾಗೆ ಸೂರೆ ಮಾಡಿದ್ದ ಸರಸ್ವತಿ ವಿಗ್ರಹವನ್ನು ವಾಪಸು ಮಾಡುವಂತೆ ಕೇಳಬಹುದಲ್ಲವೇ? ಇಲ್ಲ. ವಿ.ಹೆಚ್.ಪಿ.ಯ 'ಜನಾಂಗ ಶುದ್ಧೀಕರಣ'ದಲ್ಲಿ ಅದು ಬರುವುದಿಲ್ಲ. **ಅದರ ಬದಲು ಈ ವಿಷಯವನ್ನು ಬಳಸಿ ಹಿಂದೂ-ಮುಸ್ಲಿಮ ರಲ್ಲಿ ಒಡಕು** ತರುವುದೇ ಅವರ ಅಜೆಂಡಾ. ಆದ್ದರಿಂದಲೇ ಪಕ್ಕದ ಇಂದೂರಿನ ಪ್ರಖ್ಯಾತ ಮುಸ್ಲಿಮರಲ್ಲಿ ಒಬ್ಬರಾದ ಎಂ.ಎಫ್.ಹುಸೇನ್‌ರವರು 'ಸರಸ್ವತಿ'ಯ ಕಲಾಕೃತಿಗಾಗಿ ಮಾಡಿದ್ದ ಸಿದ್ಧತೆಯ ಚಿತ್ರವನ್ನು ಬಳಸಿ ಜನಗಳ ಭಾವನೆಗಳನ್ನು ಉದ್ರೇಕಿಸುವುದು ಅವರ ತಂತ್ರ. ಹುಸೇನ್‌ರವರು ಸರಸ್ವತಿ ಮತ್ತು ಇತರ ಹಿಂದೂ ದೇವ-ದೇವತೆಯರಿಗೆ ಅಗೌರವ ತೋರಿದ್ದಾರೆ ಎಂದು ಜನಗಳನ್ನು ನಂಬಿಸಲು ಸಾಧ್ಯವಾದರೆ ಧರ್‌ನ 'ಭೋಜಶಾಲೆ'ಯನ್ನು ಮುಸ್ಲಿಮ ರಿಂದ ಶುದ್ಧಗೊಳಿಸಬಹುದು-ಇದು ವಿ.ಹೆಚ್.ಪಿ.ಯ ತಂತ್ರ ಎನ್ನುತ್ತಾರೆ ಸುನೀತ್ ಚೋಪ್ರಾ.

ಮೊದಲು ಇಂದೂರಿನ ಒಂದು ಸಣ್ಣ ಸಾಹಿತ್ಯಿಕ ಪತ್ರಿಕೆಯಲ್ಲಿ 'ಸರಸ್ವತಿ' ಎಂಬ ಕಲಾಕೃತಿಗಾಗಿ ಹುಸೇನರು ತಯಾರಿಸಿದ್ದ ಒಂದು ಸಣ್ಣ ಸ್ಕೆಚ್ಚನ್ನು ಪ್ರಕಟಿಸಲಾಯಿತು. ಅದು ವಿ.ಹೆಚ್.ಪಿ. ನಿರೀಕ್ಷಿಸಿದ ಪರಿಣಾಮ ಉಂಟು ಮಾಡಿತು. ಸ್ಥಳೀಯ ಆಡಳಿತ ದ ಕಟ್ಟುನಿಟ್ಟಾದ ಕ್ರಮದಿಂದಾಗಿ ದಂಗೆಗ ಳಾಗಲಿಲ್ಲ ಅಷ್ಟೆ. ಇದು ಬಿ.ಜೆ.ಪಿ., ವಿ.ಹೆಚ್.ಪಿ. ಭಜರಂಗದಳದವರನ್ನು ಹತಾಶರಾಗಿಸಿತು.

ಮಾರ್ಚ್ 23ರಂದು ಈ ಹತಾಶೆ ದಿಲ್ಲಿಯಲ್ಲಿ ಭುಗಿಲೆದ್ದಿತು. ವಿ.ಹೆಚ್.ಪಿ. ಒಂದು ಗೂಂಡಾ ಗುಂಪು ಸಾಹಿತ್ಯ ಮತ್ತು ಲಲಿತಕಲಾ ಅಕಾಡೆಮಿಯ ಕಟ್ಟಡದೊಳಗೆ ನುಗ್ಗಿ ಅಲ್ಲಿ ಪ್ರದರ್ಶನ ಗೊಂಡಿದ್ದ ಕಲಾಕೃತಿಗಳಲ್ಲಿ ಹುಸೇನರ ಕಲಾಕೃತಿಯ ಪ್ರಿಂಟನ್ನು ತೆಗೆಯದಿದ್ದರೆ ಇಡೀ ಕಲಾ ಗ್ಯಾಲರಿಯನ್ನು ಸುಟ್ಟು ಹಾಕುವುದಾಗಿ ಬೆದರಿಸಿದರು; ಇನ್ನೊಬ್ಬ ಪ್ರಸಿದ್ಧ ಕಲಾಕಾರ ಜತಿನ್ ದಾಸ್‌ರ ಮೇಲೆ ಹಲ್ಲೆ ಮಾಡಿದರು. ಇತರರನ್ನು ಬೆದರಿಸಿದರು. ನಂತರ ಈಗ ಮೇ 10ರಂದು ಮುಂಬೈಯಲ್ಲಿ ಹುಸೇನರ ನಿವಾಸದ ಮೇಲೆ ಭಜರಂಗದಳದ ಧಾಂಧಲೆಯ ಸುದ್ದಿ ಬಂದಿದೆ. ಧರ್‌ನಲ್ಲಿ ರುವ ಭೋಜಶಾಲಾ ಸಂಕೀರ್ಣವೇ ಇವೆಲ್ಲದರ ನಿಜವಾದ ಗುರಿಯೆಂಬುದು ಸ್ವಯಂ ವೇದ್ಯ ಎನ್ನುತ್ತಾರೆ ಸುನೀತ್ ಚೋಪ್ರಾ.

ಹುಸೇನ್‌ರ ಕೃತಿಗಳಲ್ಲಿ ದೇವತೆಗಳ ಚಿತ್ರಗಳು ಕೇವಲ ಸ್ವರೂಪಗಳು, ಅವುಗಳಲ್ಲಿ ಮುಖ, ದೇಹದ ಇತರ ವಿವರಗಳಿ ರುವುದಿಲ್ಲ. ಇದು ದೇವತೆ ಗಳನ್ನು ಜನಗಳ ಹತ್ತಿರ ತರುವ ಒಂದು "ವೇಷ" (Disguise) ಎಂದು ಪ್ರಖ್ಯಾತ ಕಲಾ ಇತಿಹಾಸಕಾರ ರಾಧಾ ಕಮಲ್ ಮುಖರ್ಜಿ ಹೇಳಿದ್ದಾರೆ ಎಂದು ಸುನೀತ್ ಚೋಪ್ರ ನೆನಪಿಸುತ್ತಾರೆ.

"ಈ ಮೂಲಕ ಈ ಅಮರತ್ವವನ್ನು ಪಡೆದವರ ಎದ್ದು ಕಾಣುವ ನಿರ್ದಿಷ್ಟ ಹಾಗೂ ವೈಯುಕ್ತಿಕ ಲಕ್ಷಣಗಳನ್ನೆಲ್ಲ ಜಾಗರೂಕತೆಯಿಂದ ತೆಗೆದು ಸಾಮಾಜಿಕ ನೈತಿಕತೆಯನ್ನು ಕಾಪಾಡಲಾಗುತ್ತದೆ. ಹೀಗೆ ನಿಷೇದಾತ್ಮಕವಾದದ್ದು, ಅಸಮಾನ್ಯ ವಾದುದರ ಭಯದಿಂದ ಪ್ರಾಚೀನ ನಾಯಕರ, ದೇವತೆಗಳ ಬಗ್ಗೆ ಗೌರವಕ್ಕೆ ಚ್ಯುತಿ ಬರದಂತೆ ಮಾಡಲಾಗುತ್ತದೆ" ಎಂದು ಈ ಕಲಾ ಇತಿಹಾಸಕಾರ ಹೇಳಿದ್ದರು. ಹುಸೇನರ ಕೃತಿಗಳಲ್ಲಿ ಇದೇ ಕಾಣುತ್ತದೆ. ಇದರಲ್ಲಿ ಅತ್ಯಂತ ಸಾಂಪ್ರದಾಯಿಕ ದೃಷ್ಟಿಯಿಂದಲೂ ಆಕ್ಷೇಪಾರ್ಹವಾದುದು ಏನೂ ಇಲ್ಲ ಎನ್ನುತ್ತಾರೆ ಸುನೀತ್ ಚೋಪ್ರ.

ವಾಸ್ತವವಾಗಿ ಹುಸೇನ್‌ರವರು ಡಾ|| ಲೋಹಿಯಾರವರ "ರಾಮಾಯಣ ಮೇಲಾ"ಗಳಿಗಾಗಿ ತನ್ನ ರಾಮಾಯಣ ಕೃತಿಗಳನ್ನು ಆರಂಭಿಸಿದರು. ಆಗ ಇಂತಹ 'ಮೇಳ' ಗಳು ನಡೆದ ಯಾವ ಹಳ್ಳಿಯಲ್ಲೂ ಇಂತಹ ವಿವಾದಗಳು ಎದ್ದಿರಲಿಲ್ಲ. ರೇಶಿಮೆ ಬಟ್ಟೆಯ ಮೇಲೆ ಸ್ಕ್ರೀನ್ ಪ್ರಿಂಟ್ ಮಾಡಿದ ಈ ಕೃತಿಗಳು ಈಗಲೂ ಹಲವು ಮನೆಗಳ ಗೋಡೆಗಳನ್ನು ಅಲಂಕರಿಸಿವೆ. ಈ ಕೃತಿ ತನ್ನ ನಾಜೂಕಿತನದಿಂದಾಗಿ ಈಗಲೂ ಹುಸೇನ್‌ರ ಕೃತಿಗಳಲ್ಲಿ ಅತ್ಯುತ್ತಮ ಎನಿಸಿವೆ. ಆದ್ದರಿಂದಲೇ 20 ವರ್ಷಗಳ ಕಾಲ ಈ ಬಗ್ಗೆ ವಿವಾದ ಗಳೇಳಲಿಲ್ಲ ಎಂದು ಸುನೀತ್ ಚೋಪ್ರಾ ಹೇಳುತ್ತಾರೆ.

"ಹಾಗಾದರೆ ಈಗಲಷ್ಟೇ ಇದನ್ನೇಕೆ ಬಡಿದೆಬ್ಬಿಸಲಾಗುತ್ತಿದೆ? ಭೋಜ ಶಾಲೆಯಿಂದ ಮುಸ್ಲಿಮರನ್ನು ಹೊರ ದೂಡುವ, ನಂತರ ವಾರಣಾಸಿ ಮತ್ತು ಮಥುರಾದಲ್ಲಿನ ಧ್ವಂಸಕಾರ್ಯದ ಬಚ್ಚಿಟ್ಟ ಅಜೆಂಡಾದ ಅಲಗಿನ ತುದಿಯೇ ಇದು? ಎಂದು ಪ್ರಶ್ನಿಸುವ ಸುನೀತ್ ಚೋಪ್ರಾ ಅಪಪ್ರಚಾರಗಳ ಮೂಲಕ ಹೇಗೆ ದೇಶವನ್ನು ಚಿಂದಿಯಾಗಿಸುವ ಒಂದು ದುಷ್ಟ ಕಾರ್ಯಕ್ರಮವನ್ನು ರಚಿಸಲಾಗುತ್ತಿದೆ ಎಂಬುದರ ಬಗ್ಗೆ ಜನಗಳಲ್ಲಿ ಅರಿವು ಮೂಡಿಸಬೇಕಾಗಿದೆ ಎನ್ನುತ್ತಾರೆ.

ರಾಷ್ಟ್ರೀಯ ಆಂದೋಲನ 'ಹಿಂದೂ ಭಾರತ'ವನ್ನು ತಿರಸ್ಕರಿಸಿ ಒಂದು ಧರ್ಮ ನಿರಪೇಕ್ಷ ಪ್ರಭುತ್ವವನ್ನು ಅಂಗೀಕರಿಸಿತು. 50ವರ್ಷಗಳ ಕಾಲ ಮತದಾರರು ಇದನ್ನು ತಿರಸ್ಕರಿಸುತ್ತಾ ಬಂದಿದ್ದಾರೆ. ಈಗ ಹಿಂಬಾಗಿಲಿಂದ ಇದನ್ನು ಒಳ ತರಲು ಪ್ರಯತ್ನಿಸಲಾಗುತ್ತಿದೆ. ವಿಳಂಬವಿಲ್ಲದೆ ಇದನ್ನು ತಡೆಯಬೇಕು ಎಂದು ಸುನೀತ್ ಚೋಪ್ರಾ ಹೇಳುತ್ತಾರೆ.

ಈ ಉಪಖಂಡದಲ್ಲಿ ಹಿಂದೂ ಕೋಮುವಾದಿಗಳು ಮತ್ತು ಮುಸ್ಲಿಂ ಕೋಮುವಾದಿಗಳು ಎರಡು ಪ್ರತ್ಯೇಕ ಸಂಕುಚಿತ ಸಂಸ್ಕೃತಿಗಳನ್ನು ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ. ಹಿಂದೂ ಮೂಲಭೂತ ವಾದಿಗಳು ಹುಸೇನ್‌ರ ಮತ್ತು ಇತರ ಮುಸ್ಲಿಂ ಕಲಾವಿದರ ಹಿಂದೂ ದೇವ-ದೇವಿಯರ ಕೃತಿಗಳ ಮೇಲೆ ಧಾಳಿ ಮಾಡುತ್ತಿದ್ದರೆ ಅತ್ತ ಮಾನಸದೇವಿಯ ಗಾಥೆಯನ್ನು ಶತಮಾನಗಳಿಂದ ಚಿತ್ರಿಸುತ್ತಾ ಬಂದಿರುವ ಬಂಗಾಳದ ಮುಸ್ಲಿಂ ಜನಪದ ಕಲಾಕಾರರಾದ ಪಟುವಾಗಳ ಮೇಲೆ ಅದನ್ನು ನಿಲ್ಲಿಸುವಂತೆ ಇಸ್ಲಾಮ್ ಮೂಲಭೂತವಾದಿ ಗಳು ಒತ್ತಡ ಹೇರುತ್ತಿದ್ದಾರೆ. ಹಿಂದೆಂದೂ ಕಾಣದ ರೀತಿಯಲ್ಲಿ ನಮ್ಮ ಉಪಖಂಡವನ್ನು ತುಂಡರಿಸುವ ಗಂಭೀರ ಪ್ರಯತ್ನ ನಡೆಯುತ್ತಿದೆ, ಇದನ್ನು ಪ್ರತಿರೋಧಿಸಲೇಬೇಕು ಎಂದು ಸುನೀತ್ ಚೋಪ್ರ ಹೇಳುತ್ತಾರೆ.

○

ಅಡ್ವಾಣಿಯವರೇ, ಏಕೆ ಈ ಮಟ್ಟಕ್ಕೆ ಇಳಿಯುತ್ತಿದ್ದೀರಿ?

'ಪೀಪಲ್ಸ್ ಡೆಮಾಕ್ರಸಿ - ಸಂಪಾದಕೀಯ'

ಇತ್ತೀಚಿಗಷ್ಟೆ ಸಮಾಪ್ತಿಗೊಂಡ ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಗೃಹಮಂತ್ರಿ ಎಲ್.ಕೆ. ಅಡ್ವಾಣಿಯವರು ದುಷ್ಟ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರ ಆರಂಭಿಸಿದ್ದಾರೆ ಎಂದು ವರದಿಯಾಗಿದೆ - ಇದರಲ್ಲಿ ಹೊಸತೇನಿಲ್ಲ. ಆದರೆ ಈ ಬಾರಿ ಗೃಹ ಮಂತ್ರಿಗಳಿಗೆ ಬುದ್ಧಿ ಭ್ರಮಣೆಯಾದಂತಿದೆ- ಏಕೆಂದರೆ ಅವರು ಸಿ.ಪಿ.ಐ(ಎಂ) ಶ್ರೀಮತಿ ಗಾಂಧಿಯವರು ಹೇರಿದ ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿತ್ತು ಎಂದು ಆಪಾದಿಸಿದ್ದಾರೆ. ಅಂದಿನ ದಿನಗಳಲ್ಲಿ ರಾಜಕೀಯದಲ್ಲಿ ಸಕ್ರಿಯರಾಗಿದ್ದ (ಬಹುಶಃ ರಾಷ್ಟ್ರ ಮಟ್ಟದಲ್ಲಿ ಅಲ್ಲವಾದರೂ) ಅಡ್ವಾಣಿ ಇಂತಹ ಕೀಳುಮಟ್ಟಕ್ಕೆ ಇಳಿದಿರುವುದು ನಿಜಕ್ಕೂ ಆಶ್ಚರ್ಯಕರ. ಸಾವಿರಾರು ಸಿ.ಪಿ.ಐ.(ಎಂ) ಕಾರ್ಯಕರ್ತರು 'ಮೀಸಾ' ಶಾಸನದಡಿ ಜೈಲಿಗಟ್ಟಲ್ಪಟ್ಟರಷ್ಟೆ ಅಲ್ಲ, ತುರ್ತು ಪರಿಸ್ಥಿತಿ ಮುಗಿದ ಕೂಡಲೇ ನಡೆದ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳ, ತ್ರಿಪುರಾಗಳಲ್ಲಿ ಸಿ.ಪಿ.ಐ.(ಎಂ) ವಿಜಯಶಾಲಿಯಾದದ್ದು ತುರ್ತು ಪರಿಸ್ಥಿಯಲ್ಲಿ ಅದು ಎಂತಹ ಪಾತ್ರ ವಹಿಸಿತು ಎಂಬುದಕ್ಕೆ ಸಾಕ್ಷಿ. ತನ್ನ ಪಕ್ಷವನ್ನು ವಿಸರ್ಜಿಸಿ ಅದನ್ನು ಜನತಾ ಪಾರ್ಟಿಯೊಂದಿಗೆ ವಿಲೀನಗೊಳಿಸಿದವರಲ್ಲಿ ಒಬ್ಬರಾದ ಅಡ್ವಾಣಿಯವರಿಗೆ ಖಂಡಿತವಾಗಿಯೂ ಇದು ಗೊತ್ತಿರದೇ ಇಲ್ಲ. ಆದರೂ ಸಿ.ಪಿ.ಐ(ಎಂ) ವಿರುದ್ಧ ಇಂತಹ ಆಕ್ರಮಣ ಮಾಡುತ್ತಾರೆಂದರೆ ಅದು ಇನ್ನೊಂದು ಅಂಶವನ್ನು ಮರೆಮಾಚಲಿಕ್ಕಾಗಿ - ಆ ಅಂಶವೆಂದರೆ ತುರ್ತು ಪರಿಸ್ಥಿತಿಯಲ್ಲಿ ಆರ್.ಎಸ್.ಎಸ್. ಪಾತ್ರ.

ಶ್ರೀಮತಿ ಇಂದಿರಾಗಾಂಧಿಯವರೊಂದಿಗೆ ರಾಜಿ ಮಾಡಿಕೊಳ್ಳುವ ಪ್ರಯತ್ನದಲ್ಲಿ ಆಗ ಆರ್.ಎಸ್.ಎಸ್. ಮುಖ್ಯಸ್ಥರಾಗಿದ್ದ ದೇವರಸ್ ಎರಡು ಬಾರಿ ಆರ್.ಎಸ್.ಎಸ್. ಮೇಲೆ ನಿರ್ಬಂಧ ತೆಗೆಯಬೇಕೆಂದು ಕೋರಿ ಜೈಲಿನಿಂದ ಶ್ರೀಮತಿ ಇಂದಿರಾಗಾಂಧಿಯವರಿಗೆ ಪತ್ರ ಬರೆದಿದ್ದರು. ಶ್ರೀಮತಿ ಇಂದಿರಾಗಾಂಧಿಯವರು ಚುನಾವಣೆಗಳನ್ನು ಬದಿಗಿಟ್ಟು ಅಲಹಾಬಾದ್ ಹೈಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ಹೇರಿದ್ದರ ವಿರುದ್ಧ ಇಡೀ ದೇಶ ಎದ್ದು ನಿಂತಿದ್ದಾಗ ಬಾಳಾ ಸಾಹೇಬ್ ದೇವರಸ್‌ರವರು ನವಂಬರ್ 10, 1975ರಂದು ಯರವಾಡಾ ಜೈಲಿನಿಂದ ಬರೆದ ಪತ್ರದ ಒಕ್ಕಣಿಕೆ ನೋಡಿ -

"ಸುಪ್ರೀಂ ಕೋರ್ಟ್‌ನ ಐವರು ನ್ಯಾಯಾಧೀಶರು ನಿಮ್ಮ ಚುನಾವಣೆಯನ್ನು ಸಿಂಧುಗೊಳಿಸಿದ್ದಕ್ಕಾಗಿ ನಿಮಗೆ ಅಭಿನಂದನೆಗಳು"!

ಇಂದಿರಾಗಾಂಧಿಯವರು ಕಾನೂನಿನ ಕಸರತ್ತು ಮಾಡಿ ತನ್ನ ಚುನಾವಣೆಯನ್ನು ಸಿಂಧುಗೊಳಿಸಲು ಸಂವಿಧಾನವನ್ನೇ ತಿದ್ದುಪಡಿ ಮಾಡಿದ ರೀತಿಯ ವಿರುದ್ಧ ಇಡೀ ದೇಶ ಪ್ರತಿಭಟಿಸುತ್ತಿದ್ದಾಗ ದೇವರಸ್‌ರವರ ಅಭಿನಂದನೆ!

ಇಂತಹ ವಂಚಕ ರಾಜಿಯನ್ನು ಈ ಹಿಂದೆಯೂ ಮಹಾತ್ಮ ಗಾಂಧಿಯವರ ಹತ್ಯೆಯ ಸಂದರ್ಭದಲ್ಲಿ ಆರ್.ಎಸ್.ಎಸ್. ಮಾಡಿಕೊಂಡಿತ್ತು.

ಮೋಸ, ವಿಶ್ವಾಸಘಾತಕ್ಕೆ ಹೆಸರಾದ ಒಂದು ಸಂಘಟನೆಯಿಂದ ಸಿ.ಪಿ.ಐ.(ಎಂ)ಗೆ ಪ್ರಮಾಣ ಪತ್ರದ ಅವಶ್ಯಕತೆಯೇನಿಲ್ಲ. ಗೃಹಮಂತ್ರಿಗಳು ಇಂತಹ ಆಪಾದನೆ ಹಾಕುತ್ತಿದ್ದರೆ ಅದು ತನ್ನ ಪ್ರಜಾಪ್ರಭುತ್ವ-ವಿರೋಧಿ ಸಂವಿಧಾನ ಬದಲಾವಣೆಗಳನ್ನು ತರಲು ಎಂಬುದು ಸ್ಪಷ್ಟ. ಮತ್ತೊಮ್ಮೆ ಅವರು ಅಧ್ಯಕ್ಷೀಯ ಮಾದರಿ ತನಗೆ ಇಷ್ಟವೆಂದು ಹೇಳಿದ್ದಾರೆ. ವಾಸ್ತವವಾಗಿ ಇದು ಸಂವಿಧಾನದ ಒಂದು ಮೂಲಭೂತ ಲಕ್ಷಣವಾದ ಒಕ್ಕೂಟತತ್ವವನ್ನೆ ಉರುಳಿಸುವ ವ್ಯವಸ್ಥೆ. ಭಾರತೀಯ ಸಂವಿಧಾನ ದೇಶವನ್ನು 'ಭಾರತೀಯ ರಾಜ್ಯಗಳ ಸಂಘ" ಎಂದು ನಿರ್ವಚಿಸಿದೆ ಎಂಬುದನ್ನು ಅವರಿಗೆ ನೆನಪಿಸಬೇಕಾಗಿದೆ. ತದ್ವಿರುದ್ಧವಾಗಿ ಅಧ್ಯಕ್ಷೀಯ ಮಾದರಿ ಅಧಿಕಾರಗಳೆಲ್ಲಾ ಕೇಂದ್ರೀಕೃತವಾಗಿರುವ ಏಕ ಘಟಕ ವ್ಯವಸ್ಥೆ. ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ಭಾರತೀಯ ರಾಷ್ಟ್ರೀಯ ಒಕ್ಕೂಟ ಅಂಶವನ್ನು ನಾಶ ಮಾಡಿ ತಮ್ಮ ರಾಜಕೀಯ ಹಿತಾಸಕ್ತಿಗಳಿಗಾಗಿ ಇಂತಹ ಒಂದು ಬದಲಾವಣೆ ತರಲು ಕಾತುರರಾಗಿದ್ದಾರೆ.


ಬಿ.ಜೆ.ಪಿ. ರಾಷ್ಟ್ರೀಯ ಮಂಡಳಿಯ ಇಡೀ ಕಲಾಪವೇ ಈ ಪಕ್ಷ ಕೇವಲ ಆರ್.ಎಸ್.ಎಸ್.ನ ರಾಜಕೀಯ ಅಂಗವೆಂಬುದನ್ನು ದೃಢಪಡಿಸಿದೆ. ಪ್ರಧಾನ ಮಂತ್ರಿಗಳೂ ಸೇರಿದಂತೆ ಎಲ್ಲಾ ಮುಖಂಡರೂ ತಾವು ಈಗಲೂ, ಮುಂದೆಯೂ ತಮ್ಮ ಕೋಮುವಾದಿ ಅಜೆಂಡಾಕ್ಕೆ ಬದ್ಧರಾಗಿದ್ದೇವೆ ಎಂದು ಸಭಿಕರನ್ನು ನಂಬಿಸಲು ಶ್ರಮಿಸಿದರು. "ನಮ್ಮ ಮೂಲಭೂತ ಸ್ವರೂಪ ಬದಲಾಗುವುದಿಲ್ಲ. ಏಕೆಂದರೆ ಅದು ವಿಚಾರದ (ಹಿಂದೂ ರಾಷ್ಟ್ರ ಎಂದು ಓದಿಕೊಳ್ಳಿ) ಪ್ರಕಾರ ಇದೆ. ಆದರೆ ನಾವು ಕಾರ್ಯತಂತ್ರಗಳನ್ನು ಬದಲಾಗುವ ರಾಜಕೀಯ ಮತ್ತು ಸಾಮಾಜಿಕ ಸನ್ನಿವೇಶಕ್ಕೆ ಅನುಗುಣವಾಗಿ ಬದಲಿಸಲೇಬೇಕಾಗುತ್ತದೆ" ಎಂದು ಅಡ್ವಾಣಿ ಒಪ್ಪಿಕೊಂಡರು. "ಆದರೆ ಇದನ್ನು ನಮ್ಮ ಪಕ್ಷದ ಮೂಲಭೂತ ತತ್ವದ ಬದಲಾವಣೆಯೆಂದಾಗಲೀ, ಅಥವಾ ರಾಜಿಯೆಂದಾಗಲೀ ಪರಿಗಣಿಸಬಾರದು" ಎಂದು ವಾಜಪೇಯಿಯವರು ತಡ ಮಾಡದೆ ಸೇರಿಸಿದರು.

ಹೀಗೆ ಬಿ.ಜೆ.ಪಿ. ತನ್ನ ಇಬ್ಬಂದಿತನದ ಮೂಲಕ ಜನಗಳನ್ನೂ, ತನ್ನ ಮಿತ್ರಪಕ್ಷಗಳನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಲೇ, ತನ್ನ ಕೋಮುವಾದಿ ಅಜೆಂಡಾವನ್ನು ಮುಂದುವರಿಸುತ್ತಿದೆ ಎಂಬುದು ಸ್ಪಷ್ಟ.

ಆಧುನಿಕ ಭಾರತೀಯ ಪ್ರಭುತ್ವದ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಹಾಗೂ ಒಕ್ಕೂಟ ತತ್ವಕ್ಕೆ, ಬಂದಿರುವ ಈ ನೇರ ಧಾಳಿಯನ್ನು ಎದುರಿಸಲು ದೇಶಬಾಂಧವರು ಸಿದ್ಧರಾಗಬೇಕಾಗಿದೆ.

ವಾರದ ವ್ಯಂಗ್ಯಚಿತ್ರ

'ಹಿಂದೂ'ನಲ್ಲಿ ಸುರೇಂದ್ರನ್



ಚೀಣಾ-ವಿರೋಧಿ ಅಜೆಂಡಾದ ರಕ್ಷಣಾ ಮಂತ್ರಿಗಳು ಕೆಳಗಿಳಿಯಬೇಕು

ಫರ್ನಾಂಡೀಸ್‌ರವರು ಚೀಣಾ ವಿರುದ್ಧ ಮತ್ತೆ - ಮತ್ತೆ ಹೇಳಿಕೆಗಳನ್ನು ಕೊಡುತ್ತಿರುವುದರಿಂದ ಹಾಗೂ ಆಪಾದನೆಗಳನ್ನು ಮಾಡುತ್ತಿರುವುದರಿಂದ ಭಾರತ ಮತ್ತು ಚೀಣಾಗಳ ನಡುವೆ ಸಂಬಂಧಗಳನ್ನು ಸಾಮಾನ್ಯಗೊಳಿಸುವ ಪ್ರಕ್ರಿಯೆಯ ಮೇಲೆ ಪ್ರತಿಕೂಲ ಪರಿಣಾಮ ಬಿದ್ದಿದೆ.

ಚೀಣಾದ ವಿರುದ್ಧ ಗಂಭೀರ ಆಪಾದನೆಗಳನ್ನು ಹೊರಿಸಿದ ರಕ್ಷಣಾ ಮಂತ್ರಿಗಳ ... ನಡೆಯುತ್ತಿರುವ ದೇಶದಲ್ಲಿ ಎಲ್ಲರೂ ಒಪ್ಪಿಕೊಂಡಿರುವ ಸಂಬಂಧ ಸುಧಾರಣೆಯ ದಾರಿಗೆ ಅಡ್ಡಿ ಮಾಡಲು ಅವರು ಕಟಿ ಬದ್ಧರಾಗಿದ್ದಾರೆಂಬುದನ್ನು ತೋರಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಫರ್ನಾಂಡೀಸರ ಆಪಾದನೆಗಳನ್ನು ಚೀಣಾ ಮತ್ತು ಮ್ಯಾನ್‌ಮಾರ್ ಸರಕಾರಗಳು ಬಲವಾಗಿ ನಿರಾಕರಿಸಿರುವುದನ್ನು ಹಾಗೂ ಅಮೆರಿಕ ಸರಕಾರ ಕೂಡಾ ಅದನ್ನು ಅನುಮೋದಿಸಿರುವುದರತ್ತ ಗಮನ ಸೆಳೆಯುತ್ತಾ ವಾಜಪೇಯಿ ಸರಕಾರ ರಕ್ಷಣಾಮಂತ್ರಿಗಳ ನಿಲುವಿಗೂ ತನಗೂ ಏನೂ ಸಂಬಂಧವಿಲ್ಲ, ಅವರು ತಮ್ಮದೇ ಚೀಣಾ-ವಿರೋಧಿ ಅಜೆಂಡಾ ಅನುಸರಿಸುತ್ತಿದ್ದಾರೆ ಎಂದು ಸ್ಪಷ್ಟಪಡಿಸಬೇಕು ಎಂದು ಆಗ್ರಹಪಡಿಸಿದೆ. ದೇಶದ ಹಿತಾಸಕ್ತಿಗಳು ಹಾಗೂ ನಮ್ಮ ನೆರೆ ದೇಶಗಳೊಂದಿಗೆ ಗೆಳೆತನದ ಸಂಬಂಧಗಳನ್ನು ಉಳಿಸಿಕೊಳ್ಳಲು ಜಾರ್ಜ್ ಫರ್ನಾಂಡೀಸ್ ಕೇಂದ್ರ ರಕ್ಷಣಾ ಮಂತ್ರಿಯ ಸ್ಥಾನದಿಂದ ಕೆಳಗಿಳಿಯುವುದು ಅನಿವಾರ್ಯ ಎಂದು ಸಿಪಿಐ(ಎಂ) ಹೇಳಿದೆ.

◆

KRNM/BGS-405 MAG(2) PRBDECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು- 27 ಫೋನ್ ನಂ. 2236462,
ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯರಸ್ತೆ, ಗಾಂಧಿನಗರ, ಬೆಂಗಳೂರು-9 ಮುದ್ರಣ: ಕಂಠೀರವ ಆಫ್‌ಸೆಟ್, ನಂ.6, 7ನೇ ಮುಖ್ಯರಸ್ತೆ, ಎಸ್.ಆರ್.ನಗರ, ಬೆಂ.27